# ಅಧ್ಯಾಯ-೦೧

# ಪ್ರಾಸ್ತಾವಿಕ

ಕರ್ನಾಟಕ ರಾಜ್ಯದ ದಕ್ಷಿಣದ ತುತ್ತ ತುದಿಯಲ್ಲಿರುವ ಚಾಮರಾಜನಗರ ಜಿಲ್ಲೆಯು ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಈ ಜಿಲ್ಲೆಯು ಹೊಂದಿರುವ ಐತಿಹಾಸಿಕ ಹಾಗೂ ಭೌಗೋಳಿಕ ಲಕ್ಷಣದ ಆಧಾರದ ಮೇಲೆ ದೇಶದಾದ್ಯಂತ ಹೆಸರುವಾಸಿಯಾಗಿದೆ. ಪೂರ್ವದಲ್ಲಿ ಇತಿಹಾಸ ಪ್ರಸಿದ್ಧ ಮಲೆಮಹದೇಶ್ವರರ ಗದ್ದುಗೆ, ಪಶ್ಚಿಮಕ್ಕೆ ಪುರಾಣ ಪ್ರಸಿದ್ಧಿಯ ದಕ್ಷಿಣ ಗೋವರ್ಧನಗಿರಿ ಹಿಮವದ್ ಗೋಪಾಲಸ್ವಾಮಿ ಮತ್ತು ದಕ್ಷಿಣಕ್ಕೆ ಶ್ರೀ ವೈಷ್ಣವ ಖ್ಯಾತಿಯ ಬಿಳಿಗಿರಿ ರಂಗಸ್ವಾಮಿ ದೇವಾಲಯಗಳಿವೆ. ಜನಪದ ನಾಯಕರಾಗಿ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿ ಸತ್ ಸಂಕಲ್ಪಗಳಿಗೆ ಸದಾ ಪ್ರೇರಣೆ ನೀಡುತ್ತಿರುವ ಮಲೆಯ ಮಹದೇಶ್ವರ, ಮಂಟೇಸ್ವಾಮಿಯಂತಹ ಜಂಗಮಶ್ರೇಷ್ಠರ ಆಡುಂಬೊಲ ಈ ಪ್ರಾಂತ್ಯವಾಗಿದೆ. ಇಲ್ಲಿನ ಜನಪದ ಕಲಾ ಪ್ರಕಾರಗಳಂತೂ ಹೇರಳವಾಗಿವೆ. ನಾಡಿನ ಹಿರಿಯ ಅನುಭಾವಿ ಕವಿ, ಷಟ್‌ಶಾಸ್ತ್ರ ಕೋವಿದ ಶ್ರೀ ನಿಜಗುಣ ಶಿವಯೋಗಿ, ಮಹಾ ಪಂಡಿತ ಕವಿಯೆಂದೇ ಖ್ಯಾತಿವೆತ್ತ ಷಡಕ್ಷರದೇವ, ತತ್ವಪದಕಾರ ಮುಪ್ಪಿನ ಷಡಕ್ಷರಿ, ಸ್ತ್ರೀಯ ಶ್ರೇಷ್ಠತೆಯನ್ನು ಎತ್ತಿ ಹಿಡಿದ ಕವಯಿತ್ರಿ ಸಂಚಿ ಹೊನ್ನಮ್ಮ, ಬಹುಮುಖ ಪ್ರತಿಭೆಯ ಮಲೆಯೂರಿನ ದೇವಚಂದ್ರ, ಪೂಜ್ಯಪಾದರು, ಎರಡನೇ ಅಲ್ಲಮನೆಂದೇ ಖ್ಯಾತಿವೆತ್ತು ತನ್ನ ಏಳುನೂರು ಜನ ಶಿಷ್ಯರೊಡಗೂಡಿ ಇಡೀ ವಚನ ಸಾಹಿತ್ಯವನ್ನು ಸಂಗ್ರಹಿಸಿ, ಪರಿಷ್ಕರಿಸಿ ಪ್ರಚಾರ ಮಾಡಿ ಕೀರ್ತಿತರಾದ ತೋಂಟದ ಸಿದ್ಧಲಿಂಗ ಯತಿ, ನಟ ಸಾರ್ವಭೌಮ ಡಾ ರಾಜಕುಮಾರ್ ಇವರೆಲ್ಲರೂ ಈ ಜಿಲ್ಲೆಯವರಾಗಿದ್ದಾರೆ. ಈ ನೂತನ ಜಿಲ್ಲೆಯು ೧೯೯೭ರಲ್ಲಿ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟು, ರಾಜ್ಯದಲ್ಲಿ ಹೊಸದಾಗಿ ಸ್ಥಾಪಿತವಾದ ಏಳು ಜಿಲ್ಲೆಗಳಲ್ಲಿ ಒಂದಾಗಿದೆ. ಜಿಲ್ಲೆಯು ರೇಷ್ಮೆ, ಶ್ರೀಗಂಧ, ಗ್ರಾನೈಟ್ ಹಾಗೂ ಅರಣ್ಯ ಉತ್ಪನ್ನಗಳಿಗೆ ಹೆಸರಾಗಿದೆ.

## ಹೆಸರಿನ ಹಿನ್ನೆಲೆ

೧೮೧೮ ರವರೆವಿಗೂ ಚಾಮರಾಜನಗರವನ್ನು ಅರಿಕುಠಾರ ಎಂದು ಕರೆಯಲಾಗುತ್ತಿತ್ತು. ಮೂರನೇ ಕೃಷ್ಣರಾಜ ಒಡೆಯರ್‌ರವರ ತಂದೆಯವರಾದ ಚಾಮರಾಜ ಒಡೆಯರ್‌ರವರು ಇಲ್ಲಿ ಜನಿಸಿದ್ದುದರಿಂದ ಅವರ ನೆನಪಿಗಾಗಿ ಇದನ್ನು ಚಾಮರಾಜನಗರವೆಂದು ನಾಮಕರಣಮಾಡಿ, ೧೮೨೮ ರಲ್ಲಿ ಚಾಮರಾಜನಗರ

ದೇವಸ್ಥಾನವನ್ನು ನಿರ್ಮಿಸಲಾಯಿತೆಂದು ತಿಳಿದುಬರುತ್ತದೆ. ಚಾಮರಾಜನಗರವು ೧೮೭೪ ರಿಂದಲೂ ತಾಲೂಕು ಕೇಂದ್ರವಾಗಿದ್ದು ೧೯೯೭ ರಿಂದೀಚೆಗೆ ಜಿಲ್ಲಾ ಕೇಂದ್ರವಾಗಿ ಪರಿವರ್ತನೆಗೊಂಡಿದೆ.

## ವಿಸ್ತೀರ್ಣ ಮತ್ತು ಜನಸಂಖ್ಯೆ

ಮೈಸೂರು ಜಿಲ್ಲೆಯಿಂದ ೧೯೯೭ ರಲ್ಲಿ ಬೇರ್ಪಟ್ಟು ಹೊಸ ಜಿಲ್ಲೆಯಾದ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಗೆ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ಮತ್ತು ಗುಂಡ್ಲುಪೇಟೆ ತಾಲೂಕುಗಳು ಸೇರಿವೆ. ಜಿಲ್ಲೆಯು ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಒಂದಾದ ಮೈಸೂರು ಕಂದಾಯ ವಿಭಾಗಕ್ಕೆ ಸೇರಿದೆ. ೨೦೦೧ರ ಜನಗಣತಿ ವರದಿಯನ್ವಯ ಜಿಲ್ಲೆಯು ೫,೧೦೧ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ಇದು ರಾಜ್ಯದ ವಿಸ್ತೀರ್ಣದಲ್ಲಿ ಶೇ. ೨.೬೬ರಷ್ಟು ಆಗಿರುತ್ತದೆ. ತಾಲೂಕುಗಳ ಪೈಕಿ ೨,೭೮೬ ಚ.ಕಿ.ಮೀ. (ಶೇ. ೪೯) ವಿಸ್ತೀರ್ಣ ಹೊಂದಿರುವ ಕೊಳ್ಳೇಗಾಲ ತಾಲೂಕು ವಿಸ್ತೀರ್ಣದಲ್ಲಿ ಪ್ರಥಮ ಸ್ಥಾನದಲ್ಲಿದ್ದರೆ, ಕೇವಲ ೨೬೬ (ಶೇ. ೪.೭) ಚ.ಕಿ.ಮೀ. ವಿಸ್ತೀರ್ಣ ಹೊಂದಿರುವ ಯಳಂದೂರು ತಾಲೂಕು ಕೊನೆಯ ಸ್ಥಾನದಲ್ಲಿದೆ. ತಾಲೂಕುಗಳ ಸರಾಸರಿ ವಿಸ್ತೀರ್ಣ ೧,೪೧೭ ಚ.ಕಿ.ಮೀ. ಆಗುತ್ತದೆ. ೨೦೧೧ರ ಜನಗಣತಿ(ತಾತ್ಕಾಲಿಕ) ಯನ್ವಯ ಜಿಲ್ಲೆಯು ೫,೧೦೧ ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು ರಾಜ್ಯದ ವಿಸ್ತೀರ್ಣದ ಶೇ ೨.೬೬ ರಷ್ಟು ಭಾಗದಲ್ಲಿ ವಿಸ್ತರಿಸಿದೆ.

ಜನಸಂಖ್ಯೆಯಲ್ಲಿ ರಾಜ್ಯದ ಒಟ್ಟು ೫೨೮.೫೧ ಲಕ್ಷ ಜನರ ಪೈಕಿ ೯.೬೫ ಜನರು ಜಿಲ್ಲೆಯಲ್ಲಿ ವಾಸವಾಗಿದ್ದಾರೆ. ಅವರಲ್ಲಿ ಪುರುಷರು ೪.೮೯ ಲಕ್ಷ ಮತ್ತು ಮಹಿಳೆಯರು ೮.೭೬ ಲಕ್ಷ ಒಟ್ಟು ಜನಸಂಖ್ಯೆಯಲ್ಲಿ ೮.೧೭ ಲಕ್ಷ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಇನ್ನುಳಿದ ೧.೪೮ ಲಕ್ಷ ಜನರು ನಗರ ಪ್ರದೇಶದಲ್ಲಿ ನೆಲೆಸಿದ್ದಾರೆ. ಜನಸಂಖ್ಯೆಯಲ್ಲಿ ೩.೩೮ ಲಕ್ಷ ಜನರು ನೆಲೆಸಿರುವ ಚಾಮರಾಜನಗರ ತಾಲೂಕು ಪ್ರಥಮ ಸ್ಥಾನದಲ್ಲಿದ್ದರೆ, ೭೭,೯೭೧ ಜನರು ವಾಸಿಸುತ್ತಿರುವ ಯಳಂದೂರು ತಾಲೂಕು ಕೊನೆಯ ಸ್ಥಾನದಲ್ಲಿದೆ. ತಾಲೂಕುಗಳ ಸರಾಸರಿ ಜನಸಂಖ್ಯೆ ೨.೪೧ ಲಕ್ಷ ಆಗುತ್ತದೆ. ಜಿಲ್ಲೆಯ ಜನಸಾಂದ್ರತೆ ೧೮೯ ಆಗಿದ್ದು, ರಾಜ್ಯದ ಜನಸಾಂದ್ರತೆಯಲ್ಲಿ (ಒಂದು ಚ.ಕಿ.ಮೀ. ಪ್ರದೇಶದಲ್ಲಿ ವಾಸಿಸುವ ಜನರ ಸಂಖ್ಯೆ) ೨೯೩ ಜನಸಾಂದ್ರತೆ ಹೊಂದಿರುವ ಯಳಂದೂರು ತಾಲೂಕು ಪ್ರಥಮ ಸ್ಥಾನದಲ್ಲಿದ್ದರೆ ೧೨೧ ಜನಸಾಂದ್ರತೆ ಹೊಂದಿರುವ ಕೊಳ್ಳೇಗಾಲ ತಾಲೂಕು ಕೊನೆಯ ಸ್ಥಾನ ಪಡೆದಿದೆ. ಜಿಲ್ಲೆಯಲ್ಲಿ ಪ್ರತಿ ಸಾವಿರ ಪುರುಷರಿಗೆ ೯೬೬ ಸ್ತ್ರೀಯರಿದ್ದಾರೆ. ತಾಲೂಕುವಾರು ಲಿಂಗಾನುಪಾತ ಗಮನಿಸಿದಾಗ ಗುಂಡ್ಲುಪೇಟೆ ತಾಲೂಕು ಪ್ರತಿ ಸಾವಿರ ಪುರುಷರಿಗೆ ಸರಾಸರಿ ೯೮೪ ಸ್ತ್ರೀಯರನ್ನು ಹೊಂದಿದ್ದು ಜಿಲ್ಲೆಯ ಅತಿ ಹೆಚ್ಚು ಲಿಂಗಾನುಪಾತ ಹೊಂದಿರುವ ತಾಲೂಕಾಗಿದೆ. ಕೊಳ್ಳೇಗಾಲ ತಾಲೂಕು ಪ್ರತಿ ಸಾವಿರ ಪುರುಷರಿಗೆ ಸರಾಸರಿ ೯೪೭ ಸ್ತ್ರೀಯರನ್ನು ಹೊಂದಿದ್ದು ಜಿಲ್ಲೆಯ ಕಡಿಮೆ ಲಿಂಗಾನುಪಾತ ಹೊಂದಿರುವ ತಾಲೂಕಾಗಿದೆ. ಜನಸಂಖ್ಯಾ ಬೆಳವಣಿಗೆ ೧೯೯೧–೨೦೦೧ ರ ದಶಕದಲ್ಲಿ ಶೇ ೯.೩ ರಷ್ಟಿದೆ. ಇದನ್ನು ದೇಶದ ಜನಸಂಖ್ಯಾ ಬೆಳವಣಿಗೆ ೧೯೯೧–೨೦೦೧ರ ದಶಕದ ಶೇ. ೨೧.೩೪ ಕ್ಕೆ ಹೋಲಿಸಿದಾಗ ಅತಿ ಕಡಿಮೆ ಇರುವುದು ಗಮನಾರ್ಹ ಅಂಶವಾಗಿದೆ. ಕೋಷ್ಟಕ ೧.೧ ರಲ್ಲಿ ಜಿಲ್ಲೆಯ ವಿಸ್ತೀರ್ಣ ಮತ್ತು ಜನಸಂಖ್ಯೆಯ ವಿವರಗಳನ್ನು ಮತ್ತು ಕೋಷ್ಟಕ ೧.೨ ರಲ್ಲಿ ಹೋಬಳಿಗಳ ವಿವರಗಳನ್ನು ನೀಡಿದೆ.

## ಕೋಷ್ಟಕ ೧.೧: ಜಿಲ್ಲೆಯ ವಿಸ್ತೀರ್ಣ ಮತ್ತು ಜನಸಂಖ್ಯೆ (೨೦೦೧ರ ಜನಗಣತಿಯಂತೆ)

| ಕ್ರ. ಸಂ | ವಿವರ | | ಘಟಕ | ಜಿಲ್ಲೆ | ಗುಂಡ್ಲುಪೇಟೆ | ಚಾ.ರಾ.ನಗರ | ಯಳಂದೂರು | ಕೊಳ್ಳೇಗಾಲ |
|---|---|---|---|---|---|---|---|---|
| ೧. | ಅಕ್ಷಾಂಶ | | | | | | | |
| | | ಇಂದ | | ೭೬°೪೩'೪೯" | ೭೬°೪೩'೪೯" | ೭೬°೪೩'೪೯" | ೭೬°೫೯'೧೩" | ೭೬°೫೮'೧೩" |
| | | ವರೆಗೆ | | ೭೭°೪೬'೪೫" | ೭೬°೫೧'೨೭" | ೭೭°೦೧'೦೯" | ೭೭°೧೧'೦೨" | ೭೭°೪೬'೪೫" |
| ೨. | ರೇಖಾಂಶ | | | | | | | |
| | | ಇಂದ | | ೧೧°೩೫'೩೩" | ೧೧°೩೫'೩೩" | ೧೧°೪೦'೨೨" | ೧೧°೫೩'೧೫" | ೧೧°೪೫'೩೨" |
| | | ವರೆಗೆ | | ೧೨°೧೮'೫೪" | ೧೨°೦೦'೨೨" | ೧೨°೧೦'೩೭" | ೧೨°೦೮'೧೨" | ೧೨°೧೮'೫೪" |
| ೩. | ಸಮುದ್ರ ಮಟ್ಟದಿಂದ ಎತ್ತರ (ಮೀ) | | | | | | | |
| a) | ತಾಲೂಕು ಕೇಂದ್ರ | ಮೀಟರ್ | | | ೮೦೦.೧೬ | ೭೨೨.೨೧ | ೬೫೫.೨೫ | ೬೫೬.೫೮ |
| b) | ತಾಲೂಕು ಪ್ರದೇಶ | ಮೀಟರ್ | | | ೪೫೦–೮೦೦ | ೪೫೦–೮೦೦ | ೪೫೦–೮೦೦ | ೮೦೦–೯೦೦ |
| | | ಮೀಟರ್ | | | ೮೦೦–೯೦೦ | ೮೦೦–೯೦೦ | ೮೦೦–೯೦೦ | ೯೦೦–೧೫೦೦ |
| ೪. | ಜನ ಸಂಖ್ಯೆ | ಒಟ್ಟು | ಒಟ್ಟು | ೯,೬೫,೪೬೨ | ೨,೧೩,೦೮೨ | ೩,೩೭,೫೭೧ | ೭೭,೯೭೧ | ೩,೩೬,೮೩೮ |
| | | | ಪುರುಷರು | ೪,೮೯,೯೪೦ | ೧,೦೭,೩೯೫ | ೧,೭೦,೨೨೫ | ೩೯,೬೬೩ | ೧,೭೨,೬೫೭ |
| | | | ಸ್ತ್ರೀಯರು | ೪,೭೫,೫೨೨ | ೧,೦೫,೬೮೭ | ೧,೬೭,೩೪೬ | ೩೮,೩೦೮ | ೧,೬೪,೧೮೧ |
| | | ಗ್ರಾಮೀಣ | ಒಟ್ಟು | ೮,೧೭,೩೭೨ | ೧,೮೬,೭೪೨ | ೨,೭೭,೦೧೩ | ೬೯,೩೮೬ | ೨,೮೪,೨೩೧ |
| | | | ಪುರುಷರು | ೪,೧೪,೭೮೩ | ೯೩,೯೮೧ | ೧,೩೯,೫೯೩ | ೩೫,೨೬೭ | ೧,೪೫,೯೪೨ |
| | | | ಸ್ತ್ರೀಯರು | ೪,೦೨,೫೮೯ | ೯೨,೭೬೧ | ೧,೩೭,೪೨೦ | ೩೪,೧೧೯ | ೧,೩೮,೨೮೯ |
| | | ನಗರ | ಒಟ್ಟು | ೧,೪೮,೦೯೦ | ೨೬,೩೪೦ | ೬೦,೫೫೮ | ೮,೫೮೫ | ೫೨,೬೦೭ |
| | | | ಪುರುಷರು | ೭೫,೧೫೭ | ೧೩,೪೧೪ | ೩೦,೬೩೨ | ೪,೩೯೬ | ೨೬,೭೧೫ |
| | | | ಸ್ತ್ರೀಯರು | ೭೨,೯೩೩ | ೧೨,೯೨೬ | ೨೯,೯೨೬ | ೪,೧೮೯ | ೨೫,೮೯೨ |
| ೫. | ದಶವಾರ್ಷಿಕ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ೧೯೯೧–೨೦೦೧ | | | | | | | |
| | | | ಶೇ. | ೯.೩ | ೮.೯ | ೮.೪ | ೮.೭ | ೧೦.೬ |
| ೬. | | ವಿಸ್ತೀರ್ಣ | ಚ.ಕಿ.ಮೀ | ೫,೧೦೧.೦೦ | ೧,೩೯೨.೮೮ | ೧,೨೨೬.೬೭ | ೨೬೬.೩೪ | ೨,೭೮೫.೮೨ |
| ೭. | ಜನಸಾಂದ್ರತೆ | | (ಪ್ರತಿ ಚ.ಕಿ.ಮೀ) | ೧೮೯ | ೧೫೩ | ೨೭೫ | ೨೯೩ | ೧೨೧ |
| ೮. | ಲಿಂಗಾನುಪಾತ(ಪ್ರತಿ ೧೦೦೦ ಗಂಡಸರಿಗೆ ಸ್ತ್ರೀಯರು) | | | | | | | |
| | | | | ೯೭೧ | ೯೮೪ | ೯೮೩ | ೯೬೬ | ೯೫೧ |
| ೯. | ಲಿಂಗಾನುಪಾತ (ಆರು ವರ್ಷದ ಕೆಳಗಿನ ಜನಸಂಖ್ಯೆ) ಪ್ರತಿ ೧೦೦೦ ಗಂಡಸರಿಗೆ ಸ್ತ್ರೀಯರು | | | | | | | |
| | | | | ೯೬೪ | ೯೫೮ | ೯೯೮ | ೯೫೪ | ೯೪೧ |
| ೧೦. | ಸಾಕ್ಷರತಾ ಪ್ರಮಾಣ (ಏಳು ವರ್ಷದ ನಂತರದ ಜನಸಂಖ್ಯೆ | | ಒಟ್ಟು | ೫೦.೯ | ೪೯.೪ | ೪೯.೨ | ೪೯.೬ | ೫೩.೯ |
| | | | ಪುರುಷರು | ೫೯.೦ | ೫೯.೧ | ೫೬.೬ | ೫೭.೦ | ೬೧.೯ |
| | | | ಸ್ತ್ರೀಯರು | ೪೨.೫ | ೩೯.೫ | ೪೧.೬ | ೪೨.೦ | ೪೫.೫ |
| ೧೧. | ಒಟ್ಟು ಜನಸಂಖ್ಯೆಯಲ್ಲಿ ನಗರ ಪ್ರದೇಶದ ಜನಸಂಖ್ಯೆ | | ಶೇ. | ೧೫.೩ | ೧೨.೪ | ೧೭.೯ | ೧೧.೦ | ೧೫.೬ |
| ೧೨. | ಒಟ್ಟು ಗ್ರಾಮಗಳ ಸಂಖ್ಯೆ | | | ೫೦೯ | ೧೫೮ | ೧೮೪ | ೨೮ | ೧೩೯ |

**ಕೋಷ್ಟಕ ೧.೨ ತಾಲೂಕುವಾರು ಹೋಬಳಿಗಳ ವಿವರ-೨೦೦೧**

| ತಾಲೂಕು | ಒಟ್ಟು ಗ್ರಾಮಗಳ ಸಂಖ್ಯೆ | ಹೋಬಳಿಗಳ ಹೆಸರು |
|---|---|---|
| ಗುಂಡ್ಲುಪೇಟೆ | ೩೮ | ೧) ಬೇಗೂರು (Begur) |
| | ೩೭ | ೨) ಕಸಬ (Kasaba) |
| | ೩೮ | ೩) ತೆರಕಣಾಂಬಿ (Terakanambi) |
| | ೪೫ | ೪) ಹಂಗಲ (Hangala) |
| ಒಟ್ಟು | ೧೫೮ | |
| ಚಾಮರಾಜನಗರ | ೪೨ | ೧) ಸಂತೆಮಾರಹಳ್ಳಿ (Santhemarahalli) |
| | ೩೩ | ೨) ಕಸಬ (Kasaba) |
| | ೩೯ | ೩) ಹರವೆ (Harve) |
| | ೩೭ | ೪) ಹರದನಹಳ್ಳಿ (Haradanahalli) |
| | ೩೩ | ೫) ಚಂದಕಾವಡಿ (Chandakavadi) |
| ಒಟ್ಟು | ೧೮೪ | |
| ಯಳಂದೂರು | ೧೪ | ೧) ಅಗರ (Agara) |
| | ೧೪ | ೨) ಕಸಬ (Kasaba) |
| ಒಟ್ಟು | ೨೮ | |
| ಕೊಳ್ಳೇಗಾಲ | ೧೯ | ೧) ಪಾಳ್ಯ (Palya) |
| | ೧೯ | ೨) ಕಸಬ (Kasaba) |
| | ೧೫ | ೩) ಲೊಕ್ಕನಹಳ್ಳಿ (Lokkanahalli) |
| | ೧೮ | ೪) ಹನೂರು (Hanur) |
| | ೧೬ | ೫) ರಾಮಪುರ (Ramapura) |
| | ೫೩ | ೬) ಕೊಳ್ಳೇಗಾಲ ವಲಯ ಬೈಲೂರು ಘಟಕ (Kollegal Range Bylore Section) |
| ಒಟ್ಟು | ೧೩೯ | |

ಭಾರತೀಯ ಜನಗಣತಿ ೨೦೧೧ರ (ತಾತ್ಕಾಲಿಕ) ಅಂಕಿ ಅಂಶಗಳನ್ವಯ ರಾಜ್ಯದ ಒಟ್ಟು ೬೧೧.೩೧ ಲಕ್ಷ ಜನರ ಪೈಕಿ ೧೦.೨೧ ಲಕ್ಷ ಜನರು ಜಿಲ್ಲೆಯಲ್ಲಿದ್ದು, ಅವರಲ್ಲಿ ೫.೧೩ ಲಕ್ಷ ಪುರುಷರು ಮತ್ತು ೫.೦೮ ಲಕ್ಷ ಮಹಿಳೆಯರಾಗಿದ್ದಾರೆ. ೨೦೦೧-೨೦೧೧ರ ಅವಧಿಯ ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆ ದರ ೫.೭೫ ಆಗಿದ್ದು, ಅದೇ ಅವಧಿಯ ರಾಜ್ಯದ ಬೆಳವಣಿಗೆಯ ದರ (೧೫.೬೭) ಕ್ಕಿಂತ ಕಡಿಮೆಯಾಗಿದೆ. ಲಿಂಗಾನುಪಾತ (ಪ್ರತಿ ೧೦೦೦ ಪುರುಷರಿಗೆ ಮಹಿಳೆಯರು) ೨೦೦೧ ರಲ್ಲಿ ೯೭೧ ಇದ್ದು ೨೦೧೧ ರಲ್ಲಿ ೯೮೯ಕ್ಕೆ ಏರಿದೆ. ಜನಸಾಂದ್ರತೆಯು ಜಿಲ್ಲೆಯಲ್ಲಿ ೧೮೯ ರಿಂದ ೨೦೦ಕ್ಕೆ ಏರಿದೆ. ರಾಜ್ಯದ ಒಟ್ಟು ೪೧೧.೨೯ ಲಕ್ಷ ಸಾಕ್ಷರರ ಪೈಕಿ ಜಿಲ್ಲೆಯಲ್ಲಿ ೫.೬೬ ಲಕ್ಷ ಸಾಕ್ಷರರಿದ್ದು ಅವರಲ್ಲಿ ೩.೧೫ ಲಕ್ಷ ಪುರುಷರು ಹಾಗೂ ೨.೫೧ ಲಕ್ಷ ಮಹಿಳೆಯರಾಗಿದ್ದಾರೆ. ರಾಜ್ಯದ ಜಿಲ್ಲೆಗಳ ಪೈಕಿ ಜನಸಂಖ್ಯೆಯಲ್ಲಿ ೨೦೦೧ ರಲ್ಲಿ ರಾಜ್ಯದ ಒಟ್ಟು ಜನಸಂಖ್ಯೆಯ ಶೇ.೧.೮೩ ರಷ್ಟು ಜನಸಂಖ್ಯೆಯನ್ನು ಹೊಂದಿ ಜಿಲ್ಲೆಯು ೨೭ನೇ ಸ್ಥಾನದಲ್ಲಿತ್ತು. ೨೦೧೧ ರಲ್ಲಿ ರಾಜ್ಯದ ಒಟ್ಟು ಜನಸಂಖ್ಯೆಯ ಶೇ.೧.೬೭ ರಷ್ಟು ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆಯು ರಾಜ್ಯದ ೩೦ ಜಿಲ್ಲೆಗಳ ಪೈಕಿ ೨೮ನೇ ಸ್ಥಾನಕ್ಕೆ ಕುಸಿದಿದೆ. ಲಿಂಗಾನುಪಾತದಲ್ಲಿ ೯ನೇ ಸ್ಥಾನ, ಜನಸಾಂದ್ರತೆಯಲ್ಲಿ ೨೬ನೇ ಸ್ಥಾನ ಮತ್ತು ಸಾಕ್ಷರರ ಪೈಕಿ ೨೮ನೇ ಸ್ಥಾನವನ್ನು ಪಡೆದಿದೆ.

## ಆಡಳಿತಾತ್ಮಕ ಬದಲಾವಣೆಗಳು

ಸುಮಾರು ನಾಲ್ಕನೆಯ ಶತಮಾನದಲ್ಲಿ ಜಿಲ್ಲೆಯ ಬಹುಭಾಗ ತಲಕಾಡಿನ ಗಂಗರಿಗೆ ಸೇರಿದ್ದು, ಶಿಂಷಾ ಕಣಿವೆಯ ಪ್ರದೇಶಕ್ಕೆ ಚಿಕ್ಕಗಂಗವಾಡಿ ಎಂಬ ಹೆಸರಿತ್ತು. ಒಂಭತ್ತನೇ ಶತಮಾನದ ಪ್ರಾರಂಭದಲ್ಲಿ ಮಳಖೇಡದ ರಾಷ್ಟ್ರಕೂಟರು ಗಂಗರ ಎರಡನೇ ಶಿವಮಾರನನ್ನು ಸೋಲಿಸಿ ಗಂಗವಾಡಿಯ ಪ್ರಾಂತ್ಯಕ್ಕೆ ತಮ್ಮ ಅಧಿಕಾರಿಯನ್ನು ನೇಮಿಸಿದರೂ, ನಂತರ ರಾಜ್ಯವನ್ನು ಗಂಗ ದೊರೆಗೆ ಹಿಂತಿರುಗಿಸಲಾಯಿತು. ಪುನಃ ಹತ್ತನೆಯ ಶತಮಾನದಲ್ಲಿ ಗಂಗರ ಆಳ್ವಿಕೆ ಜಿಲ್ಲೆಯಲ್ಲಿ ನೆಲೆಗೊಂಡರೂ ಗಂಗರ ಕೊನೆಯ ದೊರೆ ರಕ್ಕಸಗಂಗನ ಕಾಲದಲ್ಲಿ ಗಂಗವಾಡಿ ಚೋಳರ ಆಡಳಿತಕ್ಕೆ ಒಳಗಾಯಿತು. ಆಗ ಈ ಪ್ರದೇಶವು ಚೋಳ ರಾಜ್ಯದ ಮುಡಿಗೊಂಡ ಚೋಳಮಂಡಲ ಪ್ರಾಂತ್ಯದ ಭಾಗವಾಗಿತ್ತು. ಶಿವನಸಮುದ್ರ ಹಾಗೂ ಮಳವಳ್ಳಿ ಭಾಗಗಳಿಗೆ ರಾಜೇಂದ್ರಚೋಳವಳನಾಡು ಎಂಬ ಹೆಸರಿತ್ತು. ಹೊಯ್ಸಳ ವಿಷ್ಣುವರ್ಧನನು ತಲಕಾಡನ್ನು ಗೆದ್ದ ನಂತರ ಚಾಮರಾಜನಗರ ಜಿಲ್ಲಾ ಪ್ರದೇಶವು ಹೊಯ್ಸಳರ ರಾಜ್ಯಕ್ಕೆ ಸೇರಿತು. ಮೇಲುಕೋಟೆ ಸಮೀಪ ಇರುವ ತೊಣ್ಣೂರು ಹೊಯ್ಸಳ ವಿಷ್ಣುವರ್ಧನನ ಉಪರಾಜಧಾನಿಯಾಗಿತ್ತೆಂಬ ಹೇಳಿಕೆಯಿದೆ. ಹೊಯ್ಸಳರ ನಂತರ ಈ ಭಾಗ ವಿಜಯನಗರದ ಅರಸರಿಗೆ ಸೇರಿತು. ಆಗ ಈ ಜಿಲ್ಲೆಯ ಹೆಚ್ಚು ಭಾಗ ವಿಜಯನಗರದ ಸಾಮಂತರಾಗಿದ್ದ ನಾಗಮಂಗಲ ಮತ್ತು ಚನ್ನಪಟ್ಟಣದ ಪಾಳೆಯಗಾರರ ಅಧೀನದಲ್ಲಿತ್ತೆಂದು ತಿಳಿದುಬರುತ್ತದೆ. ೧೪೫೪ ರಲ್ಲಿ ನಾಗಮಂಗಲದ ತಿಮ್ಮ ಒಡೆಯನು ವಿಜಯನಗರದ ಅರಸರ ಅಪ್ಪಣೆ ಪಡೆದು ಶ್ರೀರಂಗಪಟ್ಟಣದ ಕೋಟೆಯನ್ನು ಕಟ್ಟಿಸಿದನು. ಮುಂದೆ ೧೬ನೆಯ ಶತಮಾನದಿಂದ ೧೭ನೆಯ ಶತಮಾನದ ಆರಂಭದವರೆಗೂ ವಿಜಯನಗರದ ರಾಜಪ್ರತಿನಿಧಿ ಶ್ರೀರಂಗಪಟ್ಟಣದಲ್ಲಿ ನೆಲೆಸಿದ್ದರು. ಮುಂದೆ ೧೬೧೦ ರಲ್ಲಿ ಮೈಸೂರಿನ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ಆಕ್ರಮಿಸಿ ಅದನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದಲ್ಲದೆ, ಈಗಿನ ಚಾಮರಾಜನಗರ ಜಿಲ್ಲೆಯ ಬಹುಭಾಗವನ್ನು ಸಂಸ್ಥಾನಕ್ಕೆ ಸೇರಿಸಿಕೊಂಡ ನಂತರ ಈ ಪ್ರದೇಶ ಮೈಸೂರು ಸಂಸ್ಥಾನದಲ್ಲಿ ಮುಂದುವರೆಯಿತು. ಶ್ರೀರಂಗಪಟ್ಟಣವು ಚಿಕ್ಕದೇವರಾಯರ ಆಡಳಿತದ ಅವಧಿಯಲ್ಲಿ ಪ್ರಖ್ಯಾತವಾಗಿತ್ತು.

ಹೈದರಾಲಿಯು ೧೭೬೧ ರಿಂದ ೨೧ ವರ್ಷಗಳ ಕಾಲ ಸರ್ವಾಧಿಕಾರಿಯಾಗಿ ಆಳ್ವಿಕೆ ನಡೆಸಿದನು. ಆಗ ಅವನ ಆಳ್ವಿಕೆಯಲ್ಲಿದ್ದ ಪ್ರದೇಶವನ್ನು ಪ್ರಮುಖವಾಗಿ ಎರಡು ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಮೊದಲನೇ ವಿಭಾಗವು ಬಾರಾಮಹಲ್‌ಗಳನ್ನು ಸೇರಿದ ಘಟ್ಟದ ಕೆಳಗಿನ ಪಯನ್ ಘಾಟ್ ಪ್ರದೇಶ, ಸೇಲಂ ಮತ್ತು ಈರೋಡ್‌ಗಳನ್ನು ಒಳಗೊಂಡಿತ್ತು. ಎರಡನೆಯ ವಿಭಾಗವು ಘಟ್ಟದ ಮೇಲಿನ ಪ್ರದೇಶಗಳಾದ ಮೈಸೂರು, ಶ್ರೀರಂಗಪಟ್ಟಣ, ಬೆಂಗಳೂರು, ಕೋಲಾರ, ಬಿದನೂರು/ಹೈದರ್‌ನಗರ ಮತ್ತು ಚಿತ್ರದುರ್ಗ ಪ್ರದೇಶಗಳನ್ನು ಒಳಗೊಂಡ ಬಾಲಘಾಟ್ ಪ್ರದೇಶವಾಗಿತ್ತು. ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ಮೇಲಿನ ಎರಡು ವಿಭಾಗಗಳನ್ನು ಅಷ್ಟಗ್ರಾಮ ಫೌಜುದಾರಿ, ಬೆಂಗಳೂರು, ಮಧುಗಿರಿ, ಚಿತ್ರದುರ್ಗ, ನಗರ ಮತ್ತು ಮಂಜರಾಬಾದ್ ಎಂದು ಪುನರ್ ವಿಂಗಡಿಸಲಾಯಿತು. ಟಿಪ್ಪುಸುಲ್ತಾನನ ಕಾಲದಲ್ಲಿ ರಾಜ್ಯವನ್ನು ಮೂರು ಪ್ರಮುಖ ಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಅ) ಸುಭಾಯಂ(ಸಮುದ್ರ)– ಕರಾವಳಿ ಪ್ರದೇಶ, ಆ) ಸುಭಾ ತರಂ– ಬೆಟ್ಟಗುಡ್ಡಗಳು ಹಾಗೂ ಕಾಡುಗಳಿಂದ ಆವೃತ್ತವಾದ ನಗರ/ಪಟ್ಟಣ ಪ್ರದೇಶಗಳು ಮತ್ತು ಇ) ಸುಭಾ ಗುಬ್ರ(ಭೂಮಿ)– ಬಯಲು/ ಮೈದಾನ ಪ್ರದೇಶ. ಟಿಪ್ಪುವು ೧೭೮೨ ರಿಂದ ೧೭೯೯ ರವರೆಗೆ ಅಧಿಕಾರದಲ್ಲಿದ್ದು, ಅವನ ಮರಣಾನಂತರ (೧೭೯೯) ಮರಾಠರು, ನಿಜಾಮರು ಹಾಗೂ ಬ್ರಿಟಿಷರ ನಡುವೆ ಆದ ಒಪ್ಪಂದದಂತೆ (೨೨–೬–೧೭೯೯) ಕೆನರಾ, ಕೊಯಮತ್ತೂರು ಮತ್ತು ವೈನಾಡು ಜಿಲ್ಲಾ ಪ್ರದೇಶಗಳು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಗೆ, ಗೂಟಿ ಪ್ರದೇಶ ನಿಜಾಮರಿಗೆ, ಹರಪನಹಳ್ಳಿ, ಹರಿಹರ ಹಾಗೂ ಸೊಂಡ(ಸಂಡೂರು) ಪ್ರದೇಶ ಮರಾಠರಿಗೆ ಹಾಗೂ ಉಳಿದ ಮೈಸೂರು ಪ್ರದೇಶವನ್ನು ರಾಜಮನೆತನದ ಒಡೆಯರಿಗೆ ನೀಡಲಾಯಿತು. ಮುಮ್ಮಡಿ ಕೃಷ್ಣರಾಜ

ಒಡೆಯರ್ ಅವರನ್ನು ೩೦-೬-೧೭೯೯ ರಲ್ಲಿ ಮೈಸೂರು ಅರಸರನ್ನಾಗಿ ಮಾಡಿ, ಮೈಸೂರನ್ನು ಆಡಳಿತದ ಕೇಂದ್ರವನ್ನಾಗಿ ಮಾಡಲಾಯಿತು.

೧೭೯೯ರಲ್ಲಿ ಶ್ರೀರಂಗಪಟ್ಟಣ ಪ್ರದೇಶವು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಒಡೆತನಕ್ಕೆ ಬಂದಾಗ ಶ್ರೀರಂಗಪಟ್ಟಣದ ಕೋಟೆಯನ್ನು ಬ್ರಿಟಿಷ್ ಸೈನ್ಯದ ವಶಕ್ಕೆ ನೀಡಿ ಅದನ್ನು ಸೈನ್ಯದ (ಸಬ್ಸಿಡಿಯರಿ ದಳ-ಸಹಾಯಕ ಸೈನ್ಯ ದಳ) ಕೇಂದ್ರವನ್ನಾಗಿ ಮಾಡಲಾಯಿತು. ೧೮೦೫ ರವರೆಗೆ ಕರ್ನಲ್ ಆರ್ಥರ್ ವೆಲ್ಲೆಸ್ಲಿ ಸೈನ್ಯದ ಅಧಿಪತಿಯಾಗಿದ್ದನು. ಶ್ರೀರಂಗಪಟ್ಟಣದ ದರಿಯಾ ದೌಲತ್ ಕರ್ನಲ್‌ನ ವಾಸಸ್ಥಳವಾಗಿದ್ದಿತು. ಪ್ರವಾಸಿಗ ಬುಕಾನನ್ ಅಂದಾಜಿನಂತೆ. ಶ್ರೀರಂಗಪಟ್ಟಣದ ಜನಸಂಖ್ಯೆಯು ೧.೫ ಲಕ್ಷ ಇದ್ದದ್ದು ೧೮೦೦ ರಲ್ಲಿ ೩೨ ಸಾವಿರಕ್ಕೆ ಇಳಿಯಿತು. ಶ್ರೀರಂಗಪಟ್ಟಣದ ಪ್ರತಿಕೂಲ ವಾತಾವರಣದಲ್ಲಿರಲು ಬ್ರಿಟೀಷ್ ಸೈನಿಕರು ಅಸಮಾಧಾನಗೊಂಡಿದ್ದರಿಂದ ೧೮೦೯ ರಿಂದ ೧೮೧೧ರ ಅವಧಿಯಲ್ಲಿ ಸೈನ್ಯದ ಕೇಂದ್ರ ಸ್ಥಾನವನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. ಜತೆಗೆ ಶ್ರೀರಂಗಪಟ್ಟಣದಲ್ಲಿ ಒಂದು ತುಕಡಿ ಸೈನ್ಯ ಹಾಗೂ ಈರೋಡ್, ಫ್ರೆಂಚ್‌ರಾಕ್ಸ್ (ಪಾಂಡವಪುರ) ಗಳಲ್ಲಿ ಸೈನ್ಯದ ಕೆಲವು ತುಕಡಿಗಳನ್ನು ನೆಲೆಗೊಳಿಸಲಾಯಿತು. ಶ್ರೀರಂಗಪಟ್ಟಣದಲ್ಲಿದ್ದ ಸೈನ್ಯದ ತುಕಡಿ ಹಾಗೂ ಬಂದೂಕಿನ ಗುಂಡುಗಳ ತಯಾರಿಕಾ ಕೇಂದ್ರವನ್ನು ೧೮೩೦ ರಲ್ಲಿ ಆಗಿನ ಮದ್ರಾಸ್‌ನ ಸೈಂಟ್ ಜಾರ್ಜ್‌ಗೆ ಸ್ಥಳಾಂತರಿಸಲಾಯಿತು. ಇದರೊಂದಿಗೆ ಶ್ರೀರಂಗಪಟ್ಟಣವು ರಾಜಕೀಯವಾಗಿ ಮೂಲೆಗುಂಪಾಯಿತು.

ಆಡಳಿತದ ಹಿತದೃಷ್ಟಿಯಿಂದ ೧೮೬೯ರಲ್ಲಿ ಮೈಸೂರು ಜಿಲ್ಲೆಯನ್ನು ೧೪ ತಾಲೂಕುಗಳಾಗಿ ವಿಂಗಡಿಸಲಾಗಿತ್ತು. ಅವುಗಳ ವಿವರ ಕೆಳಕಂಡಂತೆ ಇದ್ದಿತು.

| ಕ್ರ.ಸಂ | ತಾಲೂಕು | ವಿಸ್ತೀರ್ಣ(ಚ.ಮೈ)/ಚ.ಕಿ.ಮೀ | ಜನಸಂಖ್ಯೆ |
|---|---|---|---|
| ೧. | ಮೈಸೂರು | ೪೩೬/೧,೧೭೯ | ೯೯,೫೮೯ |
| ೨. | ಚಾಮರಾಜನಗರ | ೩೪೨/೮೮೬ | ೭೬,೬೨೨ |
| ೩. | ಪಟ್ಟಣ ಅಷ್ಟಗ್ರಾಮ (ಶ್ರೀರಂಗಪಟ್ಟಣ ದ್ವೀಪವೂ ಸೇರಿದಂತೆ) | ೨೦೦/೫೧೮ | ೬೭,೧೭೭ |
| ೪. | ಪಿರಿಯಾಪಟ್ಟಣ | ೫೨೪/೧,೩೫೭ | ೮೭,೫೮೭ |
| ೫. | ಯಡತೊರೆ (ಕೆ.ಆರ್ ನಗರ) | ೨೪೬/೬೩೭ | ೩೯,೦೮೨ |
| ೬. | ಹೆಗ್ಗಡದೇವನಕೋಟೆ | ೫೪೪/೧,೪೦೯ | ೪೦,೩೦೦ |
| ೭. | ಗುಂಡ್ಲುಪೇಟೆ | ೫೮/೧೫೦ | ೪೬,೬೬೯ |
| ೮. | ನಂಜನಗೂಡು | ೩೧೮/೮೨೪ | ೪೨,೮೫೬ |
| ೯. | ಮೈಸೂರು ಅಷ್ಟಗ್ರಾಮ | ೧೭೧/೪೪೩ | ೩೪,೪೧೦ |
| ೧೦. | ತಲಕಾಡು | ೨೬೭/೬೯೨ | ೫೮,೯೫೦ |
| ೧೧. | ಮಂಡ್ಯ | ೨೪೮/೬೪೨ | ೪೫,೧೯೯ |
| ೧೨. | ಮದ್ದೂರು | ೧೯೨/೪೯೭ | ೩೨,೧೯೩ |
| ೧೩. | ಮಳವಳ್ಳಿ | ೨೫೪/೬೫೮ | ೫೨,೮೧೦ |
| ೧೪. | ಯಳಂದೂರು (ಜಹಗೀರು | ೯೫/೨೪೬ | ೨೩,೧೨೪ |
| | **ಒಟ್ಟು** | **೪,೪೯೫/೧೧,೬೪೨** | **೭,೪೬,೫೬೮** |

ಮೇಲಿನ ಒಟ್ಟು ೧೪ ತಾಲೂಕುಗಳ ಪೈಕಿ ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಯಳಂದೂರು ಜಹಗೀರು ತಾಲೂಕುಗಳು ಈಗಿನ ಚಾಮರಾಜನಗರ ಜಿಲ್ಲೆಗೆ ಸೇರಿವೆ. ಈ ನಡುವೆ ೧೮೮೨ರಲ್ಲಿ ಆದ ಆಡಳಿತಾತ್ಮಕ ಬದಲಾವಣೆಗಳಲ್ಲಿ ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳನ್ನು ರದ್ದುಗೊಳಿಸಲಾಯಿತು. ಹಾಸನ ಜಿಲ್ಲೆಯ ಅರಕಲಗೂಡು, ಚನ್ನರಾಯಪಟ್ಟಣ, ನಾಗಮಂಗಲ, ಮತ್ತು ಅತ್ತಿಗುಪ್ಪೆ (ಈಗಿನ ಕೃಷ್ಣರಾಜಪೇಟೆ) ತಾಲೂಕುಗಳನ್ನು ಮೈಸೂರು ಜಿಲ್ಲೆಗೆ ಸೇರಿಸಲಾಯಿತು. ಹತ್ತು ಹೋಬಳಿಗಳನ್ನು ಒಳಗೊಂಡಿದ್ದ, ಅರಕಲಗೂಡು ತಾಲೂಕನ್ನು ೧೮೮೨ರಲ್ಲಿ ರದ್ದುಗೊಳಿಸಿ, ಸದರಿ ಹೋಬಳಿಗಳನ್ನು ನೆರೆಯ ತಾಲೂಕುಗಳಿಗೆ ವರ್ಗಾಯಿಸಲಾಯಿತು. ಪಟ್ಟಣ ಅಷ್ಟಗ್ರಾಮದ ಹೆಸರನ್ನು ಅದೇ ವರ್ಷ ಶ್ರೀರಂಗಪಟ್ಟಣವೆಂದು ಬದಲಾಯಿಸಲಾಯಿತು. ಕಿಕ್ಕೇರಿ ಹೋಬಳಿಗೆ ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲೂಕುಗಳಿಂದ ಕೆಲವು ಗ್ರಾಮಗಳನ್ನು ವರ್ಗಾಯಿಸಲಾಯಿತು. ಮೇಲುಕೋಟೆ ಹೋಬಳಿಯನ್ನು ಶ್ರೀರಂಗಪಟ್ಟಣ ತಾಲೂಕಿಗೂ, ಸಂತೇಬಾಚಹಳ್ಳಿ ಹೋಬಳಿಯ ಕೆಲವು ಗ್ರಾಮಗಳನ್ನು ನಾಗಮಂಗಲ ತಾಲೂಕಿಗೂ ವರ್ಗಾಯಿಸಲಾಯಿತು. ಫ್ರೆಂಚ್‌ರಾಕ್ಸ್(ಹಿರೋಡೆ), ಕ್ಲೋಸ್‌ಪೇಟೆ(ರಾಮನಗರ), ಸಾಗರ ಮತ್ತು ಚಿಕ್ಕಬಳ್ಳಾಪುರ ಉಪ ವಿಭಾಗಗಳನ್ನು ೧೮೮೨ರಲ್ಲಿ ರಚಿಸಲಾಯಿತು.

ಈಗಿನ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ತಾಲೂಕು, ಗುಂಡ್ಲುಪೇಟೆ ತಾಲೂಕು ಹಾಗೂ ಯಳಂದೂರು (ಜಹಗೀರು), ೧೮೮೬ರಲ್ಲಿ ರಚಿತವಾದ ಮೈಸೂರು ಜಿಲ್ಲೆಯ ಭಾಗವಾಗಿದ್ದವು. ಅವುಗಳ ವಿವರಗಳನ್ನು ಮುಂದೆ ನೀಡಿದೆ.

| ಕ್ರ. ಸಂ. | ತಾಲೂಕು | ವಿಸ್ತೀರ್ಣ ಚ.ಕಿ.ಮೀ. | ಹೋಬಳಿಗಳ ಸಂಖ್ಯೆ | ಗ್ರಾಮಗಳ ಸಂಖ್ಯೆ | ಜನಸಂಖ್ಯೆ (೧೮೯೧) |
|---|---|---|---|---|---|
| ೧. | **ಚಾಮರಾಜನಗರ ತಾ॥** | ೧,೨೪೦.೬೦ | ೧೦ | ೧೭೯ | ೯೧,೨೫೦ |
| ೨. | **ಗುಂಡ್ಲುಪೇಟೆ ತಾ॥** | ೧,೪೦೮.೯೫ | ೦೬ | ೧೭೯ | ೬೩,೦೩೬ |
| ೩. | **ಯಳಂದೂರು ತಾ॥** | ೨೬೪.೧೮ | ೦೪ | ೨೬ | ೩೧,೭೫೪ |

ಹಾಸನ ಜಿಲ್ಲೆಯನ್ನು ೧೮೮೬ರಲ್ಲಿ ಪುನರ್ ರಚಿಸಲಾಯಿತು. ಪುನರ್ ರಚನೆಗೊಂಡ ಅರಕಲಗೂಡು ತಾಲೂಕಿಗೆ ಅರಕಲಗೂಡು, ಬಸವಾಪಟ್ಟಣ, ಕೊಣನೂರು, ಕೃಷ್ಣರಾಜಪೇಟೆ, ಮಲ್ಲಿಪಟ್ಟಣ ಮತ್ತು ಮರೂರು ಹೋಬಳಿಗಳನ್ನು ಸೇರಿಸಲಾಯಿತು. ಅರಕಲಗೂಡು ಮತ್ತು ಚನ್ನರಾಯಪಟ್ಟಣ ತಾಲೂಕುಗಳನ್ನು ಹಾಸನ ಜಿಲ್ಲೆಗೆ ವರ್ಗಾಯಿಸಲಾಯಿತು. ನಾಗಮಂಗಲ ಮತ್ತು ಅತ್ತಿಗುಪ್ಪೆ ತಾಲೂಕುಗಳನ್ನು ಮೈಸೂರು ಜಿಲ್ಲೆಯಲ್ಲಿ ಉಳಿಸಿಕೊಳ್ಳಲಾಯಿತು. ಫ್ರೆಂಚ್‌ರಾಕ್ಸ್ ಉಪ ತಾಲೂಕನ್ನು ೧೮೯೮ರ ನಂತರ ರಚಿಸಲಾಯಿತು. ನಂತರ ೧೯೨೩ರಲ್ಲಿ ಅದನ್ನು ರದ್ದುಗೊಳಿಸಿ ಕ್ಯಾತನಹಳ್ಳಿ, ಪಾಂಡವಪುರ ಮತ್ತು ಕಸಬ ಹೋಬಳಿಗಳ ಜೊತೆಗೆ ಮೇಲುಕೋಟೆ ಉಪ ತಾಲೂಕನ್ನು ಶ್ರೀರಂಗಪಟ್ಟಣ ತಾಲೂಕಿಗೆ ಸೇರಿಸಲಾಯಿತು. ಅತ್ತಿಗುಪ್ಪೆಗೆ ೧೮೯೧ರಲ್ಲಿ ಕೃಷ್ಣರಾಜಪೇಟೆ ಎಂದು ನಾಮಕರಣ ಮಾಡಲಾಯಿತು. ಮೈಸೂರು ಜಿಲ್ಲೆಯಲ್ಲಿ ೧೯೩೦ರಲ್ಲಿ ೧೩ ತಾಲೂಕುಗಳು ಹಾಗೂ ಒಂದು ಉಪ ತಾಲೂಕು ಇದ್ದವು. ಅವುಗಳೆಂದರೆ–ನಂಜನಗೂಡು ಉಪವಿಭಾಗಕ್ಕೆ ಸೇರಿದ ನಂಜಗೂಡು, ಚಾಮರಾಜನಗರ, ಗುಂಡ್ಲುಪೇಟೆ, ಮತ್ತು ತಿರುಮಕೂಡಲು ನರಸೀಪುರ ತಾಲೂಕುಗಳು, ಮೈಸೂರು ಉಪ ವಿಭಾಗಕ್ಕೆ ಸೇರಿದ ಮೈಸೂರು, ಹುಣಸೂರು, ಹೆಗ್ಗಡದೇವನಕೋಟೆ ಮತ್ತು ಯಡತೊರೆ ತಾಲೂಕುಗಳು, ಹಾಗೂ ಫ್ರೆಂಚ್‌ರಾಕ್ಸ್ ಉಪವಿಭಾಗಕ್ಕೆ ಸೇರಿದ ಶ್ರೀರಂಗಪಟ್ಟಣ, ಮಂಡ್ಯ, ಮಳವಳ್ಳಿ, ನಾಗಮಂಗಲ ಮತ್ತು ಕೃಷ್ಣರಾಜಪೇಟೆ ತಾಲೂಕುಗಳು. ಈ ನಡುವೆ ಮಂಡ್ಯ, ಮಳವಳ್ಳಿ ಹಾಗೂ ಮದ್ದೂರು ತಾಲೂಕುಗಳನ್ನು

ಒಳಗೊಂಡ ಮಂಡ್ಯ ಉಪವಿಭಾಗವನ್ನು ೧೯೨೮ರಲ್ಲಿ ರಚಿಸಲಾಯಿತು. ೧೯೩೯ರಲ್ಲಿ ಮೈಸೂರು ಜಿಲ್ಲೆಗೆ ಸೇರಿದ್ದ ತಾಲೂಕುಗಳ ವಿವರ ಮುಂದಿನ ಕೋಷ್ಟಕ ೧.೩ ರಲ್ಲಿ ನೀಡಿದೆ.

**ಕೋಷ್ಟಕ ೧.೩ ಮೈಸೂರು ಜಿಲ್ಲೆಯಲ್ಲಿದ್ದ ತಾಲೂಕುಗಳ ವಿವರ(೧೯೩೯)**

| ೧ | ೨ | ೩ |
|---|---|---|
| ೧. | **ಮೈಸೂರು** | ಮೈಸೂರು, |
| | | ಹುಣಸೂರು, |
| | | ಹೆಗ್ಗಡದೇವನಕೋಟೆ |
| | | ಕೃಷ್ಣರಾಜನಗರ(ಯಡತೋರೆ) ಮತ್ತು ಪಿರಿಯಪಟ್ಟಣ ಉಪ ತಾಲೂಕು |
| ೨. | **ನಂಜನಗೂಡು** | ನಂಜನಗೂಡು |
| | | ಗುಂಡ್ಲುಪೇಟೆ |
| | | ಚಾಮರಾಜನಗರ |
| | | ತಿರುಮಕೂಡಲು ನರಸೀಪುರ ಮತ್ತು ಯಳಂದೂರು ಜಹಗೀರು |
| ೩. | **ಫ್ರೆಂಚ್‌ರಾಕ್ಸ್ (ಪಾಂಡವಪುರ)** | ಶ್ರೀರಂಗಪಟ್ಟಣ |
| | | ಫ್ರೆಂಚ್‌ರಾಕ್ಸ್ |
| | | ನಾಗಮಂಗಲ |
| | | ಕೃಷ್ಣರಾಜಪೇಟೆ |
| ೪. | **ಮಂಡ್ಯ** | ಮಂಡ್ಯ |
| | | ಮಳವಳ್ಳಿ |
| | | ಮದ್ದೂರು |

ಮೈಸೂರು ಜಿಲ್ಲೆಯನ್ನು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳೆಂದು ೧೯೩೯ರ ಜುಲೈ ೧ ರಂದು ವಿಭಜಿಸಲಾಯಿತು. ಮಂಡ್ಯ ಜಿಲ್ಲೆಗೆ ಮಂಡ್ಯ ಮತ್ತು ಫ್ರೆಂಚ್‌ರಾಕ್ಸ್ ಉಪವಿಭಾಗಗಳ ಏಳು ತಾಲೂಕುಗಳನ್ನು ಸೇರಿಸಲಾಯಿತು. ಉಳಿದ ಎಂಟು ತಾಲೂಕುಗಳು ಮೈಸೂರು ಜಿಲ್ಲೆಯಲ್ಲಿಯೇ ಉಳಿದುಕೊಂಡವು. ೧೯೫೬ರ ರಾಜ್ಯ ಪುನರ್ವಿಂಗಡಣಾ ಕಾಯಿದೆಯ ಪ್ರಕಾರ ಕೊಯಮತ್ತೂರು ಜಿಲ್ಲೆಗೆ ಸೇರಿದ್ದ ಕೊಳ್ಳೇಗಾಲ ತಾಲೂಕನ್ನು ಮೈಸೂರು ಜಿಲ್ಲೆಗೆ ವರ್ಗಾಯಿಸಲಾಯಿತು. ಕೊಳ್ಳೇಗಾಲ ತಾಲೂಕಿನ ವಿಸ್ತೀರ್ಣ ೨,೭೮೬ ಚ.ಕಿ.ಮೀ. ಆಗಿದ್ದಿತು. ೧೯೯೭ ರಲ್ಲಿ ಮೈಸೂರು ಜಿಲ್ಲೆಯಿಂದ ಪ್ರತ್ಯೇಕಿಸಿ ಹೊಸದಾಗಿ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಮತ್ತು ಯಳಂದೂರು ತಾಲೂಕುಗಳನ್ನೊಳಗೊಂಡ ಚಾಮರಾಜನಗರ ಜಿಲ್ಲೆಯನ್ನು ರಚಿಸಲಾಯಿತು.

ಚಾಮರಾಜನಗರ ಜಿಲ್ಲೆಯನ್ನು ೨೦೦೧ ರಲ್ಲಿದ್ದಂತೆ ಆಡಳಿತಾತ್ಮಕವಾಗಿ ಒಂದು ಕಂದಾಯ ವಿಭಾಗ(ಕೊಳ್ಳೇಗಾಲ)ವನ್ನಾಗಿಯೂ ಮತ್ತು ನಾಲ್ಕು ತಾಲೂಕುಗಳನ್ನಾಗಿಯೂ ವಿಂಗಡಿಸಲಾಗಿದೆ. ೨೦೦೧ರ ಜನಗಣತಿ ವರದಿ ಪ್ರಕಾರ ಜಿಲ್ಲೆಯಲ್ಲಿ ೪೨೪ ಜನವಸತಿ ಗ್ರಾಮಗಳು, ಎರಡು ನಗರಸಭೆ, ಒಂದು ಪುರಸಭೆ ಹಾಗೂ ಎರಡು ಪಟ್ಟಣ ಪಂಚಾಯತಿಗಳು ಇರುತ್ತವೆ. ವಿವರಗಳನ್ನು ಮುಂದೆ ನೀಡಿದೆ.

| ಕ್ರ.ಸಂ | ತಾಲೂಕು | ವಿಸ್ತೀರ್ಣ (ಚ.ಕಿ. ಮೀ) | ಜನಸಾಂದ್ರತೆ (ಪ್ರತಿ ಚ.ಕಿ.ಮೀ.ಗೆ ಜನಸಂಖ್ಯೆ) | ಗ್ರಾಮಗಳ ಸಂಖ್ಯೆ | | ನಗರ/ಪಟ್ಟಣಗಳ ಸಂಖ್ಯೆ |
|---|---|---|---|---|---|---|
| | | | | ಜನವಸತಿ ಇರುವ | ಜನವಸತಿ ಇಲ್ಲದಿರುವ | |
| ೧. | **ಗುಂಡ್ಲುಪೇಟೆ** | ೧೩೯೨.೮೮ | ೧೫೩ | ೧೪೦ | ೧೮ | ೦೧ |
| ೨. | **ಚಾಮರಾಜನಗರ** | ೧೨೨೬.೬೭ | ೨೭೫ | ೧೭೧ | ೧೩ | ೦೧ |
| ೩. | **ಯಳಂದೂರು** | ೨೬೬.೩೪ | ೨೯೩ | ೨೮ | – | ೦೧ |
| ೪. | **ಕೊಳ್ಳೇಗಾಲ** | ೨೭೮೫.೮೨ | ೧೨೧ | ೮೫ | ೫೪ | ೦೨ |
| | **ಜಿಲ್ಲಾ ಮೊತ್ತ** | **೫೧೦೧.೦೦** | **೧೮೯** | **೪೨೪** | **೮೫** | **೦೫** |

*ಆಧಾರ: ಚಾಮರಾಜನಗರ ಜಿಲ್ಲೆಯ ಅಂಕಿಅಂಶಗಳ ನೋಟ. ೨೦೦೬–೦೭ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಚಾಮರಾಜನಗರ*

**೧೯೯೧ ಮತ್ತು ೨೦೦೧ ರ ಜನಗಣತಿಯನ್ವಯ ದಾಖಲಾದ ಗ್ರಾಮಗಳು ಹಾಗೂ ಪಟ್ಟಣಗಳು**

| ಕ್ರಮ ಸಂಖ್ಯೆ | ತಾಲೂಕು | ಗ್ರಾಮಗಳು ೨೦೦೧ | ಗ್ರಾಮಗಳು ೧೯೯೧ | ಪಟ್ಟಣಗಳು ೨೦೦೧ | ಪಟ್ಟಣಗಳು ೧೯೯೧ |
|---|---|---|---|---|---|
| ೧ | **ಗುಂಡ್ಲುಪೇಟೆ** | ೧೫೮ | ೧೫೮ | ೧ | ೧ |
| ೨ | **ಚಾಮರಾಜನಗರ** | ೧೮೪ | ೧೮೮ | ೧ | ೧ |
| ೩ | **ಯಳಂದೂರು** | ೨೮ | ೨೬ | ೧ | ೧ |
| ೪ | **ಕೊಳ್ಳೇಗಾಲ** | ೧೩೯ | ೧೪೦ | ೧ | ೨ |
| | **ಒಟ್ಟು** | **೫೦೯** | **೫೧೨** | **೪** | **೫** |

## ಜಿಲ್ಲೆಯ ಭೂ ಸ್ವರೂಪ

ಕರ್ನಾಟಕ ರಾಜ್ಯದ ಬಹು ಭಾಗವು, ಸಾಗರ ಮಟ್ಟದಿಂದ ೪೫೦ ರಿಂದ ೯೦೦ ಮೀಟರುಗಳ ಎತ್ತರದಲ್ಲಿದೆ. ಆದರೆ ಕೆಲ ಸ್ಥಳಗಳ ಎತ್ತರವು ೧,೮೦೦ ಮೀಟರುಗಳಿಗಿಂತಲೂ ಹೆಚ್ಚಾಗಿದೆ. ಸಾಮಾನ್ಯ ಅರ್ಥದಲ್ಲಿ ಕರ್ನಾಟಕವು ಪ್ರಸ್ಥಭೂಮಿ ಎಂದು ಬಣ್ಣಿಸಲ್ಪಟ್ಟರೂ ಅದರ ಭೂಮಿಯ ಮೇಲ್ಮೈ ಸಮತಟ್ಟಾಗಿಲ್ಲ. ಈ ಪ್ರಸ್ಥಭೂಮಿಯ ಬೇರೆ ಬೇರೆ ಪ್ರದೇಶಗಳಲ್ಲಿ ಹರಿಯುವ ಅಸಂಖ್ಯಾತ ಹಳ್ಳಗಳು, ೩೦೦ ಮೀಟರುಗಳಷ್ಟು ಆಳವಾಗಿರುವ ಕಣಿವೆಗಳು, ಮಹಾಕಂದರಗಳು ಅಚ್ಚರಿಯನ್ನುಂಟುಮಾಡುವಷ್ಟು ಒರಟೊರಟಾಗಿರುವ ಶಿಲಾ ಶೈಲಮಾಲೆಗಳು ಈ ಮಾತಿಗೆ ಉದಾಹರಣೆಗಳಾಗಿವೆ. ಭೂಮಿಯ ಇಳಿಜಾರಿನ ಪ್ರಮಾಣವು ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಿದ್ದು ಕೆಲವೆಡೆ ಒಂದು ಕಿ.ಮೀ.ಗೆ ಎರಡರಿಂದ ಐದು ಮೀ. ಇನ್ನೂ ಕೆಲವೆಡೆ ೨೦ಮೀಗಳಿಗಿಂತ ಹೆಚ್ಚು ಇಳುಕಲಾಗಿದೆ. ಸಾಮಾನ್ಯವಾಗಿ ಉತ್ತರ ದಕ್ಷಿಣವಾಗಿ ಹಬ್ಬಿಕೊಂಡಿರುವ ಸಣ್ಣ ಸಣ್ಣ ಗುಡ್ಡಗಳ ಸಮೂಹಗಳು ರಾಜ್ಯದ ಉದ್ದಗಲಕ್ಕೂ ಇವೆ. ಚಾಮರಾಜನಗರ ಜಿಲ್ಲಾ ಪ್ರದೇಶವು ರಾಜ್ಯದ ಕೆಳಕಂಡ ವಿಭಾಗಕ್ಕೆ ಸೇರಿದೆ.

**ಬಯಲುನಾಡು:** ರಾಜ್ಯದ ಈ ಪ್ರದೇಶದ ಏರಿಳಿವ ಭೂಸ್ವರೂಪ ಮತ್ತು ವಿಶಾಲ ತಳಗಳುಳ್ಳ ಕಣಿವೆಗಳಿರುವ ವೈಶಿಷ್ಟ್ಯದಿಂದ ಕೂಡಿದೆ. ಬಯಲು ಪ್ರದೇಶವು ತುಲನಾತ್ಮಕವಾಗಿ ಮಟ್ಟಸವಾದ ಮೇಲ್ಮೈ ಉಳ್ಳಂತಹ ಪ್ರದೇಶವಾಗಿದ್ದು, ಇದು ಉತ್ತರದಲ್ಲಿ ೪೫೦ ರಿಂದ ೬೬೦ ಮೀಟರುಗಳಷ್ಟು ಉನ್ನತವಾಗಿದ್ದರೆ ದಕ್ಷಿಣದಲ್ಲಿ ೯೦೦ ರಿಂದ ೧೨೦೦ ಮೀಟರುಗಳಷ್ಟು ಉನ್ನತವಾಗಿವೆ. ದಕ್ಷಿಣದ ಬಯಲುನಾಡಿನ ಮೈದಾನವು ಹೆಚ್ಚಿನ ಪ್ರಮಾಣದ ಇಳುಕಲಾಗಿದ್ದು ೬೫೦ ಮೀ. ಸಮೋನ್ನತ ರೇಖೆಯಿಂದ ಆವೃತವಾಗಿದೆ. ಪಶ್ಚಿಮದ ಸರಣಿಯಂತೆ ಕರ್ನಾಟಕದ ದಕ್ಷಿಣ ಗಡಿಯ ನೀಲಗಿರಿ ಶ್ರೇಣಿಯಿಂದ ಒಂದು ಬೆಟ್ಟಗಳ ಸಾಲು ಮಲೆನಾಡಿನಲ್ಲಿರುವಂತೆ

ಉತ್ತರಕ್ಕೆ ಹಬ್ಬಿದೆ. ಈ ಪೂರ್ವದ ಸರಣಿ ಬಿಳಿಗಿರಿ ರಂಗನ ಬೆಟ್ಟದಲ್ಲಿ ಎದ್ದು ಕಾಣುವಂತಿದ್ದು ೧೬ ರಿಂದ ೩೯ ಕಿ.ಮೀ. ಗಳಷ್ಟು ಅಗಲವಾಗಿದ್ದು ಪಾವಗಡದವರೆಗೂ ಹಬ್ಬಿದೆ. ಇದು ಒಂದೇ ನಿರಂತರ ಪರ್ವತ ಸರಣಿಯಂತೆ ಕಾಣುವ ಬದಲು ಚದುರಿದ ಗುಂಪುಗಳಾಗಿ ರೂಪಿತವಾಗಿದೆ. ಗುಣಮಣಿ, ವಿಕ್ರಮಗಿರಿ, ಬಿಳಿಗಿರಿ ರಂಗನಬೆಟ್ಟ, ಮೂಡುಮಲ್ಯೆ ಬೆಟ್ಟ ಇವೆಲ್ಲವೂ ಪಶ್ಚಿಮಘಟ್ಟದಿಂದ ಹೊರಟ ಕಾವೇರಿಯ ದಕ್ಷಿಣದ ಪರ್ವತ ಶ್ರೇಣಿಯ ಮುಖ್ಯ ಶಿಖರಗಳಾಗಿದ್ದು ಸುಮಾರು ೧,೨೦೦ ಮೀ.ಗಳಿಗಿಂತ ಹೆಚ್ಚು ಎತ್ತರವಾದ ಸಮತಟ್ಟಾದ ಭೂಪ್ರದೇಶದ ಸೃಷ್ಟಿಗೆ ಕಾರಣವಾಗಿವೆ. ಇವು ಮೋಯಾರ್ ಕಣಿವೆಯಿಂದಾಗಿ ನೀಲಗಿರಿ ಪರ್ವತಾವಳಿಗಳಿಂದ ಬೇರ್ಪಟ್ಟಿವೆ. ಭೂಸ್ವರೂಪದ ಆವಿಷ್ಕರಣಗಳು ಮತ್ತಿತರ ನೈಸರ್ಗಿಕ ಅಂಶಗಳಾದ ಮಣ್ಣು ಮತ್ತು ವಾಯುಗುಣ ಜೊತೆಗೂಡಿ ವಿವಿಧ ಬಗೆಯ ವಾಸಯೋಗ್ಯ ಭೌಗೋಳಿಕ ಭೂಸ್ವರೂಪಗಳನ್ನು ಸೃಷ್ಟಿಸಿವೆ. ಈ ನೈಸರ್ಗಿಕ ಅಂಶಗಳ ಪರಸ್ಪರ ಸಂಬಂಧಗಳು ಪ್ರಾದೇಶಿಕ ಅರ್ಥ ವ್ಯವಸ್ಥೆಯನ್ನು ಮೂಲಭೂತವಾಗಿ ರೂಪಿಸುತ್ತವೆ.

ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ ಹರಡಿರುವ ಮಲ್ಯೆ ಮಹದೇಶ್ವರ ಗಿರಿಶ್ರೇಣಿ ಪೂರ್ವ ಭಾಗ, ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟಸಾಲು ಪಶ್ಚಿಮ ಘಟ್ಟಗಳ ಭಾಗ, ಈ ಎರಡೂ ಘಟ್ಟಗಳನ್ನು ಸೇರಿಸುವ ಕೊಂಡಿಯಂತಿವೆ. ಚಾಮರಾಜನಗರ ಮತ್ತು ಯಳಂದೂರು ತಾಲೂಕುಗಳಲ್ಲಿ ಬಿಳಿಗಿರಿ ರಂಗಸ್ವಾಮಿ ಬೆಟ್ಟ ಹಾಗೂ ಬೇಡಗುಳಿ ಬೆಟ್ಟ ಶ್ರೇಣಿಗಳು ವಿಸ್ತರಿಸಿವೆ. ಬೇಡಗುಳಿ ಬೆಟ್ಟದ ಶಿಲಾ ರಚನೆ ಅತ್ಯಂತ ಪ್ರಾಚೀನವಾದುದೆಂಬುದು ತಜ್ಞರ ಅಭಿಪ್ರಾಯವಾಗಿದೆ. ಆದುದರಿಂದ ಇಲ್ಲಿನ ಜೀವಸಂಕುಲಗಳು ಅತಿ ಪ್ರಾಚೀನ ಕಾಲದಿಂದಲೂ ವಿಕಸನ ಹೊಂದಿ ಹೆಚ್ಚು ವೈವಿಧ್ಯತೆಯನ್ನು ಮೆರೆಯುತ್ತವೆ. ಅಲ್ಲದೇ ಪೂರ್ವ ಮತ್ತು ಪಶ್ಚಿಮ ಘಟ್ಟಗಳಿಗೆ ಸೀಮಿತವಾದ ಹಲವಾರು ಸಸ್ಯಗಳು ಹಾಗೂ ಪ್ರಾಣಿಗಳು ಇಲ್ಲಿ ಒಟ್ಟಿಗೆ ಜೀವಿಸಿರುವುದು ವೈಶಿಷ್ಟ್ಯವಾಗಿದೆ.

## ಭೂಶಿಲಾ ಲಕ್ಷಣ

ಭಾರತದ ಪರ್ಯಾಯ ದ್ವೀಪದ ಪಶ್ಚಿಮ-ಮಧ್ಯಭಾಗದಲ್ಲಿರುವ ಕರ್ನಾಟಕವು, ಹೆಚ್ಚಾಗಿ ಹಸುರುಗಲ್ಲುಗಳ ವಲಯಗಳು, ಉತ್ತಮ ದರ್ಜೆಯ ಪದರ ಶಿಲೆಗಳು (schist) ಮತ್ತು ವಿಸ್ತಾರವಾದ ಮಿಗ್ನಟೈಟಿಕ್ ನೈಸ್ (mignatitic gneisses) ಗಳಿಂದ ಕೂಡಿರುವ ಚಾರ್ನೊಕೈಟ್‌ಗಳನ್ನು ಹೊಂದಿದೆ. ರಾಜ್ಯದ ಹೆಚ್ಚಿನ ಶಿಲೆಗಳು ಬಹಳ ಪುರಾತನವಾದುವು. ಅರಬ್ಬೀ ಸಮುದ್ರದಿಂದ ಆವೃತವಾಗಿರುವ ರಾಜ್ಯದ ಪಶ್ಚಿಮ ತೀರ ಪ್ರದೇಶದ ಅಂಚು ಈಚೆಗೆ ರೂಪು ಹೊಂದಿದ ಮತ್ತು ಅದಕ್ಕೂ ನಂತರದ ತೆಳುವಾದ ಶಿಲಾ ಸ್ತರದಿಂದ ಹೊದೆಯಲ್ಪಟ್ಟಿದೆ. ಕಶೇರುಕ ಮತ್ತು ಅಕಶೇರುಕಗಳ ವಿಕಾಸದ ಪಳೆಯುಳಿಕೆಗಳನ್ನು ಹೊಂದಿರುವ ಭಾರೀ ದಪ್ಪನಾದ ಶಿಲಾಸ್ತರಗಳು ಕರ್ನಾಟಕದಲ್ಲಿ ಇಲ್ಲ. ೧೮೯೪ರಲ್ಲೇ ಸ್ಥಾಪಿತವಾದ ಮೈಸೂರು ರಾಜ್ಯದ ಭೂ ವಿಜ್ಞಾನ ಇಲಾಖೆಯು ಭಾರತದ ಭೂ ವಿಜ್ಞಾನ ಇಲಾಖೆಗಳಲ್ಲಿ ತೀರ ಹಳೆಯದು. "ದಿ ರೆಕಾರ್ಡ್ಸ್ ಆ್ಯಂಡ್ ಮೆಮೊಯರ್ಸ್ ಆಫ್ ದಿ ಸ್ಟೇಟ್ ಡಿಪಾರ್ಟ್‌ಮೆಂಟ್ ಆಫ್ ಮೈನ್ಸ್ ಆ್ಯಂಡ್ ಜಿಯಾಲಜಿ" ಎಂಬ ಪ್ರಕಟಣೆಯಲ್ಲಿ ಮೈಸೂರು ರಾಜ್ಯದ ವಿವಿಧ ಭಾಗಗಳ ಭೂಶಿಲಾ ಲಕ್ಷಣಗಳ ವಿಶದವಾದ ಮಾಹಿತಿ ಮತ್ತು ಅವುಗಳ ಭೂ ಗರ್ಭ ಕೂಡ ಕಾಣಸಿಗುತ್ತದೆ. ಹಳೆಯ ಮೈಸೂರು ರಾಜ್ಯದಲ್ಲಿ ೧"=೮ ಮೈಲಿ (೧ : ೫೦೦,೦೦೦) ಪ್ರಮಾಣದಲ್ಲಿ ತಯಾರಾದ ಮೊದಲನೇ ಭೂವಿನ್ಯಾಸದ ನಕ್ಷೆ ೧೯೧೫ರಲ್ಲಿ ಪ್ರಕಟವಾಯಿತು. ಅತಿ ಹೆಚ್ಚಿನ ವಿವರಗಳನ್ನು ಬಹು ಸಮರ್ಪಕವಾಗಿ ತೋರಿಸುವ ಈ ನಕ್ಷೆ ಈಗಲೂ ಪ್ರತಿಸ್ಪರ್ಧಿಯಿಲ್ಲದ ಆಧಾರಯುತವಾದ ನಕ್ಷೆಯಾಗಿ ಉಳಿದಿದೆ. ಭಾರತದ ಭೂವಿಜ್ಞಾನ ಸರ್ವೇಕ್ಷಣದವರು ಬೆಂಗಳೂರಿನಲ್ಲಿ ೧೯೬೧ರಲ್ಲಿ ಪ್ರಾದೇಶಿಕ ಕಚೇರಿಯನ್ನು ಆರಂಭಿಸಿದರು. ಕರ್ನಾಟಕದ ಭೂವಿನ್ಯಾಸದ ನಕ್ಷೆಯನ್ನು ೧ : ೧೦,೦೦,೦೦೦ದ ಪ್ರಮಾಣದಲ್ಲಿ ೧೯೭೧ರಲ್ಲಿ ಹೊರ

ತರಲಾಯಿತು. ಇನ್ನೂ ಹೆಚ್ಚಿನ ವಿವರಗಳನ್ನೊಳಗೊಂಡ ನಕ್ಷೆಯನ್ನು ೧:೫,೦೦,೦೦೦ ಆಕಾರದಲ್ಲಿ ೧೯೮೧ರಲ್ಲಿ ಪ್ರಕಟಿಸಲಾಯಿತು.

**ಪದರ ರಚನೆ ಮತ್ತು ವಿಂಗಡಣೆ:** ಭೂಗರ್ಭದ ಘಟನೆಗಳು ಒಂದು ಕಥೆಯಂತಿವೆ ಮತ್ತು ಶಿಲಾ ರಚನೆಯನ್ನು ವಿವಿಧ ಭಾಗಗಳನ್ನಾಗಿ ಪ್ರತ್ಯೇಕಿಸಿ ಅಧ್ಯಯನ ಮಾಡುವುದರಿಂದ ಭೂಗರ್ಭದ ಇತಿಹಾಸವನ್ನು ಉತ್ತಮವಾಗಿ ಪುನರ್ ರಚಿಸಬಹುದು. ಭೂಗರ್ಭದ ಉತ್ತಮವಾದ ಅಧ್ಯಯನಕ್ಕೆ ಕ್ರಮವಾದ ಘಟನೆಗಳು ಮತ್ತು ಈ ಘಟನೆಗಳನ್ನು ಅಳವಡಿಸುವ ಒಂದು ಚೌಕಟ್ಟಿನ ರಚನೆ ಅತಿ ಮುಖ್ಯವಾದುದು. ಉಲ್ಕಾ ಶಿಲೆಗಳು ಮತ್ತು ಚಾಂದ್ರ ಶಿಲೆಗಳ ವಯಸ್ಸನ್ನು ೪೬೦ ಕೋಟಿ ವರ್ಷಗಳು ಎಂದೂ ಮತ್ತು ಭೂಮಿಯು ಅದೇ ವಯಸ್ಸಿನದೆಂದೂ ಲೆಕ್ಕ ಹಾಕಲಾಗಿದೆ. ಪ್ರಪಂಚದಾದ್ಯಂತ ಖನಿಜ ವಸ್ತುಗಳ ವಯಸ್ಸಿನ ಅಂಕಿ ಅಂಶಗಳನ್ನು ನೋಡಿದರೆ ಭೂಮಿಯಲ್ಲಿ ಶಿಲೆಗಳು ಉಂಟಾದ ಪ್ರಸಂಗಗಳನ್ನು ೩೮೦ ರಿಂದ ೩೫೦, ೨೯೦ ರಿಂದ ೨೬೦, ೧೯೦ ರಿಂದ ೧೬೦, ೧೨೦ ರಿಂದ ೯೦ ಮತ್ತು ೬೦ ಕೋಟಿ ವರ್ಷಗಳವೆಂದು ತಿಳಿಯಬಹುದು. ಭೂಖಂಡದ ಮೇಲ್ಭಾಗದ ಮೊದಲನೇ ಪದರಿನ ವಿಂಗಡಣೆಯು ಸುಮಾರು ೩೮೦ ರಿಂದ ೩೫೦ ಕೋಟಿ ವರ್ಷಗಳಲ್ಲಿ ಆಗಿದೆಯೆಂದು ಹೇಳಬಹುದು. ಅಷ್ಟು ಹಳೆಯದಾದ ಶಿಲೆಗಳು ಕರ್ನಾಟಕದಲ್ಲಿ ಮಾತ್ರ ದೊರೆತಿಲ್ಲ. ಪರ್ಯಾಯ ದ್ವೀಪದ ನೈಸಿನ (gneisses) ಸಂಕೀರ್ಣದ ವಯಸ್ಸನ್ನು ೩೦೦–೨೬೦ ಕೋಟಿ ವರ್ಷಗಳೆಂದು ಗುರುತಿಸಲಾಗಿದೆ ಮತ್ತು ಈ ಅವಧಿಯಲ್ಲಿ ವಿಶೇಷವಾಗಿ ಗ್ರಾನೈಟ್ ಜಾತಿಯ ಶಿಲೆಗಳು ರೂಪುಗೊಂಡು ಭೂ ಭಾಗ ರಚಿತವಾಯಿತು, ಎಂದು ಗುರುತಿಸಲಾಗಿದೆ.

**ಪುರಾತನ (೩೦೦ ಕೋಟಿ ವರ್ಷಗಳ) ಹಸುರುಗಲ್ಲುಗಳು:** ಹಳೆಯ ಶಿಲೆಗಳ (ಹಸುರುಗಲ್ಲು) ವಲಯಗಳನ್ನು ಆಧರಿಸಿರುವ ತಳಪಾಯದ ಹಂತವನ್ನು ಗುರುತಿಸಲಾಗಿಲ್ಲ. ಮಿಗ್ಮಟೈಟಿಕ್ ನೈಸುಗಳು (migmatitic gneisses) ಇನ್ನೂ ಹಳೆಯ ಮೇಫಿಕ್ (mafic) ಶಿಲೆಗಳ ಹೊದಿಕೆಯನ್ನು ತೋರಿಸುವುದರಿಂದ ಪ್ರಾರಂಭದ ಪದರಗಳು ರಚನೆಯಲ್ಲಿ ಮೇಫಿಕ್ ಸ್ವರೂಪದ್ದಾಗಿದ್ದುವೆಂದು ತರ್ಕಿಸುತ್ತಾರೆ. ಇನ್ನೊಂದೆಡೆ ಇತ್ತೀಚೆಗೆ ತಿಳಿದಿರುವಂತೆ ಪುರಾತನ ಕಾಲಗಳೆಲ್ಲ ನೈಸ್ ಶಿಲೆಗಳವು. ಜಲಜ (sedimentary) ಶಿಲೆಯ ಹಳೆಯ ಗುಂಪಿನ ಶಿಲಾನಿಕ್ಷೇಪ ಮುಖಗಳು (ಸರಗೂರು ಶಿಲಾ ಮೇಲ್ಪದರ) ಸಿಯಾಲಿಕ್ (sialic) ಅಡಿಪಾಯವಿರುವುದನ್ನು ಸೂಚಿಸುತ್ತವೆ.

**ಸರಗೂರು ಮೇಲು ಹೊದಿಕೆ ಶಿಲೆಗಳು:** ನೈಸ್‌ಗಳಿಂದ ಆವೃತವಾದ ಉದ್ದವಾದ ಎಳೆಗಳಿಂದ ಕೂಡಿರುವ ಶಿಷ್ಟೋಸ್ (schistose) ಶಿಲೆಗಳು ರಾಜ್ಯದ ಅತ್ಯಂತ ಹಳೆಯ ಶಿಲಾ ನಿರ್ಮಾಣವಾಗಿದ್ದು ಅದಕ್ಕೆ ಧಾರವಾಡ ಶಿಲಾಸ್ತೋಮ ಎಂದು ಇತ್ತೀಚಿನವರೆಗೆ ಕರೆಯಲಾಗುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ದಕ್ಷಿಣ ಭಾಗಗಳಲ್ಲಿ ದೊರೆಯುತ್ತಿರುವ ಉತ್ತಮ ದರ್ಜೆಯ ರೂಪಾಂತರ ಶಿಲೆಗಳನ್ನು ಪ್ರತ್ಯೇಕಿಸಿ ಅವನ್ನು ಇನ್ನೂ ಹಳೆಯ ಶಿಲಾಸ್ತೋಮಗಳೆಂದು ವಿಂಗಡಿಸಲಾಗಿದೆ. ಮೈಸೂರು ಜಿಲ್ಲೆಯ ಸರಗೂರಿನ ಬಳಿ ಇವುಗಳ ಸರಿಯಾದ ಬೆಳವಣಿಗೆ ಮತ್ತು ಕಾಪಾಡುವಿಕೆ ಕಂಡು ಬಂದಿರುವುದರಿಂದ ಈ ಶಿಲೆಗಳಿಗೆ ಸರಗೂರು ಶಿಲೆಗಳು ಎಂದು ಕರೆಯಲಾಗಿದೆ. ಪ್ರಾರಂಭದ ಆರ್ಷೇಯ ಜೀವಕಲ್ಪದ ಕಾಲದಲ್ಲಿ ಸಣ್ಣ ಗಾತ್ರದ ಆಳ ಕಿರಿದಾದ ಕಣಿವೆಗಳ ಬೆಳವಣಿಗೆಯೇ ಇದರ ಮುಖ್ಯ ಲಕ್ಷಣವಾಗಿದೆ. ಈ ಶಿಲೆಗಳು ಸಂಕುಚಿತವಾದ ಎಳೆಗಳಿರುವ ಉಪ ಸಮಾನಾಂತರದ ಲಯಗಳಾಗಿಯೂ ಉತ್ತಮ ಮೇಲು ಹೊದಿಕೆಯ ಪದರುಗಳುಳ್ಳ ಲೆಂಟಿಕ್ಯುಲರ್ ಜೋಡಣೆಗಳಾಗಿಯೂ ಮಿಗ್ಮಟೈಟಕ್ ನೈಸಿನ ಸಂಕಿರಣದೊಂದಿಗೆ ತೆಕ್ಕೆಬಿದ್ದಿವೆ.

ಸರಗೂರು ಪದರ ಶಿಲೆಗಳು ಹೆಚ್ಚಾಗಿ ಮೆಟಾಆಲ್ಟ್ರಾ ಮೇಫಿಕ್‌ಗಳು ಮತ್ತು ಮೆಟಾ–ಬೆಸಾಲ್ಟ್‌ಗಳ ಜೊತೆಗೆ ಬೆಣಚುಕಲ್ಲುಗಳು, ಕಾರ್ಬೋನೇಟುಗಳು ಮತ್ತು ಅಲ್ಯೂಮಿನಿಯಂ ಭಸ್ಮದಂಥ ಚರಟಗಳಿಂದ ಕೂಡಿವೆ. ಪ್ರತಿಯೊಂದು ವಲಯವೂ ಹಲವಾರು ವೈವಿಧ್ಯಗಳನ್ನು ತೋರಿದರೂ ಇವುಗಳ ಒಟ್ಟಿನ ಗುಣಲಕ್ಷಣಗಳು ಒಂದೇ ಆಗಿವೆ. ಇವುಗಳ ರೂಪಾಂತರವೂ ಮೇಲ್ಪದರದ ಆ್ಯಂಫಿಬೋಲೈಟಿನಿಂದ ತಳದ ಗ್ಯಾನುಲೈಟ್‌ವರೆಗೆ ಇರುತ್ತದೆ. ಈ ಗುಂಪಿನಲ್ಲಿರುವ ಶಿಲೆಗಳು ಹೆಚ್ಚಾಗಿ ಮಿಗ್ಮಟೈಸ್ ಆಗಿವೆ. ಅನಾರ್ಥೊಸೈಟ್ ಮತ್ತು ಅನಾರ್ಥೊಸೈಟಕ್ ಗಾಬ್ರೊಗಳ ಮಸೂರಗಳು ಇವುಗಳಲ್ಲಿ ಧಾರಾಳವಾಗಿವೆ. ಬೆಣಚುಕಲ್ಲುಗಳು ಅನೇಕ ಸಲ ಫುಕ್ಸೈಟುಗಳಾಗಿವೆ ಮತ್ತು ಕೆಲವೆಡೆ ಕ್ರೋಮೈಟ್‌ಗಳ ಪದರಗಳು ಅವುಗಳಲ್ಲಿ ಹುದುಗಿವೆ.

**ಪೆನಿನ್ಸುಲರ್ ನೈಸ್ ಸಂಕೀರ್ಣ:** ಕರ್ನಾಟಕ ರಾಜ್ಯದ ಹೆಚ್ಚಿನ ಭಾಗವು ಅನೇಕ ವಿಧದ ಮತ್ತು ವಯಸ್ಸಿನ ಗ್ರಾನೈಟು ಮತ್ತು ನೈಸುಗಳ ಬೃಹತ್ ಸಂಕೀರ್ಣದಿಂದ ಕೂಡಿದೆ. ಇವುಗಳನ್ನು ಒಟ್ಟಾಗಿ 'ಪೆನಿನ್ಸುಲರ್ ನೈಸಿಕ್ ಕಾಂಪ್ಲೆಕ್ಸ್' ಎಂದು ಕರೆಯಲಾಗಿದೆ; ಹೆಚ್ಚಾಗಿ ಅವುಗಳು ವರ್ಗೀಕರಿಸಲಟ್ಟಿಲ್ಲ. ಅವು ಗ್ರಾನೈಟ್, ಗ್ರಾನೋಡಯಾರೈಟ್ಸ್, ನೈಸಿಕ್ ಗ್ರಾನೈಟ್ಸ್, ಪಟ್ಟಿಯಿರುವ ನೈಸ್ ಮತ್ತು ಮಿಗ್ಮಟೈಟ್ ಶಿಲೆಗಳನ್ನು ಒಳಗೊಂಡಿವೆ. ಪೆನಿನ್ಸುಲರ್ ನೈಸುಗಳೂ ತೋರಿಸಿರುವ ಬದಲಾವಣೆಗಳು ಮೊದಲೇ ಇದ್ದ ಮೇಫಿಕ್ ಮತ್ತು ಆಲ್ಟ್ರಾ ಮೇಫಿಕ್ ಘಟಕಗಳು ಮತ್ತು ಪ್ರಾರಂಭದ ಹಸುರುಗಲ್ಲುಗಳ ವಲಯದಲ್ಲಿ ಹೊಂದಿಕೊಂಡಿರುವ ಜಲಜ ಶಿಲೆಗಳ ಮಿಶ್ರಣ ಮತ್ತು ಅಂತರ ಕ್ರಿಯೆಗಳ ಪರಿಣಾಮದಿಂದಾಗಿವೆ.

## ಬೆಟ್ಟಗಳು

ಚಾಮರಾಜನಗರ ಜಿಲ್ಲೆಯು ಪೂರ್ವದಲ್ಲಿ ಪೂರ್ವಘಟ್ಟಗಳಿಂದಲೂ ಮತ್ತು ಪಶ್ಚಿಮ ಘಟ್ಟಗಳಿಂದಲೂ ಸುತ್ತುವರೆಯಲ್ಪಟ್ಟಿದೆ. ಈ ಎರಡೂ ಘಟ್ಟಗಳೂ ಸಂಧಿಸುವ ಭಾಗದಲ್ಲಿ ವೈವಿಧ್ಯಮಯವಾದ ಮತ್ತು ಅತ್ಯಮೂಲ್ಯವಾದ ಗಿಡಮೂಲಿಕೆಗಳನ್ನೊಳಗೊಂಡಿರುವ ಬೆಟ್ಟಗಳ ಸರಣಿಯನ್ನು ಕಾಣಬಹುದು. ಈ ಪ್ರದೇಶವು ನೀಲಗಿರಿ ಅಭಯಾರಣ್ಯಕ್ಕೆ ಸೇರುತ್ತದೆ. ಜಿಲ್ಲೆಯು ಸಮತಟ್ಟಾದ ಹಾಗೂ ಏರುತಗ್ಗಿನಿಂದ ಕೂಡಿದ ಅರಣ್ಯ ಹಾಗೂ ಬೆಟ್ಟಗುಡ್ಡಗಳ ಶ್ರೇಣಿಯನ್ನು ಹೊಂದಿದೆ. ಮೈದಾನ ಪ್ರದೇಶಗಳು ಜನವಸತಿ ಹಾಗೂ ವ್ಯವಸಾಯಕ್ಕೆ ಉಪಯೋಗಿಸಲ್ಪಟ್ಟಿದೆ. ಕಪ್ಪು ಶಿಲೆಯನ್ನು ಹೇರಳವಾಗಿ ಹೊಂದಿರುವ ಈ ಜಿಲ್ಲೆಯಲ್ಲಿ ಕರಿಕಲ್ಲಿನ ಕ್ವಾರಿಗಳು ಪ್ರಮುಖ ಗಣಿಗಾರಿಕೆಯಾಗಿದೆ.

ಜಿಲ್ಲೆಯ ಪೂರ್ವಘಟ್ಟಗಳ ಸರಣಿಗಳ ಪ್ರಮುಖವಾದ ಬೆಟ್ಟಗಳಲ್ಲಿ ಬಿಳಿಗಿರಿಬೆಟ್ಟದ ಸರಣಿಯು ಒಂದಾಗಿದೆ. ಇದು ಸುಮಾರು ೧೬ ಕಿ.ಮೀ.ಗಳಷ್ಟು ಉದ್ದವಾಗಿದ್ದು ಉತ್ತರ–ದಕ್ಷಿಣವಾಗಿ ಹಬ್ಬಿದೆ. ಇದು ಸಮುದ್ರಮಟ್ಟದಿಂದ ಸುಮಾರು ೫೫೩೫ ಅಡಿ/೧೬೮೭ ಮೀ.ಗಳಿಗಿಂತಲೂ ಹೆಚ್ಚು ಎತ್ತರವಾದ ಬೆಟ್ಟಗಳನ್ನು ಹೊಂದಿದೆ. ಅವುಗಳಲ್ಲಿ ಬಿಳಿಗಿರಿ ರಂಗನಾಥ ದೇವಾಲಯವಿರುವ ಬಿಳಿಗಿರಿರಂಗನಬೆಟ್ಟ (೪,೧೧೦ ಅಡಿ/೧೨೫೨.೭ ಮೀ) ಚಿಕ್ಕಂಗಿರಿ ಬೆಟ್ಟ (೫೦೯೪ ಅಡಿ/೧೫೫೨.೭ ಮೀ), ಹೊನ್ನಾನೆಟ್ಟಿಕಲ್ ಬೆಟ್ಟ (೫೮೧೮ ಅಡಿ/೧೭೭೩.೨೭ ಮೀ), ಪೊನ್ನಾಚಿ ಬೆಟ್ಟ (೪೮೮೮ ಅಡಿ/೧,೪೯೦ ಮೀ), ಕತ್ತರಿ ಬೆಟ್ಟ ೫೯೫೮ ಅಡಿ/೧,೮೧೬ ಮೀ), ಹೊನಬೆರ್ರ ಬೆಟ್ಟ (೫೪೦೦ ಅಡಿ/೧,೬೪೬ ಮೀ), ಕತ್ತಟಿ ಬೆಟ್ಟ (೩೩೬೦ ಅಡಿ/೧,೦೨೪ ಮೀ), ಮತ್ತು ಹೆತ್ತನ ಬೆಟ್ಟ (೪೪೭೨ ಅಡಿ/೧,೩೬೩ ಮೀ) ಪ್ರಮುಖವಾದವುಗಳು. ಗುಂಡ್ಲುಪೇಟೆ ತಾಲೂಕಿನಲ್ಲಿ ಹಿಮವದ್ ಗೋಪಾಲಸ್ವಾಮಿ ಬೆಟ್ಟ (೪೭೭೨ ಅಡಿ/೧೪೫೪.೫ ಮೀ) ಇದೆ. ಇವುಗಳಲ್ಲಿ ಕತ್ತರಿ ಬೆಟ್ಟ ಜಿಲ್ಲೆಯ ಅತ್ಯಂತ ಎತ್ತರದ ಬೆಟ್ಟವಾಗಿದೆ.

ಕೊಳ್ಳೇಗಾಲ ತಾಲೂಕಿನಲ್ಲಿರುವ ಶ್ರೀಮಲೈ ಮಹದೇಶ್ವರ ಬೆಟ್ಟಗಳ ಸರಣಿಯು ಪೂರ್ವಘಟ್ಟಗಳ ಮತ್ತೊಂದು ಪ್ರಮುಖ ಸರಣಿಯಾಗಿದೆ. ಸಮುದ್ರಮಟ್ಟದಿಂದ ಸುಮಾರು ೯೭೬ ಮೀಟರುಗಳಿಗಿಂತಲೂ ಎತ್ತರವಾದ ಸರಣಿಗಳಿಂದ ಕೂಡಿದೆ. ಇದು ೭೭ ಬೆಟ್ಟಗಳನ್ನು ಹೊಂದಿದೆ. ಅವುಗಳನ್ನು ಆನೆಮಲೈ, ಗುಂಜಿಮಲೈ, ಗುಲಗುಂಜಿ ಮಲೈ, ಜೇನುಮಲೈ, ಇತ್ಯಾದಿಯಾಗಿ ಪ್ರತಿಯೊಂದಕ್ಕೂ ಒಂದೊಂದು ಪ್ರತ್ಯೇಕ ಹೆಸರಿದೆ.

## ಖನಿಜ ಸಂಪತ್ತು

ಜಿಲ್ಲೆಯಲ್ಲಿ ದೊರೆಯುವ ಶಿಲೆ ಮತ್ತು ಖನಿಜಗಳ ವಿವರಣೆ ಈ ರೀತಿಯಿದೆ.

**ಕುರಂದ ಅಥವಾ ಕೊರಂಡಂ:** ಈ ಖನಿಜವು ಲೋಹಗಳಿಗೆ ಮೆರಗನ್ನು ಕೊಡಲು ಸಾಣೆ ವಸ್ತುವಾಗಿ ಉಪಯುಕ್ತವಾಗಿವೆ. ಇದು ಕೆಲವೊಮ್ಮೆ ಅಪರೂಪವಾಗಿ ಬೆಲೆಬಾಳುವ ರತ್ನವಾಗಿ ದೊರೆಯುತ್ತದೆ. ಉದಾ: ನೀಲಮಣಿ, ರಕ್ತಮಣಿಗಳಂತೆ. ಇದನ್ನು ಭೀಮನಬೀಡುವಿನಲ್ಲಿ ಗಣಿ ಮಾಡುತ್ತಿದ್ದಾರೆ.

**ಕಂಕರ್–ಸುಣ್ಣದಕಲ್ಲು:** ಕೀಳುದರ್ಜೆಯ ಆದರೂ ಬಹು ಉಪಯುಕ್ತವಾದ ಸುಣ್ಣದಕಲ್ಲು ಗುಂಡ್ಲುಪೇಟೆ ತಾಲೂಕಿನಲ್ಲಿ ಹೇರಳವಾಗಿ ದೊರೆಯುತ್ತಿದೆ. ಗುಂಡ್ಲುಪೇಟೆಗೆ ಉತ್ತರಕ್ಕಿರುವ ಸುಣ್ಣದ ಬೇಗೂರೆಂದೇ ಹೆಸರುವಾಸಿಯಾಗಿರುವ ಬೇಗೂರಿನ ಸಮೀಪದ ಬೆಟ್ಟದ ಮಾದಹಳ್ಳಿ ಮತ್ತು ಕೋಡಿಹಳ್ಳಿಯಲ್ಲಿ ಸುಣ್ಣಕಲ್ಲು ಯಥೇಚ್ಛವಾಗಿ ದೊರೆಯುವುದು. ಈ ಕಲ್ಲು ಸುಣ್ಣ ತಯಾರಿಕೆಗೆ ಬೇಕಾಗುವ ಮೂಲವಸ್ತು. ಈ ಕಲ್ಲನ್ನು ಸುಟ್ಟರೆ ಗೋಡೆಗೆ ಹಚ್ಚುವ ಸುಣ್ಣ ಸಿದ್ಧವಾಗುತ್ತದೆ. ಹಲವಾರು ಕೈಗಾರಿಕೆಗಳಲ್ಲೂ ಇದರ ಉಪಯುಕ್ತತೆ ಇದೆ. ಉದಾಹರಣೆಗೆ ಸಿಮೆಂಟ್, ಗಾಜು, ಬಣ್ಣ, ಬಟ್ಟೆ ಮತ್ತು ಕಾಗದಕ್ಕೆ ಬಿಳುಪು ಮತ್ತು ಹೊಳಪನ್ನು ಕೊಡಲು, ಔಷಧಿ, ಗೊಬ್ಬರ, ರಾಸಾಯನಿಕ ಸುಣ್ಣ ಹೀಗೆ ನೂರಾರು ಸಾವಿರಾರು ಉಪಲಬ್ಧ ವಸ್ತುಗಳ ತಯಾರಿಕೆಯಲ್ಲಿ ಈ ವಸ್ತು ಅವಶ್ಯಕವಾಗಿ ಬೇಕಾಗಿದೆ. ಬೇಗೂರಿನ ಬೆಟ್ಟದ ಮಾದಹಳ್ಳಿ ಪ್ರದೇಶ ಒಂದರಿಂದಲೇ ದಿನಂಪ್ರತಿ ಸಹಸ್ರಾರು ಟನ್‌ಗಳಷ್ಟು ಸುಣ್ಣದಕಲ್ಲನ್ನು ಗಣಿ ಮಾಡಿ ಹಲವಾರು ಉದ್ಯಮಗಳಿಗೆ ಕಚ್ಚಾ ವಸ್ತುವನ್ನಾಗಿ ಬಳಸುತ್ತಿದ್ದಾರೆ. ಈ ಕಲ್ಲಿನಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ರಾಜಧನದ ರೂಪದಲ್ಲಿ ಸಂದಾಯವಾಗುತ್ತಿದೆ.

**ಅಮೃತ ಶಿಲೆ:** ಸುಣ್ಣ ಶಿಲೆಯು ಭೂ ಅಂತರಾಳದಲ್ಲಿ ಶಾಖ ಮತ್ತು ಒತ್ತಡಗಳಿಗೆ ಸಿಲುಕಿಕೊಂಡಾಗ ಅದು ಅಮೃತ ಶಿಲೆಯಾಗುತ್ತದೆ. ಇದು ವಿವಿಧ ಬಣ್ಣಗಳಲ್ಲಿ ದೊರೆಯುತ್ತದೆ. ಇದು ಅಲಂಕಾರ ಶಿಲೆಯಾಗಿ ಉಪಯುಕ್ತ. ಈ ಶಿಲೆಗಳು ಲಾಭದಾಯಕ. ಏಕೆಂದರೆ, ಗೃಹ ಕಟ್ಟಡಗಳಿಗೆ ಸೌಂದರ್ಯದ ಮೆರಗನ್ನು ಕೊಡಲು ಬಣ್ಣ ಬಣ್ಣದ ಅಮೃತ ಶಿಲೆಯು ಅಪಾರ ಬೇಡಿಕಯನ್ನು ಹೊಂದಿದೆ. ಈ ಶಿಲೆಯು ತೆರಕಣಾಂಬಿ, ಮಲ್ಲಯ್ಯನಪುರ ಕುಂದಕೆರೆಗಳಲ್ಲಿ ದೊರೆಯುತ್ತದೆ.

**ಮ್ಯಾಗ್ನಸೈಟ್:** ಮ್ಯಾಗ್ನೀಷಿಯಂ ಧಾತುವಿಗೆ ಮೂಲವಸ್ತು. ಇದರ ಉಪಯೋಗ ಹಲವಾರು; ಇದು ಶಾಖ ಮತ್ತು ವಿದ್ಯುತ್‌ಗಳಿಗೆ ಆವಾಹಕವಾಗಿರುವುದರಿಂದ ಕುಲುಮೆ ಇಟ್ಟಿಗೆ, ವಿದ್ಯುತ್ ಉಪಕರಣಗಳ ತಯಾರಿಕೆಯಲ್ಲೂ, ಬಣ್ಣ ಮತ್ತು ಇತರ ಕೈಗಾರಿಕೆಗಳಲ್ಲೂ ಬೇಕೇ ಬೇಕು. ಈ ಖನಿಜವು ಸಿರಬಳ್ಳಿಯಂತೆ ಅಲ್ಲಲ್ಲಿ ಕಾಣ ಸಿಗುತ್ತದೆ.

**ಕಬ್ಬಿಣದ ಅದಿರು:** ಅಷ್ಟೇನು ಉತ್ಕೃಷ್ಟವಿಲ್ಲದ ಅದುರು,ಹಾಗೂ ಗಣಿ ಕಾರ್ಯಕ್ಕೆ ಸೂಕ್ತವಲ್ಲದ ಕಡಿಮೆ ಕಬ್ಬಿಣಾಂಶವಿರುವ ಅದುರು, ಬೊಮ್ಮನಹಳ್ಳಿ ಯರಗನಹಳ್ಳಿಗಳಲ್ಲಿ ದೊರೆಯುತ್ತದೆ. ಆದರೆ ಈ ಅದುರಿನ

ಬಣ್ಣದ ಮಣ್ಣು-ರೆಡ್ ಅಕ್ಸೈಡು ಅಲ್ಲಲ್ಲಿ ದೊರೆಯುವುದರಿಂದ ಇದೊಂದು ಉತ್ತಮ ಗೃಹ ಕೈಗಾರಿಕೆಯ ಮೂಲವಸ್ತುವಾಗಬಹುದು.

**ಮ್ಯಾಂಗನೀಸ್ ಯುಕ್ತ ಶಿಲೆಗಳು:** ಅಷ್ಟೇನು ಉತ್ಕೃಷ್ಟವಲ್ಲದ ಅದಿರು, ಕ್ವಾರ್ಟ್ಜೈಟ್ ಮತ್ತು ಸುಣ್ಣಾಂಶಯುಕ್ತ ಶಿಲೆಗಳಲ್ಲಿ ದೊರೆಯುತ್ತದೆ. ಇಂಥ ಶಿಲೆಗಳು ಕುರುಬರಹುಂಡಿ, ವಣಕನಪುರ, ಮಡಹಳ್ಳಿ, ಮದ್ದೂರು, ತೆರಕಣಾಂಬಿ, ತ್ರಿಯಂಬಕಪುರ, ಹನುಮಂತ ರಾಯನಗುಡಿ ಮತ್ತು ಬಾಚಹಳ್ಳಿಗಳಲ್ಲಿ ದೊರೆಯುತ್ತದೆ. ಈ ಶಿಲೆಯು ಪೂರ್ವಘಟ್ಟಗಳಲ್ಲಿ ಕಾಣಿಸುವ ಖಾಂಡಲೈಟ್ ಶಿಲೆಗಳಿಗೆ ಸಮವೆಂದು ಪರಿಗಣಿಸಲಾಗಿದೆ. ಆದುದರಿಂದ ಪಶ್ಚಿಮ ಮತ್ತು ಪೂರ್ವಘಟ್ಟಗಳ ಸಮತೋಲನವು ಸಾಧ್ಯವಾಗಿದೆ.

**ಡಾಲರೈಟ್ ಡೈಕ್‌ಗಳು:** ಕರೀ ಕಲ್ಲಿನ ಒಡ್ಡುಗಳು, ಇವು ಭೂಮಿಯ ಬಹು ಆಳದಿಂದ ೧೦ ರಿಂದ ೨೦ ಕಿ.ಮೀ. ಗೋಡೆಯಂತೆ ಮೇಲೆ ಬಂದಿರುತ್ತದೆ. ಇದನ್ನು ಕರೀಕಣ ಶಿಲೆ (ಬ್ಲಾಕ್ ಗ್ರಾನೈಟ್) ಎಂದು ಕರೆಯುವರು. ಈ ಶಿಲೆಗಳಿಗೆ ವಿದೇಶಿ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆ ಇದೆ. ವಿದೇಶಿ ವಿನಿಮಯ ಹಣಗಳಿಸಲು ಸರ್ಕಾರವು ಈ ಕಲ್ಲಿನ ಉದ್ದಿಮೆಯನ್ನು ರಾಷ್ಟ್ರೀಕರಣ ಮತ್ತು ಏಕಸ್ವಾಮ್ಯತೆಯ ಗಣಿಹಕ್ಕನ್ನು ತನ್ನ ಒಡೆತನದಲ್ಲೆ ಇರಿಸಿಕೊಂಡಿದೆ. ಈ ಕಲ್ಲಿನ ಗಣಿಯನ್ನು ಮಂಚೇನಹಳ್ಳಿ, ಬರಗಿ, ಶೀಲವಂತನಪುರ, ಬೊಮ್ಮನಹಳ್ಳಿ ಮತ್ತು ತೆರಕಣಾಂಬಿಯಲ್ಲಿ ಕಾಣಬಹುದು.

**ನೀಲಮಣಿ (ಸ್ಯಾಫೈರ್):** ನೀಲಮಣಿ ಖನಿಜವು, ಪ್ರಶಸ್ತವಾದ ನವರತ್ನಗಳಲ್ಲಿ ಒಂದು. ನೀಲಮಣಿಯ ಬೆಲೆ ವಜ್ರದಷ್ಟೇ ಆಗಬಹುದು. ಇವು ಪ್ರಪಂಚಲ್ಲೇ ಆರು ಕಡೆಗಳಲ್ಲಿ ಮಾತ್ರ ದೊರೆಯುತ್ತವೆ. ಇಂತಹ ನೀಲಮಣಿಗಳನ್ನು ತೆರಕಣಾಂಬಿಯ ಸಮೀಪ ಮೊಟ್ಟ ಮೊದಲ ಬಾರಿಗೆ ೧೯೮೨ರಲ್ಲಿ ಪತ್ತೆ ಹಚ್ಚಲಾಗಿದೆ. ಆದರೆ, ಇವು ಸೂಕ್ಷ್ಮ ದರ್ಶಕದಲ್ಲಿ ಕಾಣಬಹುದಾದ ಮಣಿಗಳಾದುದರಿಂದ ಗಣಿ ಕಾರ್ಯಾಚರಣೆಯಿಂದ ಲಾಭ ಗಳಿಸಲು ಸಾಧ್ಯವಿಲ್ಲ. ಈ ಖನಿಜವು ಉತ್ಪತ್ತಿಯಾದಾಗ ಯಾವ ರಾಸಾಯನಿಕ ವಸ್ತು ಮತ್ತು ಶಾಖ ಒತ್ತಡಗಳ ಪರಿಸರ ಇದ್ದಿತು ಎಂದು ಹೇಳಲು ಸೂಚೀ ಖನಿಜವಾಗಿದೆ. ಆದುದರಿಂದ ಸಂಶೋಧನಾ ಜಿಜ್ಞಾಸೆಯುಳ್ಳವರಿಗೆ ಇದು ಬಹುಮುಖ್ಯ ಖನಿಜ. ಹೆಚ್ಚು ಪರಿಶೋಧನೆ ಮತ್ತು ಸಮೀಕ್ಷೆಯನ್ನು ತೆರಕಣಾಂಬಿಯ ಸುತ್ತಮುತ್ತಲ ಶಿಲೆಗಳಲ್ಲಿ ನಡೆಸಿದರೆ ಅಮೂಲ್ಯ ರತ್ನಗಳ ಖನಿಜವನ್ನು ಪತ್ತೆಹಚ್ಚಬಹುದು.

**ಕಣಶಿಲೆ ಮತ್ತು ಪಟ್ಟಶಿಲೆ:** ಇವು ಸರ್ವೇ ಸಾಧಾರಣವಾಗಿ ಗುಂಡ್ಲುಪೇಟೆಯ ಎಲ್ಲಾ ಸ್ಥಳಗಳಲ್ಲೂ ದೊರೆಯುವ ಶಿಲೆ. ಸುಲಭ ಬೆಲೆಯಲ್ಲಿ ದೊರೆಯುತ್ತದೆ. ಇವಗಳು ಕಟ್ಟಡ ಶಿಲೆಗಳಾಗಿ ಕಟ್ಟಡಗಳ ಅಡಿಪಾಯದ ಸೈಜುಗಲ್ಲು ಮತ್ತು ಹಾಸು ಚಪ್ಪಡಿಯಾಗಿ, ರಸ್ತೆ ಜೆಲ್ಲಿಯಾಗಿ ಉಪಯುಕ್ತವಾಗಿವೆ. ಬೇಗೂರಿಗೆ ಸಮೀಪವಿರುವ ಹಿರೀಕಾಟಿ, ತೆರಕಣಾಂಬಿ, ಕಂದೇಗಾಲ, ಹಂಗಳ ಇವೇ ಮುಂತಾದ ಸ್ಥಳಗಳಲ್ಲಿ ಅಗೆದು ತೆಗೆಯುತ್ತಾರೆ.

**ಗೌಣ ಖನಿಜಗಳು:** ಮೇಲೆ ವಿವರಿಸಿದ ಮುಖ್ಯ ಖನಿಜಗಳೇ ಅಲ್ಲದೆ ಕೆಲವು ಗೌಣ ಖನಿಜಗಳೂ ಗುಂಡ್ಲುಪೇಟೆಯಲ್ಲಿ ದೊರೆಯುತ್ತವೆ. ಇವು ಮರಳು, ಮಣ್ಣು, ಕಂಕರ್, ರಂಗೋಲಿ ಮಣ್ಣು, ಪಿಂಗಾಣಿ ಮಣ್ಣುಗಳೇ ಆಗಿವೆ.

**ಕಟ್ಟಡದ ಕಲ್ಲುಗಳು, ಅಲಂಕರಣ ಶಿಲೆಗಳು:** ಅಲಂಕರಣ ಶಿಲೆಗಳನ್ನು ವಿಶೇಷವಾಗಿ ಬಳಸಿದ ನುರಿತ ಶಿಲ್ಪಿಗಳು ಅದ್ಭುತ ಸ್ಮಾರಕ, ದೇವಾಲಯ, ಮೂರ್ತಿಗಳನ್ನು ನಿರ್ಮಿಸಿ ವಿಶ್ವದ ಗಮನ ಸೆಳೆದಿದ್ದಾರೆ. ಬೇಲೂರು–ಹಳೇಬೀಡುಗಳ ಹೊಯ್ಸಳರ ಕಲಾಕೃತಿಗಳು, ಶ್ರವಣಬೆಳಗೊಳದ ವಿಶ್ವವಿಖ್ಯಾತ ಬಾಹುಬಲಿಯ ವಿಗ್ರಹ, ಬೆಂಗಳೂರಿನ ಭವ್ಯ ವಿಧಾನಸೌಧ,ಹಂಪೆಯ ಸುಂದರ ಶಿಲಾರಥ ಮುಂತಾದವು ವಾಸ್ತುಶಿಲ್ಪದ ಉತ್ಕೃಷ್ಟ ಮಾದರಿಗಳಾಗಿವೆ. ನಾಡಿನುದ್ದಗಲಕ್ಕೂ ಕಂಡು ಬರುವ ದೇವಸ್ಥಾನ, ಶಿಲಾಶಾಸನ, ಕಲ್ಲುಗಂಬ, ಗರುಡಗಂಬ, ಮಾಸ್ತಿಕಲ್ಲು, ಯುದ್ಧ ಸ್ಮಾರಕಗಳು ಜೊತೆಗೆ ಭಿತ್ತಿಗಳ ಮೇಲೆ ಮೂಡಿಸಿದ ಕಲ್ಲು ಹೂಬಳ್ಳಿ, ದೇವತೆ, ಪ್ರಾಣಿಗಳು ಹೀಗೆ ವಾಸ್ತುಶಿಲ್ಪ, ಶಿಲೆಯಲ್ಲಿ ಅರಳಿರುವುದನ್ನು ಎತ್ತಿ ತೋರಿಸುತ್ತದೆ. ಪ್ರಾಚೀನ ಕಾಲದಿಂದಲೂ ಕಟ್ಟಡಗಳಿಗಾಗಿ ವಿಶೇಷವಾಗಿ ಅಲಂಕರಣ ವಸ್ತುವಾಗಿ ವೈವಿಧ್ಯ ಶಿಲೆಗಳನ್ನು ಉಪಯೋಗಿಸಿರುವುದನ್ನು ಕಾಣಬಹುದು.

ರಾಜ್ಯದ ಬೆಟ್ಟಗುಡ್ಡಗಳಲ್ಲಿ ಮತ್ತು ಭೂಮಿಯಲ್ಲಿ ವೈವಿಧ್ಯಮಯ ಶಿಲಾ ಸಂಪನ್ಮೂಲ ಅಡಗಿದೆ. ಇವುಗಳಲ್ಲಿ ಅಗ್ನಿ ಶಿಲೆಗಳಾದ ಗ್ರಾನೈಟ್, ಡಾಲೆರೈಟ್, ಬಸಾಲ್ಟ್ ಬಹು ಮುಖ್ಯವಾದ ಅಲಂಕರಣ ಶಿಲೆಗಳಾಗಿವೆ. ಇವಲ್ಲದೆ ಬೆಣಚುಕಲ್ಲು, ಬಳಪದ ಕಲ್ಲು, ಮರಳುಗಲ್ಲು, ಪದರುಶಿಲೆ, ಸುಣ್ಣಶಿಲೆ ಹಾಗೂ ಅನೇಕ ರೂಪಾಂತರಿತ ಶಿಲೆಗಳು ಉದ್ಯಮದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿವೆ. ಅಖಂಡವಾಗಿ ದೊರೆಯುವ ವೈವಿಧ್ಯಮಯ ಶಿಲೆಗಳನ್ನು ಗುರುತಿಸಿ ಸರ್ಕಾರದಿಂದ ಗುತ್ತಿಗೆ ಪಡೆದು ಕಲ್ಲು ಗಣಿಗಾರಿಕೆ ಮಾಡುತ್ತಿರುವ ಖಾಸಗಿ ಸಂಸ್ಥೆಗಳು ನಾಡಿನಾದ್ಯಂತ ಕಾರ್ಯಾಚರಣೆ ಮಾಡುತ್ತಿವೆ. ಉತ್ತಮ ತಂತ್ರಜ್ಞಾನದ ಫಲವಾಗಿ ಇಂದು ಯಾಂತ್ರೀಕರಣವಾಗಿರುವ ಶಿಲಾ ಗಣಿಗಾರಿಕೆ ಉದ್ಯಮದಲ್ಲಿ ಹೆಚ್ಚು ಪ್ರಗತಿ ಸಾಧಿಸಿದೆ. ಶಿಲೆಗಳ ಸ್ವಭಾವ, ಅವುಗಳಲ್ಲಿರುವ ಸೀಳು ಮುಂತಾದವುಗಳನ್ನಾಧರಿಸಿ ಹಲಗೆ, ಫಲಕ, ಘನಾಕೃತಿಗಳಾಗಿ ಕಲ್ಲನ್ನು ಗಣಿಯಿಂದ ತೆಗೆಯಲಾಗುತ್ತದೆ. ಸುಧಾರಿತ ಸಾಧನಗಳಿಂದ ಶಿಲೆಯನ್ನು ಕೊರೆದು ಅಪೇಕ್ಷಿತ ರೂಪಕ್ಕೆ ತಂದು ಕತ್ತರಿಸಿ ಮೆರಗು ಕೊಟ್ಟು ಆಕರ್ಷಕ ಕಲ್ಲನ್ನಾಗಿ ಮಾಡುವ ಈ ಉದ್ಯಮ ಹಲವು ಕೋಟಿ ರೂಪಾಯಿಗಳ ಬಂಡವಾಳದೊಂದಿಗೆ ಬೆಳೆಯುತ್ತಿದೆ.

ಅಲಂಕರಣ ಶಿಲೆಗಳ ಉಪಯೋಗ ಕೂಡ ಬಹುಮುಖವಾಗಿದೆ. ಕಟ್ಟಡಗಳಿಗೆ ಮುಖ್ಯವಾಗಿ ಚಪ್ಪಡಿ ರೂಪದಲ್ಲಿ ನೆಲಹಾಸುಗಳಾಗಿ, ಭಿತ್ತಿಗಳ ಫಲಕವಾಗಿ, ಗೋರಿಗಳಲ್ಲಿ ಕೆತ್ತನೆಗಾಗಿ ಉತ್ತಮ ಗುಣಮಟ್ಟದ ಹಲವು ರಂಗಿನ ಮೆರಗು ಕೊಟ್ಟು ಗ್ರಾನೈಟ್‌ನ್ನು ಬಳಸಲಾಗುತ್ತಿದೆ. ಚಚ್ಚೌಕ ಮತ್ತು ಆಯತಾಕಾರವಾಗಿ ಅರೆಯಿಂದ ತೆಗೆದ ಕಲ್ಲನ್ನು 'ಸೈಜುಗಲ್ಲು' ಎಂತಲೂ, ಸಣ್ಣ ಚೂರುಗಳನ್ನಾಗಿ ಒಡೆದ ಕಲ್ಲನ್ನು 'ಜಲ್ಲಿಕಲ್ಲು' ಎಂದು ಕರೆಯುತ್ತಾರೆ. ಜಲ್ಲಿಕಲ್ಲು ರಸ್ತೆ ನಿರ್ಮಾಣ ರೈಲುಹಾದಿ ನಿರ್ಮಾಣದಲ್ಲಿ ಉಪಯೋಗಿಸಲಾಗುತ್ತದೆ. ರಾಜ್ಯದಲ್ಲಿ ಬಹುತೇಕವಾಗಿ ಉಪಯೋಗಿಸಲ್ಪಡುವ ಶಿಲೆ 'ಗ್ರಾನೈಟ್' ಶಿಲೆ ಎಂದು ಹೆಸರಾಗಿದೆ. ಇತ್ತೀಚೆಗೆ ಗ್ರಾನೈಟ್‌ನಂತೆಯೇ ಮೆರಗು ಪಡೆಯುವ ಎಲ್ಲಾ ಶಿಲೆಗಳನ್ನು ಅಲಂಕರಣ ಶಿಲೆಯಾಗಿ ಬಳಸುವ ಪರಿಪಾಠ ಹೆಚ್ಚುತ್ತಿದೆ. ಅನಾರ್ಥೊಸೈಟ್, ಲೆಪ್ಟಿನೈಟ್, ಮರಳುಗಲ್ಲು, ಪಟ್ಟೆಶಿಲೆ, ಹಸುರು ಮಿಶ್ರಿತ ಕ್ವಾರ್ಟ್ಸೈಟ್ ಎಲ್ಲವೂ ಬೇಡಿಕೆ ಗಳಿಸುತ್ತಿವೆ.

ಅಲಂಕರಣ ಶಿಲೆಗಳ ಸಂಪನ್ಮೂಲಗಳನ್ನು ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಮೀಕ್ಷೆ ನಡೆಸಿ ವರದಿಗಳನ್ನು ನೀಡುತ್ತದೆ. ಇತ್ತೀಚಿನ ಸಮೀಕ್ಷೆಯಂತೆ ಲಭ್ಯವಿರುವ ೧,೭೮೦ ಚ.ಕಿ.ಮೀ ನಷ್ಟು ತಿಳಿಗೆಂಪು ಗ್ರಾನೈಟ್ ಸಂಪನ್ಮೂಲದಲ್ಲಿ ಸಧ್ಯದಲ್ಲಿ ಗುರುತಿಸಿರುವುದು ಕೇವಲ ೧೧೦ ಚ.ಕಿ.ಮೀ. ಮಾತ್ರ. ಬೂದು ಬಣ್ಣದ ಗ್ರಾನೈಟ್ ರಾಜ್ಯದಲ್ಲಿ ಸುಮಾರು ೧,೦೮೦ ಚ.ಕಿ.ಮೀ. ವ್ಯಾಪ್ತಿ ಹೊಂದಿದ್ದರೂ, ಗಣಿ ಕಾರ್ಯಾಚರಣೆಗಾಗಿ ಗುರುತಿಸಿರುವ ಪ್ರದೇಶ ೩೬ ಚ.ಕಿ.ಮೀ. ಮಾತ್ರ ಕರಿಕಲ್ಲಿನ ಉದ್ಯಮ ಉಳಿದೆಲ್ಲವುಗಳಿಗಿಂತ ಹೆಚ್ಚು ಲಾಭಗಳಿಸುತ್ತಿದ್ದರೂ ಲಭ್ಯವಿರುವ ೨೫೦ ಚ.ಕಿ.ಮೀ. ಸಂಪನ್ಮೂಲದಲ್ಲಿ ಗಣಿಗಾರಿಕೆ ನಡೆಯುತ್ತಿರುವುದು

ಕೇವಲ ೧೪ ಚ.ಕಿ.ಮೀ. ಪ್ರದೇಶದಷ್ಟು ಮಾತ್ರ. ಅಲಂಕರಣ ಶಿಲೆಯ ಜಿಲ್ಲಾವಾರು ಉತ್ಪಾದನೆಯ ಬಗ್ಗೆ ಅಂಕಿ ಅಂಶಗಳು ಲಭ್ಯವಿಲ್ಲ. ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕುಗಳಲ್ಲಿ ಡಾಲರೈಟ್ (ಬ್ಲಾಕ್ ಗ್ರಾನೈಟ್) ಅಲಂಕರಣ ಶಿಲೆಯ ಹಂಚಿಕೆಯಿದ್ದು, ಅವು ರೂಪಾಂತರ ಶಿಲೆಗಳಾಗಿವೆ. ವಿಶೇಷವಾಗಿ ಪೆನಿನ್‌ಸುಲಾರ್ ನೈಸ್, ಚಾರ್ನೋಕೈಟ್ ಮತ್ತು ಗ್ರಾನೈಟ್ ಶಿಲೆಗಳಾಗಿವೆ.

ಗ್ರಾನೈಟ್ ರಫ್ತು ವ್ಯಾಪಾರ ಸುಮಾರು ೧೯೩೦ರಲ್ಲಿ ಪ್ರಾರಂಭವಾಗಿ ಬೆಂಗಳೂರು ಉದ್ಯಮ ಕೇಂದ್ರವಾಗಿ ಬೆಳೆಯಿತು. ವಿಶೇಷವಾಗಿ ಬೆಂಗಳೂರು ದೊಡ್ಡಬಳ್ಳಾಪುರ ಸುತ್ತಮುತ್ತ ಲಭ್ಯವಿರುವ ಗ್ರಾನೈಟ್ ಕಚ್ಚಾ ಶಿಲೆಗಳನ್ನಲ್ಲದೆ ಮೆರಗು ಕೊಟ್ಟ ಅಲಂಕರಣ ಶಿಲೆಗಳನ್ನು ಐರೋಪ್ಯ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿತ್ತು. ಆರಂಭದಲ್ಲಿ ಕರಕೆಲಸಗಾರರಿಂದ ಗಣಿಗಾರಿಕೆ ಪ್ರಾರಂಭವಾಗಿ ೧೯೭೦ರ ದಶಕದಲ್ಲಿ ಹೊಸ ತಂತ್ರಜ್ಞಾನದೊಂದಿಗೆ ರಫ್ತಿನ ಪ್ರಮಾಣವೂ ಹೆಚ್ಚಳ ಕಂಡಿತು. ವಿಶೇಷವಾಗಿ ಕೊಳ್ಳೇಗಾಲ, ಚಾಮರಾಜನಗರದ ಕರಿಕಲ್ಲು ವಿದೇಶಗಳಿಂದ ಹೆಚ್ಚು ಬೇಡಿಕೆ ಪಡೆದವು. ವಾಷಿಂಗ್‌ಟನ್‌ನಲ್ಲಿ ನಿಲ್ಲಿಸಿರುವ ವಿಯೆಟ್ನಾಂ ಯುದ್ಧ ಸ್ಮಾರಕ ಕೊಳ್ಳೇಗಾಲದ ಡಾಲರೈಟ್ (ಬ್ಲಾಕ್ ಗ್ರಾನೈಟ್) ಕಲ್ಲಿನಿಂದ ನಿರ್ಮಿತವಾಗಿದೆ. ಇತ್ತೀಚಿಗೆ ನಗರಗಳಲ್ಲಿ ಸಣ್ಣ ಮನೆಗಳಿಂದ ಹಿಡಿದು ಬಹುಮಹಡಿ ಕಟ್ಟಡಗಳವರೆಗೆ ಅಲಂಕರಣ ಶಿಲೆಗಳ ಬಳಕೆ ಹೆಚ್ಚುತ್ತಿದೆ. ಗೋಡೆಗಳಿಗೆ ಹೊದಿಸುವ ತೆಳು ಹಲಗೆಗಳಾಗಿ, ಹೆಂಚುಗಳಾಗಿ, ನೆಲ ಹಾಸುಗಳಾಗಿ, ಅಡುಗೆ ಮನೆಯ ಜಗಲಿಗಳಿಗೆ, ರುಬ್ಬು ಗುಂಡುಗಳಿಗೆ, ಗ್ರಾನೈಟ್ ಮತ್ತು ಡಾಲರೈಟ್ ಹೆಚ್ಚು ಬಳಕೆಯಾಗುತ್ತಿವೆ.

ರಾಜ್ಯದಲ್ಲಿ ಅಲಂಕರಣ ಗ್ರಾನೈಟ್ ರಫ್ತು ಮಾಡುವ ೨೦ ಭಾರಿ ಕೈಗಾರಿಕೆಗಳಿವೆ. ಇವೆಲ್ಲವೂ ಸಂಪೂರ್ಣವಾಗಿ ಖಾಸಗೀ ಒಡೆತನದಲ್ಲಿವೆ. ತ್ವರಿತವಾಗಿ ಆರ್ಥಿಕ ಲಾಭಗಳಿಸುತ್ತಿರುವ ಈ ಉದ್ಯಮ ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ವ್ಯಾಪಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ೧೯೭೨ರಲ್ಲಿ ಸ್ಟಾಕ್‌ಹೋಂನಲ್ಲಿ ನಡೆದ ಮಾನವ ಪರಿಸರ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯವನ್ನು ೧೯೭೭ರಲ್ಲಿ ಭಾರತವೂ ತನ್ನ ಪರಿಸರ ಸಂರಕ್ಷಣೆಗೆ ಅಳವಡಿಸಿಕೊಂಡಿತು. ಉಳಿದ ಕೈಗಾರಿಕೆಗಳಂತೆ ಗಣಿಗಾರಿಕೆ ಅದರಲ್ಲೂ ವಿಶೇಷವಾಗಿ ಕಲ್ಲುಗಣಿ ಕೈಗಾರಿಕೆ ಪರಿಸರದ ಮೇಲೆ ದೀರ್ಘಕಾಲಿಕ ದುಷ್ಪರಿಣಾಮ ಬೀರುತ್ತದೆ. ಮುಖ್ಯವಾಗಿ ಗಣಿಯಿಂದ ಉತ್ಪನ್ನವಾಗುವ ಸಣ್ಣ ಕಲ್ಲುಚೂರು, ಧೂಳು ವಾಯು ಮಾಲಿನ್ಯಕ್ಕೆ ಕಾರಣವಾಗುತ್ತದೆ. ಫಲವತ್ತಾದ ಭೂಮಿಯ ಮೇಲು ಪದರ ಗಣಿಗಾರಿಕೆಯಿಂದಾಗಿ ನಾಶವಾಗಿ ಕೃಷಿಗೆ ಅನುಪಯುಕ್ತವಾಗುತ್ತದೆ. ಸುತ್ತಮುತ್ತಲಿನ ಸಸ್ಯ ರಾಶಿಯ ಮೇಲೆ ಕಲ್ಲು ಕಣಗಳು ಕುಳಿತು ದ್ಯುತಿ ಸಂಶ್ಲೇಷಣೆಗೆ ತಡೆಯೊಡ್ಡುತ್ತದೆ. ಇದರ ಫಲವಾಗಿ ಇಳುವರಿ ಕಡಿಮೆಯಾಗುತ್ತದೆ. ಕಲ್ಲು ಗಣಿ ಕಾರ್ಮಿಕರು ದೀರ್ಘಕಾಲ ಧೂಳನ್ನು ಸೇವಿಸುವುದರಿಂದ ಬಹುಬೇಗ ಶ್ವಾಸಕೋಶ ರೋಗಕ್ಕೆ ಬಲಿಯಾಗುತ್ತಾರೆ. ಇದನ್ನು 'ಸಿಲಿಕೋಸಿಸ್' ಎಂದು ಗುರುತಿಸಿದ್ದಾರೆ. ಸಮೀಪದ ಬಾವಿಗಳ ನೀರು ಸಹ ಮಲಿನವಾಗುವುದು ಕಂಡು ಬಂದಿದೆ. ಅರಣ್ಯಗಳಲ್ಲಿ ಉತ್ತಮ ದರ್ಜೆಯ ಅಲಂಕರಣ ಶಿಲೆಗಳು ಹಂಚಿಕೆಯಾಗಿದ್ದರೂ ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಅದನ್ನು ಗಣಿ ಮಾಡುವುದನ್ನು ವಿರೋಧಿಸಲಾಗುತ್ತದೆ.

ಕಲ್ಲು ಗಣಿಯ ಸುತ್ತಮುತ್ತ ಪರಿಸರ ಮಾಲಿನ್ಯ ನಿಯಂತ್ರಿಸಲು ಹಲವು ಮಾರ್ಗಗಳಿವೆ. ಟನ್ನುಗಟ್ಟಲೆ ಧೂಳು ಶಮನ ಮಾಡುವ ಯಂತ್ರೋಪಕರಣಗಳನ್ನು ಬಳಸಿ ಪರಿಸರದ ಕಲುಷಿತತೆಯನ್ನು ಸ್ವಲ್ಪ ಮಟ್ಟಿಗೆ ತಡೆಯಬಹುದು. ಗಣಿ ಕಾರ್ಯ ಮುಗಿಯುವ ಮೊದಲೇ ಸುತ್ತ ನೆಡು ತೋಪು ಸೃಷ್ಟಿಸಿ, ಆ ಪ್ರದೇಶದಲ್ಲಿ ಹಸಿರು ಬೆಳೆಯುವಂತೆ ನೋಡಿಕೊಳ್ಳಬಹುದು. ಗಣಿಗಾರಿಕೆಯ ಲಾಭದಲ್ಲಿ ಬರುವ ಒಂದು ಅಂಶವನ್ನು

ಇದಕ್ಕಾಗಿ ವಿನಿಯೋಗಿಸಿದರೆ ಗಣಿಯ ಸುತ್ತಮುತ್ತಲಿನ ಪ್ರದೇಶವೂ ಅಭಿವೃದ್ಧಿಯಾಗುತ್ತದೆ. ಹಾಗೂ ಪರಿಸರ ಮಾಲಿನ್ಯವನ್ನು ತಕ್ಕಮಟ್ಟಿಗೆ ನಿಯಂತ್ರಿಸಿದಂತಾಗುತ್ತದೆ.

**ಚಾಮರಾಜನಗರ ತಾಲೂಕಿನಲ್ಲಿ ಕಪ್ಪು ಶಿಲೆಗಳು ದೊರಕುವ ಸ್ಥಳಗಳು:** ಎ) **ಕಪ್ಪುಶಿಲೆ:** ಜ್ಯೋತಿಗೌಡನಪುರ, ನಂಜೇದೇವನಪುರ, ಸಂತೇಮರಹಳ್ಳೀ, ಯಲಕ್ಕೂರು, ಹರದನಹಳ್ಳಿ, ವೀರನಪುರ ಹಾಗೂ ಸುತ್ತ ಮುತ್ತಲ ಸ್ಥಳಗಳಲ್ಲಿ ಕಪ್ಪು ಶಿಲೆಗಳು ದೊರಕುತ್ತವೆ. ಈ ಶಿಲೆಯನ್ನು ಅಲಂಕಾರಿಕ ವಸ್ತುಗಳಿಗಾಗಿ ಉಪಯೋಗಿಸುತ್ತಾರೆ. ಬಿ) **ಕಟ್ಟಡದ ಕಲ್ಲು:** ಚಾಮರಾಜನಗರ ತಾಲೂಕಿನ ಎಲ್ಲಾ ಕಡೆಯಲ್ಲಿಯೂ ಕಟ್ಟಡದ ಕಲ್ಲು ದೊರಕುತ್ತದೆ. ಇದನ್ನು ಕಟ್ಟಡ ನಿರ್ಮಾಣಕ್ಕಾಗಿ ಉಪಯೋಗಿಸುತ್ತಾರೆ. ಸಿ) **ಸಾಮಾನ್ಯ ಮರಳು:** ಸ್ವಲ್ಪ ಪ್ರಮಾಣದಲ್ಲಿ ಸುವರ್ಣಾವತಿ ನದಿ, ಚಿಕ್ಕಹೊಳೆ ನದಿ, ಪಾತ್ರದಲ್ಲಿ ಸಾಮಾನ್ಯ ಮರಳು ದೊರೆಯುತ್ತದೆ. ಇದನ್ನು ಕಟ್ಟಡ ನಿರ್ಮಾಣಕಾರ್ಯದಲ್ಲಿ ಉಪಯೋಗಿಸುತ್ತಾರೆ.

**ಯಳಂದೂರು ತಾಲೂಕಿನಲ್ಲಿ ಕಪ್ಪುಶಿಲೆಗಳು ದೊರಕುವ ಸ್ಥಳಗಳು:** ಎ) **ಕಪ್ಪುಶಿಲೆ:** ಗುಂಬಳ್ಳಿ, ಯರಗಂಬಳ್ಳಿಗಳಲ್ಲಿ ಅಲಂಕಾರಿಕ ಕಪ್ಪುಶಿಲೆಗಳು ದೊರಕುತ್ತದೆ. ಬಿ) **ಕಟ್ಟಡದ ಕಲ್ಲು:** ತಾಲೂಕಿನ ಸುತ್ತಮುತ್ತಲ ಪ್ರದೇಶಗಳಲ್ಲಿ ದೊರಕುತ್ತವೆ. ಇದನ್ನು ಕಟ್ಟಡಗಳಿಗೆ ಉಪಯೋಗಿಸುತ್ತಾರೆ. ಸಿ) **ಸಾಮಾನ್ಯ ಮರಳು**: ತಾಲೂಕಿನ ಕೆಲ ಭಾಗಗಳಲ್ಲಿ ದೊರಕುತ್ತದೆ.

**ಗುಂಡ್ಲುಪೇಟೆ ತಾಲೂಕಿನಲ್ಲಿ ಕಪ್ಪುಶಿಲೆ ದೊರಕುವ ಸ್ಥಳಗಳು:** ಎ) **ಕಪ್ಪುಶಿಲೆ:** ಅಂಗಳ, ಅಂಗಳಾಪುರ, ಬೊಮ್ಮನಹಳ್ಳಿ ಮತ್ತು ತೆರಕಣಾಂಬಿ ಹಾಗೂ ಸುತ್ತಮುತ್ತಲಿನಲ್ಲಿ ಕಪ್ಪು ಶಿಲೆಗಳು ದೊರಕುತ್ತದೆ. ಬಿ) **ಕಟ್ಟಡದ ಕಲ್ಲು:** ತಾಲೂಕಿನ ಹಸಗೂಲಿ, ಅರೇಪುರ, ಕೋಟೆಕೆರೆ, ಹಿರೀಕಾಟಿ, ರಾಘವಪುರ, ಬಾಚಹಳ್ಳಿ, ಮಡಹಳ್ಳಿಗಳಲ್ಲಿ ಕಟ್ಟಡದ ಕಲ್ಲು ದೊರಕುತ್ತವೆ. ಸಿ) **ಸಾಮಾನ್ಯ ಮರಳು:** ಇದು ತಾಲೂಕಿನ ಕೆಲವು ಭಾಗಗಳಲ್ಲಿ ದೊರಕುತ್ತದೆ. ಡಿ) **ಸುಣ್ಣದ ಕಲ್ಲು:** ಚಿಕ್ಕಣಾಪುರದಲ್ಲಿ ದೊರಕುತ್ತದೆ. ಇದನ್ನು ಮನೆಯ ಗೋಡೆಗಳಿಗೆ ಉಪಯೋಗಿಸುತ್ತಾರೆ.

**ಕೊಳ್ಳೇಗಾಲ ತಾಲೂಕಿನಲ್ಲಿ ದೊರಕುವ ಕಪ್ಪುಶಿಲೆಗಳ ಸ್ಥಳಗಳು:** ಎ) **ಕಪ್ಪುಶಿಲೆ:** ಚಂಗಡಿ, ಪೊನ್ನಾಚಿ, ಮರೂರು, ಮಾರ್ಟಳ್ಳಿ, ಬೈಲೂರು, ಮೀಣ್ಯಂ ಹಾಗೂ ಸುತ್ತಮುತ್ತಲ ಕಡೆಗಳಲ್ಲಿ ಕಪ್ಪುಶಿಲೆಗಳು ದೊರಕುತ್ತವೆ.ಬಿ) **ಕಟ್ಟಡದ ಕಲ್ಲು:** ತಾಲೂಕಿನ ಸುತ್ತಮುತ್ತಲ ಪ್ರದೇಶಗಳಲ್ಲಿ ದೊರಕುತ್ತದೆ. ಸಿ) **ಸಾಮಾನ್ಯ ಮರಳು:** ಕಾವೇರಿ ತೀರ ಪ್ರದೇಶವಾದ ಮುಳ್ಳೂರು, ಹರಳೆ, ಹಳೇ ಹಂಪಾಪುರ, ಸರಗೂರು, ದಾಸನಪುರಗಳಲ್ಲಿ ದೊರಕುತ್ತವೆ. ಡಿ) **ಬೆಣಚು ಕಲ್ಲು:** ತಾಲೂಕಿನ ಅಜ್ಜಿಪುರದಲ್ಲಿ ದೊರಕುತ್ತದೆ.ಇದನ್ನು ರಿಪ್ರಾಕ್ಟರಿಗಳಲ್ಲಿ ಉಪಯೋಗಿಸುತ್ತಾರೆ.

## ಭೂಕಂಪಗಳು

ಹಿಂದೆ ವಿನಾಶಕಾರಿಯಾದ ಭೂಕಂಪಗಳಿಗೆ ಹೆಸರಾಗಿದ್ದ ಹಿಮಾಲಯ ಪರ್ವತ ಶ್ರೇಣಿ ಮತ್ತು ಅದರ ತಳದಲ್ಲಿರುವ ವಿಸ್ತಾರವಾದ ಬಯಲು ಪ್ರದೇಶ ಇವುಗಳ ಜೊತೆಗೆ ಹೋಲಿಸಿದರೆ ದಖನ್ ಪ್ರಸ್ಥಭೂಮಿಯ ಒಂದು ಭಾಗವಾಗಿರುವ ಕರ್ನಾಟಕವು ತುಲನಾತ್ಮಕವಾಗಿ ಶಾಂತವಾಗಿದೆ ಮತ್ತು ಹೆಚ್ಚು ತೀವ್ರತೆಯ ಭೂಕಂಪಗಳಿಗೆ ಈಡಾಗಿಲ್ಲ. ಕರ್ನಾಟಕದ ಹೆಚ್ಚಿನ ಭಾಗಗಳಲ್ಲಿ ಲಘು ಭೂಕಂಪನಗಳಾಗಿದ್ದು, ಜೀವ ಮತ್ತು ಆಸ್ತಿಗೆ ನಷ್ಟವುಂಟಾಗುವ ರೀತಿಯಲ್ಲಿ ಇಲ್ಲಿ ತೀವ್ರತರದ ಕಂಪನಗಳು ಆಗಿಲ್ಲ. ಭಾರತ ಪರ್ಯಾಯ ದ್ವೀಪವನ್ನು ಹಿಂದೆ ಇದ್ದ ಒಂದು ದೊಡ್ಡ ಭೂಖಂಡದ ಪೂರ್ವ ದಿಕ್ಕಿನ ಶೇಷ ಭಾಗವೆಂದು ಪರಿಗಣಿಸಲಾಗಿದೆ ಮತ್ತು

ಆ ಭೂಖಂಡವು ಬೇರ್ಪಟ್ಟು ಅರಬ್ಬೀ ಸಮುದ್ರದ ಅಡಿಯಲ್ಲಿ ಮುಳುಗಿ ಹೋಗಿ ಭೂಮಿ ಮತ್ತು ಸಮುದ್ರದ ವಿತರಣೆಯಲ್ಲಿ ಆಗಾಧ ಬದಲಾವಣೆಯಾಯಿತೆಂದು ನಂಬಲಾಗಿದೆ. ಆ ದೊಡ್ಡ ಭೂಖಂಡದ ಪಶ್ಚಿಮ ಭಾಗವು ಒಡೆದು ದೂರಕ್ಕೆ ಸರಿದಾಗ ಉಳಿದಿರುವ 'ಗಾಯ'ದ ಗುರುತೇ ಪಶ್ಚಿಮ ಘಟ್ಟದ ಉದ್ದವಾದ ನೇರವಾದ ಅಂಚೆಂದು ಪರಿಗಣಿಸಲಾಗಿದೆ.

## ಅಂತರ್ಜಲ

ಕರ್ನಾಟಕವು ದಖನ್ ಪ್ರಸ್ಥಭೂಮಿಯ ಒಂದು ಭಾಗವಾಗಿದ್ದು, ಸಮುದ್ರ ಮಟ್ಟದಿಂದ ಸರಾಸರಿ ೭೦೦ ಮೀ. ಎತ್ತರದಲ್ಲಿದ್ದು ಗಡುಸಾದ ಸಾಂದ್ರವಾದ ಸ್ಫಟಿಕ ಶಿಲೆಗಳಿಂದ ರೂಪಿತವಾಗಿದೆ. ವಾಯುಗುಣವು ಹೆಚ್ಚಿನ ಭಾಗದಲ್ಲಿ ಶುಷ್ಕವಾಗಿದ್ದು, ಸರಾಸರಿ ಮಳೆಯು ೬೦೦ ಮಿ.ಮೀ. ಇರುವುದರಿಂದ ಅಂತರ್ಜಲದ ಅಸ್ತಿತ್ವ ಮತ್ತು ಹರಿವುಗಳಿಗೆ ಇತಿಮಿತಿಗಳಿವೆ. ಕರ್ನಾಟಕದ ಗಟ್ಟಿ ಶಿಲೆಗಳು ಸಾಕಷ್ಟು ರಂಧ್ರಭರಿತವಲ್ಲದ್ದರಿಂದ ಶಿಲಾ ಪ್ರವಾಹವು ಘನವಾಗಿರದ ಪ್ರದೇಶಗಳಂತೆ ಹೆಚ್ಚಿನ ಪ್ರಮಾಣದಲ್ಲಿ ಅವು ನೀರನ್ನು ಹಿಡಿದಿಟ್ಟುಕೊಳ್ಳುವುದಿಲ್ಲ. ಗಮನಾರ್ಹವಾದ ವಿಷಯವೆಂದರೆ ಮೇಲ್ಪದರದಲ್ಲಿ ಸತತವಾದ ಮಳೆ ಮತ್ತು ನೀರುಗಳ ಪ್ರಭಾವಕ್ಕೆ ನಿರಂತರವಾಗಿ ತೆರೆದಿಡಲ್ಪಟ್ಟಿದ್ದು ಈ ಬಂಡೆಗಳು ಶಿಥಿಲೀಕರಣಕ್ಕೆ ಒಳಪಟ್ಟು ರಂಧ್ರಭರಿತವಾಗಿ ಸಾಧಾರಣ ಪ್ರಮಾಣದಲ್ಲಿ ಅಂತರ್ಜಲವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿವೆ.

**ಅಂತರ್ಜಲ ಸಾಮರ್ಥ್ಯ:** ಗಡಸುಕಲ್ಲಿನ ಮೇಲೆ ಹರಡಿರುವ ಶಿಥಿಲವಾದ ಕಲ್ಲಿನ ಹೊರ ಪದರು ಸುಮಾರು ೧೨ ರಿಂದ ೩೦ ಮೀ.ಗಳಷ್ಟು ದಪ್ಪವಾಗಿರುತ್ತದೆ. ಅಭೇದ್ಯ ಗಡಸುಕಲ್ಲಿನ ಸ್ಥರದ ಮೇಲ್ಭಾಗದ ಈ ವಲಯದಲ್ಲಿ ಅಂತರ್ಜಲವು ತುಂಬಿರುತ್ತದೆ. ಈ ವಲಯದಲ್ಲಿಯೇ, ಮಳೆಗಾಲದಲ್ಲಿ ನೀರು ಜಿನುಗಿ ತುಂಬಿಕೊಳ್ಳುತ್ತದೆ; ಮುಂದಿನ ದಿನಗಳಲ್ಲಿ ಪಂಪು, ಕಪಿಲೆಗಳ ಮೂಲಕ ಬಳಕೆಗೆ, ತಗ್ಗಿನ ಪ್ರದೇಶಗಳ ಕಡೆ ಹರಿವಿಗೆ ಹಾಗೂ ಹೊಳೆ ಹಳ್ಳಗಳ ಬೇಸಿಗೆಯ ಹರಿವಿಗೆ ಈ ನೀರು ನೆರವಾಗುತ್ತದೆ. ಒಂದು ನದೀ ಕಣಿವೆಯಲ್ಲಿ ಒಂದು ವರ್ಷದಲ್ಲಿ ಬಿದ್ದ ಮಳೆಯಲ್ಲಿ ಎಷ್ಟು ಭಾಗ ನೆಲದೊಳಗೆ ಜಿನುಗುತ್ತದೆ, ಎನ್ನುವುದನ್ನು ಕಂಡು ಹಿಡಿದರೆ ದೊರೆಯಬಹುದಾದ ಅಂತರ್ಜಲದ ಪ್ರಮಾಣ ಎಷ್ಟು ಎನ್ನುವುದನ್ನು ಅಂದಾಜು ಮಾಡಬಹುದು.

**ಬಾವಿಗಳಲ್ಲಿ ನೀರಿನ ಪ್ರಮಾಣ:** ತೋಡಿದ ಬಾವಿಗಳ ಮತ್ತು ಕೊರೆದ ಬಾವಿಗಳ ಆಯ್ದ ಮಾದರಿಗಳನ್ನು ತೆಗೆದುಕೊಂಡು ನಡೆಸಿದ ಭಾರೀ ಸಂಖ್ಯೆಯ ಪಂಪು ಸೆಟ್ಟುಗಳ ಪರೀಕ್ಷೆಯ ಫಲಿತಾಂಶವನ್ನು ಅಂಕಿ ಅಂಶ ಆಧಾರದ ಮೇಲೆ (೧) ನೈಸ್ (೨) ಗ್ರಾನೈಟ್ (೩) ಬಸಾಲ್ಟ್ ಮತ್ತು (೪) ಪದರುಶಿಲೆಗಳ ಪ್ರದೇಶಗಳಲ್ಲಿನ ರಾಜ್ಯದಲ್ಲಿರುವ ಬಾವಿಗಳ ನೀರಿನ ಲಭ್ಯತೆಯ ಪ್ರಮಾಣದ ಅಂದಾಜು ಮಾಡಬಹುದು. ಬಸಾಲ್ಟುಗಳಲ್ಲಿ ಸರಾಸರಿ ಒಂದು ಸೆಕೆಂಡಿಗೆ ಒಂದು ಲೀಟರು ನೀರು ಸರಬರಾಜಿರುವ ಸಮಾನ ಸನ್ನಿವೇಶವಿದೆ. (ಒಂದು ಗಂಟೆಗೆ ೩,೬೦೦ ಲೀಟರುಗಳು). ಗ್ರಾನೈಟುಗಳು ಮತ್ತು ನೈಸುಗಳಲ್ಲಿ, ಅದರಲ್ಲಿಯೂ ದೊಡ್ಡ ವ್ಯಾಸವುಳ್ಳ ಅಥವಾ ಆಯತಾಕಾರದ ಬಾವಿಗಳಲ್ಲಿ, ಲಭ್ಯತೆಯ ಪ್ರಮಾಣ ಒಂದು ಸೆಕೆಂಡಿಗೆ ೦.೮೮ ಲೀಟರ್; ಆದರೆ ಪದರು ಶಿಲೆಗಳಲ್ಲಿ ಅತಿ ಕಡಿಮೆ ಲಭ್ಯತೆ, ಅಂದರೆ ಸೆಕೆಂಡಿಗೆ ೦.೫ ಲೀಟರ್, ಇರುತ್ತದೆ. ಒಂದು ನೀರಾವರಿ ಕಾಲಮಾನ, ಅಂದರೆ ೧೫೦ ದಿನಗಳಲ್ಲಿ ಬಾವಿಯಿಂದ ನೀರನ್ನು ಎತ್ತಲಾಗುತ್ತದೆ ಎಂದು ಊಹಿಸಿ (ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಒದಗಿಸಿದ ಅಂಕಿ ಅಂಶಗಳ ಪ್ರಕಾರ ಪಂಪುಗಳು ಕೆಲಸ ಮಾಡುವ ಸರಾಸರಿ ಗಂಟೆಗಳು) ಗ್ರಾನೈಟು, ನೈಸು ಮತ್ತು ಬಸಾಲ್ಟು ವಲಯಗಳಲ್ಲಿ ೯,೦೦೦ ಘನ ಮೀಟರುಗಳಷ್ಟು ಮತ್ತು ಪದರು ಶಿಲೆಗಳಿರುವಲ್ಲಿ ೫,೪೦೦ ಘಟನ ಮೀಟರುಗಳಷ್ಟು ನೀರು ಸಿಗುವುದು.

**ನೀರಿನ ಸದುಪಯೋಗ:** ಶೇಕಡ ೫೦ರಷ್ಟು ಬಾವಿಗಳಿಗೆ ನೀರನ್ನೆತ್ತಲು ವಿದ್ಯುಚ್ಛಕ್ತಿಯ ಪಂಪುಗಳನ್ನು ಅಳವಡಿಸಲಾಗಿದೆ. ಮೂರರಿಂದ ಹತ್ತು ಅಶ್ವಶಕ್ತಿಯುಳ್ಳ ಮೋಟಾರುಗಳನ್ನು ಉಪಯೋಗಿಸಲಾಗುತ್ತಿದೆ. ಸಾಧಾರಣವಾಗಿ ಮೂರು – ನಾಲ್ಕು ಗಂಟೆಗಳು ಪಂಪನ್ನು ನಡೆಸಿದರೆ ಬಾವಿಯಲ್ಲಿರುವ ನೀರು ಖಾಲಿಯಾಗುತ್ತದೆ. ಮತ್ತೆ ಮೊದಲಿನ ಮಟ್ಟಕ್ಕೆ ನೀರು ಬರಬೇಕಾದರೆ, ಒಂದು ದಿವಸಕ್ಕಿಂತ ಜಾಸ್ತಿ ಸಮಯ ಬೇಕಾಗುತ್ತದೆ. ಬೇಸಿಗೆ ತಿಂಗಳುಗಳಲ್ಲಿ, ನೀರಿನ ಮಟ್ಟವು ಕೆಳಗೆ ಹೋಗುವ ಕಾರಣ ಹೆಚ್ಚಿನ ಬಾವಿಗಳು ಒಣಗಿ ಹೋಗುತ್ತವೆ, ಅಥವಾ ನೀರಾವರಿಗೆ ಸಾಕಷ್ಟು ಪ್ರಮಾಣದ ನೀರನ್ನು ಒದಗಿಸಲಾರವು. ಇತ್ತೀಚಿನ ವರ್ಷಗಳಲ್ಲಿ ಕೊಳವೆ ಬಾವಿಗಳು ಹೆಚ್ಚು ಹೆಚ್ಚು ಬಳಕೆಗೆ ಬರುತ್ತಿವೆ. ಇವುಗಳ ವ್ಯಾಸ ೧೫೦ ಮಿ.ಮಿ. (೬") ಇರುತ್ತದೆ. ಮತ್ತು ೩೦ ರಿಂ ೬೦ ಮೀ. ಆಳದವರೆಗೆ ಅವು ಕೊರೆಯಲ್ಪಡುತ್ತವೆ. ಈ ಬಾವಿಗಳು ಒದಗಿಸುವ ನೀರಿನ ಸರಾಸರಿ ಪ್ರಮಾಣ ಒಂದು ನಿಮಿಷಕ್ಕೆ ೬೦ ರಿಂದ ೮೦ ಲೀಟರುಗಳಷ್ಟು (ಗಂಟೆಗೆ ೮೦೦ ರಿಂದ ೧೦೦೦ ಗ್ಯಾಲನ್‌ಗಳಷ್ಟು), ವರ್ಷದಾದ್ಯಂತವೂ ನಂಬಲರ್ಹವಾದ ಸರಬರಾಜನ್ನು ಕೊಳವೆಬಾವಿಗಳು ನೀಡುತ್ತವೆ. ಸದ್ಯಕ್ಕೆ ಅಸ್ತಿತ್ವದಲ್ಲಿ ಇರುವ ಈ ಬಾವಿಗಳು ಮನೆ ಮತ್ತು ಕೈಗಾರಿಕೆಗಳ ಉಪಯೋಗಕ್ಕೆ ನೀರನ್ನು ಒದಗಿಸುತ್ತವೆ. ಇಂಥ ಬಾವಿಗಳನ್ನು ಒಟ್ಟುಗೂಡಿಸಿ ಅವುಗಳೆಲ್ಲದರಿಂದ ಬಂದ ನೀರನ್ನು ಕಲೆ ಹಾಕಿ ನೀರಾವರಿಗೆ ಉಪಯೋಗಿಸುವುದು ಸಾಧ್ಯವಿದೆ. ಹೆಚ್ಚು ಅಗಲವಾದ ಬಾವಿಗಳನ್ನು ತೋಡುವುದರಿಂದ ಕೃಷಿಗೆ ಯೋಗ್ಯವಾದ ಫಲವತ್ತಾದ ಭೂಮಿ ಪೋಲಾಗುತ್ತದೆ, ಹಾಗೂ ಅದನ್ನು ತೋಡಲು ಬಹಳ ಕಾಲ ಬೇಕಾಗುತ್ತದೆ. ಕೊಳವೆ ಬಾವಿಗಳು ವ್ಯವಸಾಯದ ಜಮೀನನ್ನು ಹಾಳು ಮಾಡುವುದಿಲ್ಲ; ಕೆಲವು ದಿವಸಗಳಲ್ಲಿಯೇ ಅವನ್ನು ಕೊರೆದು ಮುಗಿಸಬಹುದು. ಈ ಕೊಳವೆ ಬಾವಿಗಳು ಹೆಚ್ಚು ಹೆಚ್ಚಾಗಿ ಜನಪ್ರಿಯವಾಗುವುದು ಖಂಡಿತ. ಕರ್ನಾಟಕ ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಅಂತರ್ಜಲ ವಿಭಾಗವಿದೆ. ಈ ವಿಭಾಗವು ಕೊಳವೆ ಬಾವಿಗಳನ್ನು ಕೊರೆಯುವ ಘಟಕವನ್ನು ಹೊಂದಿದ್ದು, ಅದು ಒಂದು ವರ್ಷಕ್ಕೆ ೬೦೦ ಬಾವಿಗಳನ್ನು ಕೊರೆಯುವ ಸಾಮರ್ಥ್ಯ ಹೊಂದಿದೆ .

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿಯರವರ ಕಚೇರಿ ಅಂತರ್ಜಲ ಘಟಕವು ಮೈಸೂರು ಜಿಲ್ಲಾ ಪಂಚಾಯತ್‌ನ ಆಡಳಿತ ವ್ಯಾಪ್ತಿಗೆ ಒಳಪಟ್ಟು ೧೯೮೭ ರಿಂದ ಕಾರ್ಯನಿರ್ವಹಿಸುತ್ತಿದೆ. ಚಾಮರಾಜನಗರ ಜಿಲ್ಲೆಯ ರಚನೆಯ ಬಳಿಕವೂ ಪ್ರತ್ಯೇಕ ಅಂತರ್ಜಲ ಕಚೇರಿ ಪ್ರಾರಂಭವಾಗದ ಕಾರಣ ಜಿಲ್ಲೆಯ ಅಂತರ್ಜಲ ಕುರಿತ ತಾಂತ್ರಿಕ ಕೆಲಸ ಕಾರ್ಯಗಳನ್ನು ಮೈಸೂರಿನಲ್ಲಿರುವ ಕಚೇರಿಯಿಂದಲೇ ನಿರ್ವಹಿಸಿಕೊಂಡು ಬರಲಾಗುತ್ತಿದೆ. ಈ ಕಚೇರಿಯ ಮುಖ್ಯ ಉದ್ದೇಶಿತ ಕಾರ್ಯಚಟುವಟಿಕೆಗಳು ಈ ಕೆಳಕಂಡಂತಿವೆ.

೧) ಜಿಲ್ಲೆಯ ಅಂತರ್ಜಲ ಸಂಪನ್ಮೂಲಗಳ ಸಮೀಕ್ಷೆ ಮತ್ತು ಅನ್ವೇಷಣೆ, ೨) ಸಾರ್ವಜನಿಕರಿಗೆ, ಸರ್ಕಾರಿ ಇಲಾಖೆಗಳಿಗೆ, ಸಂಘ ಸಂಸ್ಥೆಗಳಿಗೆ, ಕುಡಿಯುವ ನೀರಿಗೆ ಹಾಗೂ ವ್ಯವಸಾಯಕ್ಕಾಗಿ ಕೊಳವೆ ಬಾವಿ/ತೋಡು ಬಾವಿಗಳಿಗೆ ಸ್ಥಳಗಳನ್ನು ಆಯ್ಕೆ ಮಾಡುವುದು, ೩) ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಆಯ್ದ ವೀಕ್ಷಣಾ ಬಾವಿ/ ಕೊಳವೆ ಬಾವಿಗಳಲ್ಲಿ ನಿರಂತರ ಅಂತರ್ಜಲ ಮಟ್ಟದ ದಾಖಲಾತಿ ಮತ್ತು ಅಧ್ಯಯನ, ೪) ರಾಷ್ಟ್ರೀಯ ಜಲವಿಜ್ಞಾನ ಯೋಜನೆಯಡಿ ಹೆಚ್ಚುವರಿಯಾಗಿ ನಿರ್ಮಿಸಿದ ಕೊಳವೆ ಬಾವಿಗಳಿಗೆ ಮತ್ತು ಅವುಗಳಿಗೆ ಅಳವಡಿಸಿದ ಸ್ವಯಂಚಾಲಿತ ಜಲಮಟ್ಟ ಮಾಪಕ ಯಂತ್ರಗಳಿಂದ ಅಂತರ್ಜಲದ ಏರಿಳಿತದ ಬಗ್ಗೆ ವಿವರಗಳನ್ನು ಸಂಗ್ರಹಿಸುವುದು ಮತ್ತು ಅವುಗಳ ಅಧ್ಯಯನ, ೫) ಕ್ಷೇತ್ರ ಕಾರ್ಯಕ್ರಮದಡಿ ಕಿರು ಜಲಾನಯನ ಸಮೀಕ್ಷೆ ಅಂತರ್ಜಲ ಸಂಪನ್ಮೂಲ ಪುನರ್ ಮೌಲ್ಯೀಕರಣ, ೬) ಅಂತರ್ಜಲ ಗುಣಮಟ್ಟದ ಅಧ್ಯಯನ, ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ, ವಿವಿಧ ಋತುಮಾನಗಳಲ್ಲಿ ಬೇಸ್ ಮತ್ತು ಟ್ರೆಂಡ್ ಅಂತರ್ಜಲ ಮಾದರಿ ಸಂಗ್ರಹಣೆ, ರಾಸಾಯನಿಕ ವಿಶ್ಲೇಷಣೆ ಹಾಗೂ ವರದಿ ತಯಾರಿಕೆ, ೭) ಅಂತರ್ಜಲ ಮರು ಪೂರೈಕೆಗಾಗಿ ಸಮಸ್ಯಾತ್ಮಕ

ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಿ, ಸೂಕ್ತ ಸ್ಥಳಗಳನ್ನು ಗುರುತಿಸಿ ತಾಂತ್ರಿಕ ಸಲಹೆ ನೀಡುವುದು ಹಾಗೂ ಇಲಾಖಾ ವತಿಯಿಂದ ಅಂತರ್ಜಲ ಮರ ಪೂರೈಕೆ ರಚನೆಗಳನ್ನು ನಿರ್ಮಿಸುವುದು, ೮) ಉಪಗ್ರಹ ಛಾಯಾಚಿತ್ರಗಳನ್ನು ಅರ್ಥೈಸಿ ಅವುಗಳ ಸಹಾಯದಿಂದ ಅಂತರ್ಜಲ ಕೊರತೆಯುಳ್ಳ ಪ್ರದೇಶಗಳನ್ನು ಗುರುತಿಸುವುದು, ೯) ವಿಫಲ ತೋಡು ಬಾವಿಗಳ ಜಂಟೀ ತಪಾಸಣೆ ನಡೆಸಿ ತಾಂತ್ರಿಕ ವರದಿ ನೀಡುವುದು, ೧೦) ಅಂತರ್ಜಲದ ಮರುಪೂರೈಕೆ, ಅಂತರ್ಜಲದ ಮಾಲಿನ್ಯ, ಮಳೆ ನೀರಿನ ಸಂಗ್ರಹಣೆ ಇತ್ಯಾದಿ ವಿಷಯಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಇತ್ಯಾದಿ.

ಚಾಮರಾಜನಗರ ಜಿಲ್ಲೆಯ ಒಟ್ಟು ೩೩ ಗ್ರಾಮಗಳಲ್ಲಿ ೪೨ ಜಲಮಟ್ಟ ಮಾಪನ ಮತ್ತು ವಿಶ್ಲೇಷಣೆ ಅಧ್ಯಯನಾ ಬಾವಿಗಳಿದ್ದು, ಅವುಗಳಲ್ಲಿ ೨೯ ಕೊಳವೆ ಬಾವಿಗಳಾಗಿವೆ. ೨೯ ಕೊಳವೆ ಬಾವಿಗಳ ಪೈಕಿ ೧೦ಕ್ಕೆ DWLR ಮಾಪಕಗಳನ್ನು ಅಳವಡಿಸಿ ಮಾಪನ ಮಾಡಲಾಗಿದೆ. ೨೦೦೫-೦೬ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು ೪೯೨ ದಾಖಲೆಗಳನ್ನು ಸಂಗ್ರಹಿಸಿ ಪ್ರತಿ ತಿಂಗಳೂ ಕೇಂದ್ರ ಕಚೇರಿಗೆ ವರದಿ ಕಳುಹಿಸಿ ಕಚೇರಿಯ ವಹಿಯಲ್ಲಿಯೂ ಸಹ ಜಲಮಟ್ಟವನ್ನು ದಾಖಲಿಸಲಾಗುತ್ತಿದೆ. ತಾಲೂಕುವಾರು ಅಂತರ್ಜಲ ಲಭ್ಯತೆ ಹಾಗೂ ಅಧ್ಯಯನ ವಿವರಗಳನ್ನು ಕೆಳಗಿನ ಕೋಷ್ಟಕ ೧.೪ ರಲ್ಲಿ ನೀಡಿದೆ.

**ಕೋಷ್ಟಕ ೧.೪: ಜಿಲ್ಲೆಯ ಬಾವಿಗಳ ಅಧ್ಯಯನ ವಿವರ ಹಾಗೂ ಅಂತರ್ಜಲ ಲಭ್ಯತೆ-೨೦೦೬-೦೭**

| | ವಿವರ | ಚಾಮರಾಜನಗರ | ಗುಂಡ್ಲುಪೇಟೆ | ಕೊಳ್ಳೇಗಾಲ | ಯಳಂದೂರು |
|---|---|---|---|---|---|
| ೧. | ಸಮುದ್ರ ಮಟ್ಟದಿಂದ ಎತ್ತರ (ಮೀ) | ೭೨೨.೨೧ | ೮೦೦.೧೬ | ೬೫೬.೫೮ | ೬೫೫.೨೫ |
| ೨. | ಒಟ್ಟು ಅಧ್ಯಯನ ನಡೆಸಿದ ಬಾವಿಗಳು | ೧೩ | ೧೧ | ೧೨ | ೦೨ |
| ೩. | ಅಂತರ್ಜಲ ಮಟ್ಟ | | | | |
| i) | ನೀರಾವರಿ ಪ್ರದೇಶ (ಮೀ) | | | | |
| | ಕನಿಷ್ಟ | ೦ | ೦ | ೪.೩೫ | ೩.೨೫ |
| | ಗರಿಷ್ಟ | ೦ | ೦ | ೯.೦೫ | ೭.೭೦ |
| ii) | ಖುಷ್ಕಿ ಪ್ರದೇಶ (ಮೀ) | | | | |
| | ಕನಿಷ್ಟ | ೨೯.೧ | ೨೪.೩ | ೧೬.೭ | ೧೧.೪೫ |
| | ಗರಿಷ್ಟ | ೪೨.೩೫ | ೩೩.೫ | ೨೪.೩ | ೨೧.೭೦ |
| ೪. | ಅಂತರ್ಜಲ ಲಭ್ಯತೆ (ಹೆ.ಮೀ) | ೪,೯೩೨.೦೭ | ೨,೮೨೨.೨೮ | ೨,೮೮೩.೯೩ | ೧,೨೯೨.೦೧ |

ರಾಷ್ಟ್ರೀಯ ಜಲವಿಜ್ಞಾನ ಯೋಜನೆಯಡಿ ಅಂತರ್ಜಲ ಕಚೇರಿಗೆ ಒದಗಿಸಿರುವ ಎರಡು ಗಣಕ ಯಂತ್ರಗಳಲ್ಲಿ ಟಾಟಾ GEMS ೩.೦ ತಂತ್ರಾಂಶ ಮತ್ತು Surfer ೮.೦ ತಂತ್ರಾಂಶಗಳನ್ನು ಅಳವಡಿಸಿ ಉಪಯೋಗಿಸಲಾಗುತ್ತಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ೧೦ DWLR ಗಳನ್ನು ಫೀಜೋ ಮೀಟರ್‌ಗಳಿಗೆ ಅಳವಡಿಸಲಾಗಿದೆ. ಗುಂಡ್ಲುಪೇಟೆ ತಾಲೂಕಿನ ಬೇಗೂರಿನ ಕೊಳವೆ ಬಾವಿಯಲ್ಲಿ ಮಲಿನತೆ ಕಾರಣ ಅಳವಡಿಸಿದ್ದ DWLRನ್ನು ಹೊರ ತೆಗೆದು ಜಲಮಟ್ಟ ಮಾಪನವನ್ನು ಸ್ಥಗಿತಗೊಳಿಸಲಾಗಿದೆ. ೨೦೦೨-೦೩ನೇ ಸಾಲಿನಲ್ಲಿ ಕಪ್ಪು ಪ್ರದೇಶವೆಂದು ವರ್ಗೀಕರಣಗೊಂಡಿರುವ ಕೊಳ್ಳೇಗಾಲ ತಾಲೂಕಿನ ಕುಡಿಯುವ ನೀರಿನ ಸಮಸ್ಯೆ ಇರುವ ಚೆಂಗವಾಡಿ, ಕಳ್ಳಿದೊಡ್ಡಿ, ಸುಂಡ್ರಳ್ಳಿ ಮತ್ತು ತೆಳ್ಳನೂರುಗಳಲ್ಲಿ ಕುಡಿಯುವ ನೀರಿನ ಜಲಮೂಲಗಳ ಸಂರಕ್ಷಣೆ ಮತ್ತು ನಿರಂತರತೆ ರಕ್ಷಿಸಲು ಭೂವೈಜ್ಞಾನಿಕವಾಗಿ ಸೂಕ್ತ ಸ್ಥಳಗಳಲ್ಲಿ ಅಡ್ಡಗಟ್ಟೆಗಳನ್ನು

ನಿರ್ಮಿಸಲಾಗಿದೆ. ಚಾಮರಾಜನಗರ ತಾಲೂಕಿನ ಬದನಗುಪ್ಪೆ ಹಾಗೂ ಮರಿಯಾಲ ಗ್ರಾಮಗಳಲ್ಲೂ ಮೂರು ಅಡ್ಡಗಟ್ಟೆಗಳನ್ನು ಹಾಗೂ ಒಂದು ಇಂಗುಬಾವಿಯನ್ನು ನಿರ್ಮಿಸಲಾಗಿದೆ.

೨೦೦೩–೦೪ನೇ ಸಾಲಿನಲ್ಲಿ ಕುಡಿಯುವ ನೀರಿನ ಜಲಮೂಲಗಳ ಸಂರಕ್ಷಣೆ ಮತ್ತು ನೀರಿನ ಇಳುವರಿ ಕಾಪಾಡುವ ದೃಷ್ಟಿಯಿಂದ ಕೊಳ್ಳೇಗಾಲ ತಾಲೂಕಿಗೆ ಹನೂರು ಗ್ರಾಮದಲ್ಲಿ ಒಂದು ಅಡ್ಡಗಟ್ಟೆ, ಉದ್ದನೂರು ಗ್ರಾಮದಲ್ಲಿ ಒಂದು ಇಂಗುಬಾವಿ, ಚಾಮರಾಜನಗರ ತಾಲೂಕಿನ ಮೇಲಾಜಿಪುರ, ಪಣ್ಯದ ಹುಂಡಿ, ಗುಂಡ್ಲುಪೇಟೆ ತಾಲೂಕಿನ ಮಾಡ್ರಳ್ಳಿ ಮತ್ತು ನಿಟ್ರೆ ಗ್ರಾಮಗಳಲ್ಲಿ ಒಂದೊಂದು ಅಡ್ಡಗಟ್ಟೆಗಳನ್ನು ಭೂ ವೈಜ್ಞಾನಿಕವಾಗಿ ಸೂಕ್ತವಾದ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ೨೦೦೫–೦೬ನೇ ಸಾಲಿನಲ್ಲಿ ಕ್ಲಿಷ್ಟಕರ ತಾಲೂಕುಗಳಲ್ಲಿ ಒಂದಾಗಿರುವ ಗುಂಡ್ಲುಪೇಟೆ ತಾಲೂಕಿನ ಹೆಗ್ಗಡಹಳ್ಳಿ, ತೊಂಡವಾಡಿ, ಕಿಟೆಕೆರೆ ಮಳವಳ್ಳಿ ಮತ್ತು ಪಂಜನಹಳ್ಳಿ ಗ್ರಾಮಗಳಲ್ಲಿ ತಲಾ ಒಂದೊಂದು ಚೆಕ್ ಡ್ಯಾಂಗಳನ್ನು ಕಚೇರಿಯಿಂದ ನಿರ್ಮಿಸಲಾಗಿದೆ.

**ಅಂತರ್ಜಲ ಜನಜಾಗೃತಿ ಶಿಬಿರ:** ಚಾಮರಾಜನಗರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟವು ತೀವ್ರವಾಗಿ ಕುಸಿದಿದ್ದು, ಹಾಲಿ ಇರುವ ಕೊಳವೆ ಬಾವಿಗಳ ಇಳುವರಿ ಕಡಿಮೆಯಾಗಿರುತ್ತದೆ. ಅನಿಯಮಿತ ಮತ್ತು ಅನಿರ್ಬಂಧಿತ ಕೊಳವೆ ಬಾವಿಗಳ ನಿರ್ಮಾಣವೇ ಇದಕ್ಕೆ ಮೂಲಕಾರಣವೆಂದು ಅಭಿಪ್ರಾಯಪಡಲಾಗಿದೆ. ಅತೀ ಆಳದ ಕೊಳವೆ ಬಾವಿಗಳ ನಿರ್ಮಾಣದ ನಿರ್ಬಂಧ, ಅಂತರ್ಜಲ ಮರು ಪೂರೈಕೆ ಪ್ರಾಮುಖ್ಯತೆ, ಮಳೆ ನೀರಿನ ಸದುಪಯೋಗ, ಕುಡಿಯುವ ನೀರಿಗೆ ಆದ್ಯತೆ, ಪರಿಸರ ಹಾಗೂ ಅರಣ್ಯ ನಾಶದಿಂದ ಅಸಮರ್ಪಕ ಮಳೆ ಮುಂತಾದ ಪ್ರಮುಖ ವಿಚಾರಗಳನ್ನು ೨೦೦೩–೦೪ನೇ ಸಾಲಿನಲ್ಲಿ ಏರ್ಪಡಿಸಿದ್ದ ಶಿಬಿರದಲ್ಲಿ ಚರ್ಚಿಸಿ ಅಂತರ್ಜಲ ಸಂರಕ್ಷಣೆ ಮಹತ್ವದ ಬಗ್ಗೆ ರೈತರಿಗೆ ಸಾರ್ವಜನಿಕರಿಗೆ ಹಾಗೂ ಅಧಿಕಾರಿಗಳಿಗೆ ತಿಳಿಸಿ ಹೇಳಲಾಗಿದೆ.

## ನದೀಜಾಲ

ಜಿಲ್ಲೆಯ ಗಡಿ ಮತ್ತು ಒಳಭಾಗದಲ್ಲಿ ಸಾಧಾರಣ ಪ್ರಮಾಣದ ನದಿಗಳು ಮತ್ತು ಸಣ್ಣ ಝರಿಗಳು ಹರಿಯುತ್ತವೆ. ಅವುಗಳಲ್ಲಿ ಕಾವೇರಿ ನದಿ, ಕಬಿನಿ, ಸುವರ್ಣಾವತಿ, ಚಿಕ್ಕಹೊಳೆ, ಗುಂಡಾಲ್ ಮತ್ತು ಮಾಯಾರ್ ನದಿಗಳು ಪ್ರಮುಖವಾದವುಗಳಾಗಿವೆ.

**ಕಾವೇರಿ ಕಣಿವೆ:** ರಾಜ್ಯದಲ್ಲಿ ಕಾವೇರಿ ಕಣಿವೆಯ ಪ್ರದೇಶ ೮೧,೧೫೫ ಚ.ಕಿ.ಮೀ. ವರೆಗೂ ಪ್ರಸರಿಸಿದ್ದು, ಕರ್ನಾಟಕ, ಕೇರಳ ಮತ್ತು ತಮಿಳುನಾಡು ಈ ಮೂರು ರಾಜ್ಯಗಳಲ್ಲಿ ಹಂಚಿಹೋಗಿದೆ. ಇದರ ಜಲಾನಯನ ಭೂಮಿಯು ಶೇ.೪೨.೨ ಭಾಗ ಕರ್ನಾಟಕದಲ್ಲಿಯೂ ಶೇ.೩.೫ ಭಾಗ ಕೇರಳದಲ್ಲಿಯೂ ಮತ್ತು ಶೇ.೫೪.೩ ಭಾಗ ತಮಿಳುನಾಡಿನಲ್ಲಿಯೂ ಇದೆ. ಕಾವೇರಿ ನದಿಯ ಉಗಮ ಸ್ಥಾನವು ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ (ಪಶ್ಚಿಮ ಘಟ್ಟಗಳಲ್ಲಿ) ಇದೆ. ಇದು ಬಂಗಾಳಕೊಲ್ಲಿಯನ್ನು ಸೇರುವ ಮೊದಲು ೮೦೪ ಕಿ.ಮೀ. ದೂರ ಕರ್ನಾಟಕ ರಾಜ್ಯ ಮತ್ತು ತಮಿಳುನಾಡಿನಲ್ಲಿ ಹರಿಯುತ್ತದೆ. ಈ ನದಿಯು ೬೪ ಕಿ.ಮೀ. ಉದ್ದದವರೆಗೂ ಈ ಎರಡೂ ರಾಜ್ಯಗಳ ಗಡಿ ರೇಖೆಯಾಗಿ ಹರಿಯುತ್ತದೆ. ಕರ್ನಾಟಕ ರಾಜ್ಯದಲ್ಲಿ ಇದು ಒಟ್ಟು ೩೨೦ ಕಿ.ಮೀ. ಉದ್ದಕ್ಕೆ ಹರಿಯುತ್ತದೆ. ಕರ್ನಾಟಕದಲ್ಲಿ ಇದರ ಪ್ರಮುಖ ಉಪನದಿಗಳೆಂದರೆ, ಹೇಮಾವತಿ, ಲಕ್ಷ್ಮಣತೀರ್ಥ, ಹಾರಂಗಿ, ಕಬಿನಿ, ಸುವರ್ಣಾವತಿ, ಲೋಕಪಾವನಿ, ಶಿಂಷಾ ಮತ್ತು ಅರ್ಕಾವತಿ. ಕರ್ನಾಟಕದಲ್ಲಿರುವ ಇದರ ಕಣಿವೆಯ ಪ್ರದೇಶದ ವಿಸ್ತೀರ್ಣ ೩೪,೨೭೩ ಚ.ಕಿ.ಮೀ. ಮತ್ತು ವರ್ಷದಲ್ಲಿ ಸರಾಸರಿ ನೀರು ಹರಿಯುವಿಕೆ

೧,೧೦೦ ಕೋಟಿ ಘನ ಮೀ. ಇದಕ್ಕೆ ಮಳೆ ನೀರು ಬಂದು ಸೇರುವ ಮುಖ್ಯ ಜಲಾನಯನ ಪ್ರದೇಶಗಳು ಕೊಡಗು, ಚಿಕ್ಕಮಗಳೂರು, ಹಾಸನ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿವೆ.

**ಕಾವೇರಿ ನದಿ:** ಕಾವೇರಿ ನದಿಯು ಪವಿತ್ರತೆ, ವ್ಯಾಪಕತೆ, ರಮಣೀಯತೆ ಮತ್ತು ವ್ಯವಸಾಯ ಹಾಗೂ ಇತರೆ ಉಪಯುಕ್ತತೆಗಳ ಸಮಗ್ರ ದೃಷ್ಟಿಯಿಂದ "ದಕ್ಷಿಣ ಗಂಗೆ" ಎಂದು ಖ್ಯಾತಿ ಪಡೆದಿದೆ; ಇದರ ಹರಿವಿನ ಪ್ರದೇಶವೆಲ್ಲ ಪುಣ್ಯ ಭೂಮಿಯೆಂದು ಪರಿಗಣಿಸಲ್ಪಟ್ಟಿದೆ. ಕರ್ನಾಟಕದ ಕೊಡಗು. ಜಿಲ್ಲೆಯ ಬ್ರಹ್ಮಗಿರಿಯ ತಲಕಾವೇರಿಯಲ್ಲಿ ಈ ನದಿಯ ಉಗಮ ಸ್ಥಾನವಿದೆ. ಇದು ಸಾಮಾನ್ಯವಾಗಿ ಆಗ್ನೇಯ ದಿಕ್ಕಿನ ಕಡೆ ಪ್ರವಹಿಸಿ ಕರ್ನಾಟಕದ ಪ್ರಸ್ಥಭೂಮಿಯನ್ನು ದಾಟಿ ಕೊನೆಗೆ ತಮಿಳುನಾಡಿನಲ್ಲಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಬೇಸಿಗೆಯಲ್ಲಿ ಎಲ್ಲಿಂದಲಾದರೂ ದಾಟಬಹುದಾದಷ್ಟು ನೀರು ಕಮ್ಮಿಯಗಿದ್ದು ಮಳೆಗಾಲದಲ್ಲಿ ೬ ರಿಂದ ೯ ಮೀಟರ್ ಆಳದಷ್ಟು ನೀರು ತುಂಬಿ ರಭಸದಿಂದ ಹರಿಯುತ್ತದೆ. ಪಶ್ಚಿಮ ಘಟ್ಟಗಳಲ್ಲೇ ಹುಟ್ಟುವ ಪ್ರಮುಖ ಉಪನದಿಯಾದ ಕಬಿನಿಯನ್ನು ಸೇರುವ ಮೊದಲು, ಅದರ ಪಾತ್ರ ಸರಾಸರಿ ೩೦೦ ಮೀ. ನಿಂದ ೪೦೦ ಮೀಟರ್‌ವರೆಗೂ ಅಗಲವಾಗುತ್ತದೆ. ಈ ಜಾಗದಲ್ಲಿ ಅದು ಇನ್ನೂ ವಿಶಾಲವಾಗಿ ಹರಿಯುತ್ತದೆ. ಇದರ ತಳಕಲು ಬಂಡೆಗಳಿಂದಲೇ ಕೂಡಿರುತ್ತದೆ.

ಕಾವೇರಿ ನದಿಯು ಚಾಮರಾಜನಗರ ಜಿಲ್ಲೆಯನ್ನು ಕೊಳ್ಳೇಗಾಲ-ತಿರುಮಕೂಡಲು ನರಸೀಪುರ ಗಡಿಯಲ್ಲಿ ಪ್ರವೇಶಿಸುತ್ತದೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ ಕೊಳ್ಳೇಗಾಲ-ತಿರುಮಕೂಡಲು ನರಸೀಪುರ ತಾಲೂಕುಗಳ ಗಡಿಯಾಗಿ, ನಂತರ ಕೊಳ್ಳೇಗಾಲ-ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕುಗಳ ಗಡಿಯಾಗಿ, ಮುಂದೆ ರಾಮನಗರ ಜಿಲ್ಲೆಯ ಕನಕಪುರ-ಕೊಳ್ಳೇಗಾಲ ತಾಲೂಕುಗಳ ಗಡಿಯಾಗಿ ಹರಿದು, ನಂತರ ಕೊಳ್ಳೇಗಾಲ ತಾಲೂಕು ಮತ್ತು ತಮಿಳುನಾಡು ರಾಜ್ಯಗಳ ಗಡಿಯಾಗಿ ಪ್ರವಹಿಸಿ ಕೊಳ್ಳೇಗಾಲ ತಾಲೂಕಿನ ಈಶಾನ್ಯ ಮೂಲೆಯಲ್ಲಿ, ಮಹದೇಶ್ವರ ಬೆಟ್ಟ ಶ್ರೇಣಿಯ ಆಗ್ನೇಯ ಅಂಚಿನಲ್ಲಿ ಬೋಡಮಲ್ಬೆ ಬೆಟ್ಟದ ಬಳಿ ಕರ್ನಾಟಕದ ಎಲ್ಲೆಯನ್ನು ಬಿಟ್ಟು, ತಮಿಳುನಾಡಿನತ್ತ ಸಾಗುತ್ತದೆ. ಅಲ್ಲಿಂದ ಮುಂದೆ ಹರಿದು ತಮಿಳುನಾಡಿನ ಕಾವೇರಿ ಪಟ್ಟಣದ ಬಳಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಜಿಲ್ಲೆಯ ಈಶಾನ್ಯ ಮತ್ತು ಪೂರ್ವ ಗಡಿಯನ್ನು ನಿರ್ಧರಿಸುವಲ್ಲಿ ಕಾವೇರಿ ನದಿಯ ಪಾತ್ರ ಬಹು ಪ್ರಮುಖವಾದುದಾಗಿದೆ. ಈ ನದಿಯು ಜಿಲ್ಲೆಯ ಗಡಿಯಲ್ಲಿ ಸುಮಾರು ೧೧೦ ಕಿ.ಮೀ ದೂರ ಹರಿಯುತ್ತದೆ. ಕಾವೇರಿ ನದಿಯ ಗಗನಚುಕ್ಕಿ-ಭರಚುಕ್ಕಿ ಜಲಪಾತಗಳು ಕೊಳ್ಳೇಗಾಲ ತಾಲೂಕಿನ ವಾಯವ್ಯ ಭಾಗದಲ್ಲಿವೆ.

ತಿರುಮಕೂಡಲು, ನರಸೀಪುರದ, ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕುಗಳಲ್ಲಿ ಹರಿಯುವ ಕಾವೇರಿಯ ಉಪನದಿಯಾದ ಸುವರ್ಣಾವತಿಯು ತಲಕಾಡಿನ ಸಮೀಪದ ಕಕ್ಕೂರು ಬಳಿ ಕಾವೇರಿಯೊಡನೆ ಸಂಗಮವಾಗುತ್ತದೆ. ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನಿಂದ ಹರಿದು ಬರುವ ಅರ್ಕಾವತಿ ಉಪನದಿಯು ಮೇಕೆದಾಟಿನ ಬಳಿ ಸಂಗಮದಲ್ಲಿ ಕಾವೇರಿಯನ್ನು ಸೇರುತ್ತದೆ. ಮುಂದೆ ಚಿಕ್ಕ ನದಿಗಳು ಮತ್ತು ಹಳ್ಳಗಳು ಕಾವೇರಿ ನದಿಯನ್ನು ಸೇರುತ್ತವೆ. ಎಲ್ಲವೂ ಕಾವೇರಿ ಬಲದಂಡೆಯ ಉಪನದಿಗಳು, ಬಿಳಿಗಿರಿರಂಗನ ಶ್ರೇಣಿಯ ಮಧ್ಯೆ ಹರಿಯುವ ದೊಡ್ಡ ಸಂಪಿಗೆ ಹಳ್ಳ ಅಥವಾ ಭಾರ್ಗವಿ ನದಿ ಮುಂದೆ ಗುಂಡ್ಲು ಹೊಳೆಗೆ ಸೇರಿ ಕೊಳ್ಳೇಗಾಲದ ಗುಂಡಾಳ್ ಜಲಾಶಯಕ್ಕೆ ನೀರುಣಿಸುತ್ತದೆ. ಬೇಡಗುಳಿ ಶ್ರೇಣಿಯಲ್ಲಿ ಉಗಮಿಸುವ ಪಂಗಡಿ ಹಳ್ಳ, ನೀರದುರ್ಗಿ ಹಳ್ಳ ಮುಂದೆ ಸುವರ್ಣಾವತಿ ನದಿಯನ್ನು ಸೇರುತ್ತವೆ. ಮಹದೇಶ್ವರ ಬೆಟ್ಟದ ಸಾಲಿನಲ್ಲಿ ಉಗಮಿಸುವ ಉಡುತೊರೆ ಹಳ್ಳ, ತಟ್ಟೆಹಳ್ಳ, ಉಲಕೊಪ್ಪು ಹಳ್ಳಗಳು ಜಿಲ್ಲೆಯ ವಾಯವ್ಯ ದಿಕ್ಕಿನಲ್ಲಿ

ಹರಿಯುವ ಕಾವೇರಿ ನದಿಯನ್ನು ಸೇರುತ್ತವೆ. ಇವುಗಳಲ್ಲಿ ಬಿಳಿಗಿರಿರಂಗನ ಬೆಟ್ಟಗಳಿಂದ ಹರಿದು ಬರುವ ಉಡುತೊರೆ ಹಳ್ಳ ಸ್ವಲ್ಪ ದೊಡ್ಡದು. ಅನಂತರದವು ಮಹದೇಶ್ವರ ಬೆಟ್ಟಗಳಿಂದ ಹುಟ್ಟಿ ಹರಿಯುತ್ತವೆ. ಅವುಗಳು ಕ್ರಮವಾಗಿ ಗಿಲ್ಲಿಗುಳಿಹಳ್ಳ, ಗುಳಿಹಳ್ಳ, ಗುಳಿಯಾತನೂರು ಹಳ್ಳ, ಯೇಲಕ್ಕಿಯಾತುಹಳ್ಳಿ ಕೊನೆಯಲ್ಲಿ ಕಾವೇರಿ ನದಿಯು ಕರ್ನಾಟಕದ ಎಲ್ಲೆಯನ್ನು ಬಿಡುವಲ್ಲಿ ಕೊಳ್ಳೇಗಾಲ ತಾಲೂಕಿನ ದಕ್ಷಿಣ ಗಡಿಯಾಗಿ ಹರಿಯುವ ಪಾಲಾರ್ ಎಂಬ ಸಣ್ಣ ನದಿ ಕಾವೇರಿಯನ್ನು ಸಂಧಿಸುತ್ತದೆ. ಮೆದುಗನಾಳ ಹಳ್ಳವು ಪಾಲಾರ್ ನದಿಯನ್ನು ಸೇರುತ್ತದೆ.

**ಕಬಿನಿ ನದಿ (ಕಪಿಲಾ):** ಕಬಿನಿ ನದಿಯು ಕಾವೇರಿ ನದಿಯ ಉಪನದಿಯಾಗಿದೆ. ಇದು ಕೇರಳ ರಾಜ್ಯದ ವೈನಾಡ್ ಬೆಟ್ಟಗಳ ಸರಣಿಯಲ್ಲಿ ಸಮುದ್ರ ಮಟ್ಟದಿಂದ ಸುಮಾರು ೨,೧೪೦ ಮೀ ಎತ್ತರದಲ್ಲಿ ಉಗಮ ಹೊಂದುತ್ತದೆ. ಇದು ಕೇರಳ ರಾಜ್ಯದ ಕಲ್ ಪೆಟ್ಟ ಮತ್ತು ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಗಡಿಯಲ್ಲಿ ಸುಮಾರು ೧೨ ಕಿ.ಮೀ ದೂರ ಹರಿಯುತ್ತದೆ. ನಂತರ ಪೂರ್ವಕ್ಕೆ ಹರಿಯುತ್ತಾ ನುಗು ಮತ್ತು ಗುಂಡಾಲ್ ನದಿಗಳನ್ನು ತನ್ನಲಿ ಸೇರಿಸಿಕೊಳ್ಳುತ್ತದೆ. ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ಹಾಗೂ ನಂಜನಗೂಡಿನ ಮೂಲಕ ಹರಿದು ಮುಂದೆ ತಿರುಮಕೂಡಲು ನರಸೀಪುರದ ಬಳಿ ಕಾವೇರಿ ನದಿಯಲ್ಲಿ ಸಂಗಮಗೊಳ್ಳುವುದು.

**ಸುವರ್ಣಾವತಿ:** ಕಾವೇರಿಯ ಉಪನದಿಯಾದ ಸುವರ್ಣಾವತಿ ನದಿಯನ್ನು ಹೊನ್ನು ಹೊಳೆಯೆಂದು ಕರೆಯುತ್ತಾರೆ. ಈ ನದಿಯು ಜಿಲ್ಲೆಯ ಆಗ್ನೇಯ ಭಾಗದ ಬೆಟ್ಟ ಗುಡ್ಡಕ್ಕೆ ಸೇರಿದ ಗಜ್ಜಲಗಟ್ಟಿ ಕಂದರದ ಸಮೀಪ ಉಗಮ ಹೊಂದುತ್ತದೆ. ಪ್ರಾರಂಭದಲ್ಲಿ ಇದು ನಿರೆದುರ್ಗಿ ಹಳ್ಳ ಮತ್ತು ಅರೈಕದಿ ಹಳ್ಳ ಎಂಬ ಎರಡು ಜಲ ಮೂಲಗಳನ್ನು ಹೊಂದಿದ್ದು, ಇವೆರಡೂ ಬೂದಿಪಡಗದ ಬಳಿ ಸಂಗಮಗೊಂಡು ನಂತರ ಸುವರ್ಣಾವತಿಯಾಗಿ ಹರಿಯುತ್ತದೆ. ಚಾಮರಾಜನಗರ, ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕುಗಳ ಮೂಲಕ ಹರಿದು ತಲಕಾಡಿನ ಸಮೀಪ ಕಾವೇರಿಯನ್ನು ಸೇರುತ್ತದೆ. ಇದರ ಜಲಾನಯನ ಪ್ರದೇಶ ೧,೭೮೭ ಚ.ಕಿ.ಮೀ ಆಗಿದ್ದು ಈ ನದಿಯು ಜಿಲ್ಲೆಯಲ್ಲಿ ಸುಮಾರು ೮೮ ಕಿ.ಮೀ ದೂರ ಹರಿಯುತ್ತದೆ. ಸುವರ್ಣಾವತಿ ನದಿಯು ತಲಕಾಡಿನ ಸಮೀಪ ಇರುವ ಕಲ್ಲೂರಿನ ಬಳಿ ಕಾವೇರಿ ನದಿಯನ್ನು ಸೇರುತ್ತದೆ. ಚಾಮರಾಜನಗರ ತಾಲೂಕಿನಲ್ಲಿ ಗಾಜನೂರು ಮತ್ತು ಹೊಂಗಲವಾಡಿ ಎಂಬ ಸ್ಥಳಗಳಲ್ಲಿ ಹಾಗೂ ಯಳಂದೂರು ತಾಲೂಕಿನ ಗಂಗನೂರ ಬಳಿ ಸುವರ್ಣಾವತಿ ನದಿಗೆ ಅಣೆಕಟ್ಟುಗಳನ್ನು ಕಟ್ಟಲಾಗಿದೆ.

**ಗುಂಡಾಲ್ ನದಿ (ಕೌಂಡಿನ್ಯ):** ಗುಂಡ್ಲುಪೇಟೆ ತಾಲೂಕಿನ ಗೋಪಾಲಸ್ವಾಮಿ ಬೆಟ್ಟದಲ್ಲಿ ಉಗಮ ಹೊಂದುವ ಕಪಿಲಾ ನದಿಯ ಉಪನದಿಯಾದ ಗುಂಡಾಲ್ ನದಿಯು ಗುಂಡ್ಲುಪೇಟೆ ತಾಲೂಕಿನಲ್ಲಿ ಹರಿದು ಮುಂದೆ ನಂಜನಗೂಡಿನಲ್ಲಿ ಕಪಿಲಾ ನದಿಯನ್ನು ಸೇರುತ್ತದೆ. ಈ ನದಿಯನ್ನು ಕೌಂಡಿನ್ಯ ನದಿಯೆಂತಲೂ ಕರೆಯುತ್ತಾರೆ. ಪ್ರಸ್ತುತ ಈ ನದಿಯು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಉಳಿದ ಋತುವಿನಲ್ಲಿ ಬತ್ತಿಹೋಗುತ್ತದೆ.

**ಮಾಯಾರ್ ನದಿ:** ಮಾಯಾರ್ ನದಿಯು ತಮಿಳು ನಾಡಿನ ಉದಕಮಂಡಲ ಮತ್ತು ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಉತ್ತರ ಗಡಿಯಲ್ಲಿ ಸುಮಾರು ೨೨ ಕಿ.ಮೀ ದೂರ ಹರಿಯುತ್ತದೆ. ಈ ನದಿಯು ನಿರ್ಮಿಸಿರುವ ಮಾಯಾರ್ ಡಿಚ್ ಕಂದಕವು ನೀಲಗಿರಿ ಅಭಯಾರಣ್ಯ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಗಡಿಯಾಗಿದ್ದು ರಮಣೀಯವಾದ ಸ್ಥಳವಾಗಿದೆ.

# ಅರಣ್ಯ ಸಂಪತ್ತು

ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ಮೈಸೂರು ರಾಜ್ಯದಲ್ಲಿ ತೇಗದ ಮರವು ರಾಜವೃಕ್ಷ ಎಂದು ಘೋಷಿಸಲ್ಪಟ್ಟಿತ್ತು. ಅನಂತರ ಶ್ರೀಗಂಧದ ಮರವೂ ರಾಜ್ಯದ ಸ್ವಾಮ್ಯಕ್ಕೊಳಗಾಯಿತು. ಆದರೆ ೧೮೬೪ ರವರೆಗೂ ಮೈಸೂರು ರಾಜ್ಯದಲ್ಲಿ ಸರಿಯಾದ ಅರಣ್ಯಾಡಳಿತವಿರಲಿಲ್ಲ. ೧೮೩೧ ರಿಂದ ೧೮೮೧ರವರೆಗೆ ಮೈಸೂರು ಸಂಸ್ಥಾನವು ಆಂಗ್ಲ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದ್ದಾಗ ಅರಣ್ಯ ಪ್ರದೇಶಗಳನ್ನು ಮೀಸಲು ಅರಣ್ಯಗಳು ಮತ್ತು ರಕ್ಷಿತ ಅರಣ್ಯಗಳೆಂದು ಎರಡು ವಿಧವಾಗಿ ವಿಂಗಡಿಸಲಾಯಿತು. ೧೮೬೫ರಲ್ಲಿ ಜಾರಿಗೆ ಬಂದ ಅರಣ್ಯ ಶಾಸನದ ಪ್ರಕಾರ ಅರಣ್ಯ ಪ್ರದೇಶಗಳ ನಕ್ಷೆಗಳನ್ನು ತಯಾರಿಸಲಾಯಿತು. ೧೮೯೪ರಲ್ಲಿ ಅರಣ್ಯ ನೀತಿಯು ಜಾರಿಗೆ ಬಂದ ನಂತರ ಸೂಕ್ತವಾದ ರಕ್ಷಣಾ ಕ್ರಮಗಳನ್ನು ತೆಗೆದುಕೊಂಡಿದ್ದರಿಂದ ಮತ್ತು ಸ್ಥಳೀಯ ಜನರು ಹೊಂದಿದ್ದ ಅನಿರ್ಬಂಧಿತ ಹಕ್ಕು ಬಾಧ್ಯತೆಗಳನ್ನು ಮೊಟಕುಗೊಳಿಸಿದ್ದರಿಂದ ಅರಣ್ಯಗಳ ಬೆಳವಣಿಗೆ ಸುಸೂತ್ರವಾಗಿ ನಡೆಯುವಂತಾಯಿತು. ಗಿಡ–ಮರಗಳನ್ನು ಕಡಿದಿದ್ದರಿಂದ ಬಯಲಾದ ಅರಣ್ಯ ಪ್ರದೇಶಗಳಲ್ಲಿ ತೇಗ ಮತ್ತು ಪ್ಲಾಂಟೇಷನ್ ಮರಗಳನ್ನು ನೆಡಲಾಯಿತು. ನಂತರ ಹೆಚ್ಚಿದ ಜನಸಂಖ್ಯೆ ಹಾಗೂ ದನಕರುಗಳ ಹೆಚ್ಚಳದಿಂದಾಗಿ ಅರಣ್ಯ ಪ್ರದೇಶಗಳ ಉಪಯೋಗ ಹೆಚ್ಚಿತು. ಈ ಕಾರಣಗಳಿಂದಾಗಿ, ಅರಣ್ಯ ನೀತಿಯಲ್ಲಿ ಕೆಲವೊಂದು ಮಾರ್ಪಾಡು ಮಾಡಿ ೧೯೫೨ರಲ್ಲಿ ಹೊಸ ಅರಣ್ಯ ನೀತಿಯನ್ನು ಜಾರಿಗೆ ತರಲಾಯಿತು.

ಸಸ್ಯಶಾಸ್ತ್ರ ತಜ್ಞರಾದ ಚಾಂಪಿಯನ್ ಮತ್ತು ಸೇತ್ ಅವರು ವಾಯುಗುಣದ ಆಧಾರದ ಮೇಲೆ ಭಾರತದ ಅರಣ್ಯಗಳನ್ನು ೧೬ ವರ್ಗಗಳಾಗಿ ವಿಂಗಡಿಸಿದ್ದಾರೆ. ಅದರಂತೆ ಈ ಜಿಲ್ಲೆಯಲ್ಲಿ ಕಂಡು ಬರುವ ಅರಣ್ಯವು ದಕ್ಷಿಣ ಉಷ್ಣ ವಲಯದ ಒಣ ಉದುರೆಲೆ ಅರಣ್ಯ ವರ್ಗಕ್ಕೆ ಸೇರುತ್ತದೆ. ಇಲ್ಲಿಯ ಮರಗಿಡಗಳು ಹಾರ್ಡ್ವಿಕಿಯಾ ಬಿನ್ನಾಟ, ಟಿರೊಕಾರ್ಪಸ್ ಮಾರ್ಸೂಪಿಯಂ, ಆಲ್ಬಿಜಿಯ, ಟರ್ಮಿನೇಲಿಯ ಪಾನಿಕುಲೇಟ, ಟರ್ಮಿನೇಲಿಯಾ ಚೆಬುಲಾ, ಸಂಟಾಲಂ ಆಲ್ಬಂ (ಶ್ರೀಗಂಧ), ಅಜಡಿರಾಕ್ಟ ಇಂಡಿಕ ಇತ್ಯಾದಿ ಮುಖ್ಯ ಜಾತಿಗಳಿಗೆ ಸೇರಿದವುಗಳಾಗಿವೆ.

**ಅರಣ್ಯ ಪ್ರದೇಶ:** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಒಟ್ಟು ಭೂ ಪ್ರದೇಶ (೬,೨೬,೯೦೦+೫,೬೮,೫೦೦=೧೧,೯೫,೪೦೦ ಹೆ. ಗಳಲ್ಲಿ ೪,೧೨,೯೬೨ ಹೆ. ಪ್ರದೇಶ (೩೪.೫೫%)ವನ್ನು ಮೀಸಲು ಅರಣ್ಯ (೧೩,೮೭,೫೪೯ ಹೆ.) ಸಂರಕ್ಷಿತ ಅರಣ್ಯ (೩೧೭ ಹೆ.) ಮತ್ತು ವರ್ಗೀಕರಿಸಿದ ಅರಣ್ಯ (೨೫,೦೮೬ ಹೆ. ) ವೆಂದು ಕಾನೂನು ಬದ್ಧ ವಿಂಗಡಣೆ ಮಾಡಲಾಗಿದೆ. ವರ್ಗೀಕರಿಸದ ಅರಣ್ಯದಲ್ಲಿ ಸಿ ಮತ್ತು ಡಿ ದರ್ಜೆಯ ಭೂಮಿ ಇದ್ದು, ಇದು ಹೆಚ್ಚಾಗಿ ಬರಡು ಭೂಮಿಯಾಗಿದ್ದು, ಕಂದಾಯ ಇಲಾಖೆಯಿಂದ ವರ್ಗಾಯಿಸಲ್ಪಟ್ಟಿದ್ದಾಗಿದೆ. ಚಾಮರಾಜನಗರ ಅರಣ್ಯ ವೃತ್ತದ ಅರಣ್ಯ ಪ್ರದೇಶದ ವಿವರ ಕೆಳಕಂಡಂತಿದೆ.

| | | |
|---|---|---|
| ೧. | **ಬಿಳಿಗಿರಿರಂಗನ ಬೆಟ್ಟ ವನ್ಯ ಜೀವಿ ವಿಭಾಗ** | ೫೬೫.೪೯ ಚ. ಕಿಮೀ |
| ೨. | **ಕೊಳ್ಳೇಗಾಲ ಅರಣ್ಯ ವಿಭಾಗ** | ೧,೨೨೨.೩೦ ಚ.ಕಿಮೀ |
| ೩. | **ಕಾವೇರಿ ವನ್ಯಜೀವಿ ವಿಭಾಗ ಕನಕಪುರ ರಾಮನಗರ ಜಿಲ್ಲೆ** | ೫೨೬.೯೫ ಚ. ಕಿಮೀ |
| ೪. | **ಸಾಮಾಜಿಕ ಅರಣ್ಯ ವಿಭಾಗ, ಚಾಮರಾಜನಗರ ಜಿಲ್ಲೆ** | ಪೂರ್ಣ ಜಿಲ್ಲಾ ಪ್ರದೇಶ |

ಚಾಮರಾಜನಗರ ಜಿಲ್ಲೆಯಲ್ಲಿ ೫,೬೯,೯೦೧ ಹೆ. ಭೂಪ್ರದೇಶದಲ್ಲಿ ೨,೭೫,೬೧೦ ಹೆ. ಅರಣ್ಯ ಭೂಮಿ ದಾಖಲಾಗಿದ್ದು, ಇದು ಒಟ್ಟು ಭೂ ಪ್ರದೇಶದ ಶೇ. ೪೮.೩೬ ರಷ್ಟಾಗುತ್ತದೆ. ಜಿಲ್ಲೆಯಲ್ಲಿ ಒಂದು ರಾಷ್ಟ್ರೀಯ

ಉದ್ಯಾನವನ (ಬಂಡೀಪುರ) ಮತ್ತು ಎರಡು ವನ್ಯಜೀವಿ ವಿಭಾಗಗಳಿವೆ(ಬಿ ಆರ್ ಟಿ ಮತ್ತು ಕಾವೇರಿ). ೧೯೭೪ರಲ್ಲಿ ವೇಣುಗೋಪಾಲ ವನ್ಯಜೀವಿ ಉದ್ಯಾನವನದ ಹೆಚ್ಚಿನ ಭಾಗ, ಬಂಡೀಪುರ ಮತ್ತು ಹಳೆಯ ಚಾಮರಾಜನಗರ ಅರಣ್ಯ ಪ್ರದೇಶದ ಭಾಗಗಳನ್ನು ಒಟ್ಟಾಗಿ ಸೇರಿಸಿಕೊಂಡು ೮೮೦ ಚ.ಕಿ.ಮೀ ವ್ಯಾಪ್ತಿ ಅರಣ್ಯ ಪ್ರದೇಶದ ಬಂಡೀಪುರ ರಾಷ್ಟ್ರೀಯ ಉದ್ಯಾನವನ ಮತ್ತು ಹುಲಿ ಯೋಜನೆಯನ್ನು ಅಸ್ತಿತ್ವಕ್ಕೆ ತರಲಾಯಿತು. ಬಂಡೀಪುರ ರಾಷ್ಟ್ರೀಯ ಉದ್ಯಾನವನವು ಪೂರ್ವ ಮತ್ತು ಪಶ್ಚಿಮ ಘಟ್ಟಗಳ ಸಂಪರ್ಕ ಸೇತುವೆಯಾಗಿರುವುದರಿಂದ ಆನೆಗಳು ಪೂರ್ವದ ಮದುಮಲೈ ವನ್ಯಜೀವಿ ಉದ್ಯಾನವನದಿಂದ ಮತ್ತು ಸತ್ಯಮಂಗಲ ಅರಣ್ಯ ವಿಭಾಗದಿಂದ ದಕ್ಷಿಣ ಪೂರ್ವದ ನಾಗರಹೊಳೆ ಉದ್ಯಾನವನ ಮತ್ತು ಪಶ್ಚಿಮದ ವೈನಾಡ್ ಅರಣ್ಯ ವಿಭಾಗದವರೆಗೆ ಋತುವಿಗನುಸಾರವಾಗಿ ವಲಸೆ ಹೋಗುತ್ತವೆ. ಭಾರತದಲ್ಲಿ ಈ ಹರವಿನ ಪ್ರದೇಶವು ೫೫೦೦ ಚ.ಕಿ.ಮೀ ವ್ಯಾಪ್ತಿಯ ವಿಶಿಷ್ಟವಾದ ನೀಲಗಿರಿ ಜೀವ ವೈವಿಧ್ಯ ಕೋಶಾಗಾರದ ಸಂರಕ್ಷಿತ ಪ್ರದೇಶವಾಗಿದೆ. ಇದು ಅತಿ ಹೆಚ್ಚಿನ ಆನೆಗಳ ಸಂಖ್ಯೆಯ ಸಾಂದ್ರತೆಯನ್ನು ಒಳಗೊಂಡಿದ್ದು ಗಂಡಾನೆಗಳ ಸಂಖ್ಯೆಯು ಗಣನೀಯ ಪ್ರಮಾಣದಲ್ಲಿದೆ.

## ಬಂಡೀಪುರ ಅಭಯಾರಣ್ಯ

ಗುಂಡ್ಲುಪೇಟೆ ತಾಲೂಕಿನ ದಕ್ಷಿಣದ ಅಂಚಿನಲ್ಲಿರುವ ಈ ಅಭಯಾರಣ್ಯ ಭಾರತದ ಸುಪ್ರಸಿದ್ಧ ಮೃಗ ಧಾಮಗಳಲ್ಲಿ ಒಂದು. ೧೯೪೧ರಲ್ಲಿ ಹಳೆಯ ಮೈಸೂರು ರಾಜ್ಯದಲ್ಲಿ ಸ್ಥಾಪಿತವಾದ ವೇಣುಗೋಪಾಲ ರಾಷ್ಟ್ರೀಯ ಉದ್ಯಾನದ (ಸುಮಾರು ೮೦೩ ಚ.ಕಿ.ಮೀ) ಕೇಂದ್ರ ಪ್ರದೇಶವಾಗಿತ್ತು. ಇದರ ವಿಸ್ತೀರ್ಣ ಸುಮಾರು ೬೦ ಚ.ಕಿ.ಮೀ. ತಮಿಳುನಾಡಿನ ಮುಧುಮಲೈ ಅಭಯಾರಣ್ಯಕ್ಕೆ ಹೊಂದಿಕೊಂಡಿರುವ ಇದನ್ನು ಪಶ್ಚಿಮದಲ್ಲಿ ಮುದುಮಲೈ ಅಭಯಾರಣ್ಯದ ದೊಡ್ಡಕಟ್ಟೆ ವಿಭಾಗ, ದಕ್ಷಿಣದಲ್ಲಿ ತೆಪ್ಪಕಾಡು ವಿಭಾಗ, ನೈಋತ್ಯದಲ್ಲಿ ಮುದುಮಲೈ ವಿಭಾಗಗಳೂ ಸುತ್ತುವರಿದಿವೆ. ಮುದುಮಲೈಗೂ ಬಂಡೀಪುರಕ್ಕೂ ನಡುವೆ ಆಗ್ನೇಯದಲ್ಲಿ ಮೋಯಾರ್ ನದಿ, ನೈಋತ್ಯದಲ್ಲಿ ಕೆಕ್ಕನಹಳ್ಳಗಳು ಹರಿಯುತ್ತಿದ್ದು, ಇವೆರಡರ ನಡುವಿನ ಗಡಿ ರೇಖೆಗಳಾಗಿವೆ. ಇವೆರಡು ಹೊಳೆಗಳು ಅಲ್ಲಲ್ಲಿ ತೆಟ್ಟೆಯಾಗಿರುವುದರಿಂದ ವನ್ಯ ಪ್ರಾಣಿಗಳು ಒಂದು ಅಭಯಾರಣ್ಯದಿಂದ ಇನ್ನೊಂದು ಅಭಯಾರಣ್ಯಕ್ಕೆ ಮುಕ್ತವಾಗಿ ಸಂಚರಿಸುತ್ತವೆ. ಅಂತೆಯೇ ಬಂಡೀಪುರಕ್ಕೂ ಕೇರಳ ವೈನಾಡು ಪ್ರದೇಶಕ್ಕೂ ಇದೇ ತೆರನ ನಿಕಟ ಸಂಪರ್ಕವುಂಟು. ವಾಸ್ತವವಾಗಿ ಈ ಮೂರು ಪ್ರದೇಶಗಳಲ್ಲಿನ ಪ್ರಾಣಿಸಂಪತ್ತು ಎಷ್ಟು ವೈವಿಧ್ಯಮಯವಾದದ್ದೊ ಅಷ್ಟೆ ವಿಶಿಷ್ಟವಾದದ್ದು. ದಕ್ಷಿಣ ಭಾರತದ ವನ್ಯಮೃತ ಸಂಕುಲದ ಹೆಚ್ಚು ಕಡಿಮೆ ಎಲ್ಲ ಪ್ರಾತಿನಿಧ್ಯವೂ ಇಲ್ಲಿ ಇದೆ ಎಂದರೆ ತಪ್ಪಾಗಲಾರದು.

ಬಂಡೀಪುರ ಅಭಯಾರಣ್ಯ ಇರುವುದು ಮೈಸೂರು ನೀಲಗಿರಿ (ಉದಕಮಂಡಲ, ಊಟಿ) ಹೆದ್ದಾರಿಯಲ್ಲಿ; ಮೈಸೂರಿನಿಂದ ಇಲ್ಲಿಗೆ ೮೦ ಕಿ.ಮೀ. ದೂರ. ಊಟಿಯಿಂದಲೂ ಅಷ್ಟೇ ದೂರ. ಇದರ ಎತ್ತರ ಸಮುದ್ರ ಮಟ್ಟದಿಂದ ೯೭೫–೧೨೨೩ ಮೀ. ಇಲ್ಲಿನ ವಾರ್ಷಿಕ ಸರಾಸರಿ ಮಳೆ ೮೯೦ ಮಿಮಿ. ಮುದುಮಲೈ ಅಭಯಾರಣ್ಯಕ್ಕೆ ಹೋಲಿಸಿದರೆ ಇಲ್ಲಿನ ನೆಲ ಹೆಚ್ಚು ಮಟ್ಟಸವಾಗಿದೆ. ಇಲ್ಲಿನ ಕಾಡಿನ ಪೊದೆ ಗಿಡಗಳೂ ಕೂಡ ಹೆಚ್ಚು ದಟ್ಟವಾಗಿಲ್ಲ. ಇದರಿಂದಾಗಿ ಇಲ್ಲಿನ ಭೂಮಿ ಮುದುಮಲೈಗೆ ಹೋಲಿಸಿದರೆ ಕೆಳಮಟ್ಟದಲ್ಲಿದ್ದಂತೆ ಭಾಸವಾಗುತ್ತದೆ. ಆದರೆ ಬಂಡೀಪುರ ಅಭಯಾರಣ್ಯಕ್ಕೆ ಕೆಲವು ವಿಶೇಷ ಲಕ್ಷಣಗಳುಂಟು. ಇಲ್ಲಿನ ವೃಕ್ಷಗಳ ಮಧ್ಯೆ ಅಲ್ಲಲ್ಲಿ ಚಿಕ್ಕಪುಟ್ಟ ಹುಲ್ಲು ಮಾಳಗಳಿವೆ. ಇಲ್ಲಿ ನಯವಾದ ಹುಲ್ಲು ಬೆಳೆದಿದ್ದು, ಇವು ಅಚ್ಚುಕಟ್ಟಾದ ಪಸಲೆಗಳಂತೆ ಕಾಣುವುವು. ಅಂತೆಯೇ ಇಡೀ ಅಭಯಾರಣ್ಯದ ತುಂಬ ಸಣ್ಣಪುಟ್ಟ ಕೆರೆ ಕಟ್ಟೆಗಳೂ ನೀರ್ಗುಂಡಿಗಳೂ ಉಂಟು. ಇಂಥ ತಾಣಗಳಲ್ಲಿ ಮುಖ್ಯವಾದವು ತಾವರೆಕಟ್ಟೆ, ಕರೀಗೌಡನ ಕಟ್ಟೆ, ಅರಳೀಕಟ್ಟೆ, ಬೈಸ್ನಾಪುರ ಕೆರೆ

ಮತ್ತು ಮೂಲಾಪುರ ಕೆರೆ, ವನ್ಯಮೃಗಗಳಿಗೆ ಇವು ಪ್ರಮುಖ ಜಲಾಶ್ರಯಗಳಾಗಿದ್ದು ಬೇಸಗೆಯಲ್ಲಂತೂ ಆನೆ, ಕಾಟಿ, ಕಡವೆಗಳ ಹಿಂಡನ್ನೇ ಇವುಗಳ ಬಳಿ ಕಾಣಬಹುದು.

ಬಂಡೀಪುರ ಅಭಯಾರಣ್ಯ ಸ್ಥಾಪಿತವಾದಂದಿನಿಂದ ಇಂದಿನವರೆಗೂ ಇಲ್ಲಿ ಕಾಡಿನ ಮರಗಳನ್ನು ಯಾವುದೇ ಕಾರಣಕ್ಕೂ ಕಡಿಯುವಂತಿಲ್ಲ ತೆಗೆಯುವಂತಿಲ್ಲ ಎಂಬ ನಿಷೇಧವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಲಾಗಿದೆ. ಈ ದೃಷ್ಟಿಯಿಂದ ಬಂಡೀಪುರ ಅಭಯಾರಣ್ಯ ಭಾರತದ ಬೇರೆ ಯಾವುದೇ ಅಭಯಾರಣ್ಯಕ್ಕಿಂತ ವಿಭಿನ್ನವಾಗಿದೆ. ಬಹುಶಃ ಈ ಕಾರಣದಿಂದಾಗಿಯೇ ಇಲ್ಲಿನ ಪ್ರಾಣಿಗಳು ನಿರ್ಭಯವಾಗಿ ಓಡಾಡುವುದನ್ನು ಕಾಣಬಹುದು.

ಬಂಡೀಪುರ ಅಭಯಾರಣ್ಯದಲ್ಲಿ ವನ್ಯ ಮೃಗಗಳನ್ನು ವೀಕ್ಷಿಸಲು ಎಲ್ಲಾ ಸೌಲಭ್ಯಗಳೂ ಉಂಟು. ವನ್ಯಪ್ರಾಣಿಗಳಿಗೆ ಅಗತ್ಯವಾದ ಲವಣಗಳನ್ನು ಒದಗಿಸಲೆಂದು ಅಲ್ಲಲ್ಲಿ ಉಪ್ಪು ನೆಲೆಗಳನ್ನು (ಸಾಲ್ಟ್ ಲಿಕ್ಸ್) ನಿರ್ಮಿಸಿರುವುದರಿಂದ ಇಂತಹ ಸ್ಥಳಗಳು ಸಹಜವಾಗಿಯೇ ಪ್ರಾಣಿಗಳ ಆಕರ್ಷಣೀಯ ತಾಣಗಳಾಗಿವೆ. ಇಂತಹ ಜಾಗಗಳ ಬಳಿ ಹಾಗೂ ಪ್ರಾಣಿಗಳು ನೀರು ಕುಡಿಯುವ ಸಲುವಾಗಿ ಬರುವ ನೀರ್ಗುಂಡಿಗಳ ಬಳಿ ವೀಕ್ಷಣ ಗೋಪುರಗಳನ್ನು ಕಟ್ಟಿದೆ. ಈ ಜಾಗಗಳಿಗೆ ಹೋಗಿ ಬರಲು ಅನುಕೂಲವಾಗುವಂತೆ ವರ್ಷವಿಡೀ ಸಂಚಾರ ಯೋಗ್ಯವಾಗಿರುವ ಉತ್ತಮ ರಸ್ತೆಗಳ ಜಾಲವಿದೆ. ಇಲ್ಲಿ ಪ್ರವಾಸಿಗರನ್ನು ಅರಣ್ಯದೊಳಗೆ ಕರೆದುಕೊಂಡು ಹೋಗಿಬರಲು ವಾಹನವೂ ಸವಾರಿ ಆನೆಗಳೂ ಉಂಟು. ಇಳಿದುಕೊಳ್ಳಲು ಉತ್ತಮ ಸೌಕರ್ಯವಿರುವ ವಸತಿಗೃಹಗಳೂ ಇವೆ.

ಇತ್ತೀಚಿನ ವರ್ಷಗಳಲ್ಲಿ ಬಂಡೀಪುರ ಅಭಯಾರಣ್ಯಕ್ಕೆ ವಿಶೇಷ ಸ್ಥಾನ ಲಭಿಸಿದೆ. ಹುಲಿ ಸಂರಕ್ಷಣಾ ಯೋಜನೆಯ (ಟೈಗರ್ ಪ್ರಾಜೆಕ್ಟ್) ಒಂದು ಕ್ಷೇತ್ರವನ್ನಾಗಿ ಬಂಡೀಪುರವನ್ನು ಆಯ್ಕೆ ಮಾಡಲಾಗಿದೆ. ಭಾರತ ಸರ್ಕಾರದ ಯೋಜನೆಯಾದ ಹುಲಿ ಸಂರಕ್ಷಣಾ ಯೋಜನೆ ೧೯೭೩ರಲ್ಲಿ ಪ್ರಾರಂಭವಾಯಿತು. ವಿನಾಶದ ಅಂಚಿನಲ್ಲಿದ್ದು ನಾಡಿನಿಂದ ಸಂಪೂರ್ಣ ಕಣ್ಮರೆಯಾಗಿ ಬಿಡುವ ಅಪಾಯದಲ್ಲಿರುವ ಹುಲಿ ಸಂತತಿಯನ್ನು ಉಳಿಸುವುದೇ ಈ ಯೋಜನೆಯ ಉದ್ದೇಶ. ಈ ಉದ್ದೇಶ ಸಾಧನೆಗಾಗಿ ಭಾರತಾದ್ಯಂತ ಆಯ್ಕೆ ಮಾಡಿರುವ ಹನ್ನೊಂದು ಅಭಯಾರಣ್ಯಗಳಲ್ಲಿ ಬಂಡೀಪುರವೂ ಒಂದು. ಬಂಡೀಪುರವನ್ನು ವೀಕ್ಷಿಸಲು ಪ್ರಶಸ್ತಕಾಲ ಎಂದರೆ ಏಪ್ರಿಲ್ – ಜೂನ್ ತಿಂಗಳು.

**ಅರಣ್ಯ ಇಲಾಖೆಯ ಕಾರ್ಯಕಲಾಪಗಳು:** ಅರಣ್ಯಗಳ ನಿರ್ವಹಣೆ, ವನ್ಯ–ಜೀವಿ ಸಂರಕ್ಷಣೆ, ಕ್ಷೀಣಿತ ಹಾಳಾದ ಅರಣ್ಯಗಳ ಪುನರ್ ನಿರ್ಮಾಣ, ಬಂಜರು ಪ್ರದೇಶಗಳಲ್ಲಿ ವನ ನಿರ್ಮಾಣ ಮತ್ತು ವಿಸ್ತರಣೆ, ಕೃಷಿ ಪ್ರದೇಶಗಳಲ್ಲಿ ಮರ ಬೆಳೆಸುವುದೂ ಸೇರಿದಂತೆ ಸಾಮಾಜಿಕ ವನ ನಿರ್ಮಾಣ ಕೈಗೊಳ್ಳುವುದು, ವನ ನಿರ್ಮಾಣದ ಮೂಲಕ ಭೂಸಾರ ಸಂರಕ್ಷಣೆ ಮತ್ತು ಆರ್ದ್ರತೆ, ಚಿಕ್ಕಪುಟ್ಟ ಚೌಬೀನೆ, ಉರುವಲು ಸೌದೆ, ಹಸಿರು ಗೊಬ್ಬರ, ದನಗಳ ಮೇವು, ಸಣ್ಣ ಅರಣ್ಯೋತ್ಪನ್ನ ಹಾಗೂ ಗೃಹ ನಿರ್ಮಾಣಕ್ಕಾಗಿ ಚೌಬೀನೆ ಮತ್ತು ಕುಶಲ ಕರ್ಮಿಗಳಿಗೆ ಹಾಗೂ ಇತರೆ ಆರ್ಥಿಕವಾಗಿ ಹಿಂದುಳಿದವರಿಗೆ ವಿಶೇಷವಾಗಿ ಗುಡ್ಡಗಾಡು ಜನರಿಗೆ ಬೇಕಾಗುವ ಅತ್ಯಗತ್ಯ ಕಚ್ಚಾ ಸಾಮಗ್ರಿಗಳ ಬೇಡಿಕೆಗಳ ಪೂರೈಕೆ ಇವು ಅರಣ್ಯ ಇಲಾಖೆಯ ಮುಖ್ಯ ಉದ್ದೇಶಗಳಾಗಿವೆ.

ಅರಣ್ಯಕ್ಕೆ ಹೊಂದಿಕೊಂಡ ಗ್ರಾಮಗಳಲ್ಲಿ ವಾಸಿಸುವ ಮತ್ತು ಅರಣ್ಯಗಳ ಅಕ್ಕಪಕ್ಕ ವಾಸಿಸುವ ಜನರಿಗೆ ತಮ್ಮ ಜಾನುವಾರುಗಳಿಗೆ ಉಚಿತ ಮೇವಿಗಾಗಿ ಅರಣ್ಯ ಪ್ರದೇಶ ಮತ್ತು ಉರುವಲುಗಳಿಗಾಗಿ ಒಣ ಸೌದೆಗಳು, ಹುಲ್ಲು ಮೊದಲಾದವುಗಳನ್ನು ಕೊಂಡೊಯ್ಯುವ ವಿಶೇಷ ಅಧಿಕಾರವಿರುತ್ತದೆ. ಮುಫತ್ತಾಗಿ ಅರಣ್ಯ ಪ್ರದೇಶಗಳ ಒಳಗೆ ದನ ಮೇಯಿಸುವ ಅವಕಾಶವು ಅರಣ್ಯ ನಾಶಕ್ಕೆ ಕಾರಣವಾಗಿದೆ. ರೈತರು ತಮ್ಮ ಏಳಿಗೆಗಾಗಿ ಈಗ ಅರಣ್ಯಗಳನ್ನು ಅವಲಂಬಿಸಿದ್ದಾರೆ. ಅರಣ್ಯಗಳಿಂದ ಉರುವಲು ಸರಬರಾಜು ಅರಣ್ಯ ಉತ್ಪನ್ನಗಳ ಮಾರಾಟದಿಂದ ಸಿಗುವ ವಾರ್ಷಿಕ ವರಮಾನ ಜನರಿಗೆ ದೊರಕುವ ಮೇಲ್ಕಂಡ ರಿಯಾಯಿತಿಗಳು ಮತ್ತು ವಿಶೇಷ ಸವಲತ್ತುಗಳ ಜೊತೆಗೆ ಅರಣ್ಯದಿಂದ ರಾಜ್ಯಕ್ಕೆ ಮತ್ತು ದೇಶಕ್ಕೆ ಪರೋಕ್ಷವಾಗಿ ಅಸಂಖ್ಯಾತ ಸೌಲಭ್ಯಗಳು ದೊರೆಯುತ್ತದೆ. ಅರಣ್ಯ ಜೀವಿಗಳು ಪರಿಸರ ಸಮತೋಲನವನ್ನು ಮತ್ತು ಪರಿಸರ ರಕ್ಷಣೆಯನ್ನು ಕಾಯ್ದುಕೊಳ್ಳಲು ಸಹಕಾರಿಯಾಗಿವೆ. ಈ ಅರಣ್ಯಗಳು ನದಿಗಳ ಜಲಾನಯನ ಪ್ರದೇಶವನ್ನು ರೂಪಿಸುತ್ತವೆ. ನಮ್ಮ ಬಹುಪಾಲು ಏಳಿಗೆ ಈ ಜಲಾನಯನ ಪ್ರದೇಶವನ್ನು ಅವಲಂಬಿಸಿದೆ. ಈ ಜಲಾನಯನ ಪ್ರದೇಶವು ಮೈದಾನ ಪ್ರದೇಶಗಳಲ್ಲಿ ಆಶ್ರಯ ವಲಯವಾಗಿಯೂ ಮತ್ತು ವಾಯು ತಡೆಗಳಾಗಿಯೂ ಕಾರ್ಯ ನಿರ್ವಹಿಸುತ್ತಿವೆ. ಹೀಗಾಗಿ ವನ್ಯ ಪ್ರದೇಶಗಳಲ್ಲಿ ಉಳಿದಿರುವ ಅರಣ್ಯ ಪ್ರದೇಶಗಳಲ್ಲಿ ಹವಾಮಾನ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ತೇವಾಂಶ ಕಳೆದುಕೊಳ್ಳುವುದು ಬಹಳಷ್ಟು ತಪ್ಪುತ್ತದೆ. ಹೀಗಾಗಿ ಕೃಷಿ ಭೂಮಿಯಲ್ಲಿ ಇಳುವರಿಯೂ ಜಾಸ್ತಿಯಾಗುತ್ತದೆ.

**ನಿರ್ವಹಣೆಯ ಪದ್ಧತಿ:** ಕರ್ನಾಟಕದಲ್ಲಿನ ಅರಣ್ಯವನ್ನು ರಾಷ್ಟ್ರೀಯ ಅರಣ್ಯ ನೀತಿ ೧೯೮೮ರ ಅನ್ವಯ ನಿರ್ವಹಣೆಯನ್ನು ಈ ಕೆಳಗೆ ತಿಳಿಸಿದ ಪ್ರಕಾರ ಮೂರು ವಿಧಗಳಲ್ಲಿ ಮಾಡಲಾಗುತ್ತಿದೆ.

೧) ಸಮರ್ಥ ರೀತಿಯಲ್ಲಿ ಅರಣ್ಯವನ್ನು ಅಭಿವೃದ್ಧಿಗೊಳಿಸುವುದು ಮತ್ತು ಸ್ಥಳೀಯ ಬೇಡಿಕೆಗೆ ಅನುಸಾರ ನಿರ್ವಹಣೆ ಮಾಡುವುದು. ೨) ಗ್ರಾಮ ಅರಣ್ಯ ಸಮಿತಿಗಳ ಮುಖಾಂತರ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಅಡಿಯಲ್ಲಿ ಸ್ಥಳೀಯ ಜನರ ಸಹಕಾರದೊಂದಿಗೆ ಕ್ಷೀಣಿತ ಅರಣ್ಯದ ಸಂರಕ್ಷಣೆ ಮತ್ತು ನಿರ್ವಹಣೆ ಮತ್ತು ೩) ಜೀವಿ ವೈವಿಧ್ಯ ಸಂರಕ್ಷಣೆ

ರಾಜ್ಯದಲ್ಲಿರುವ ಅರಣ್ಯಗಳನ್ನು ಕಾರ್ಯ ಯೋಜನೆಗಳ ನಿಯಮಾನುಸಾರವಾಗಿ ನಿರ್ವಹಿಸಲಾಗುತ್ತಿದೆ. ಈ ಯೋಜನೆಯಲ್ಲಿ ಬೆಳೆದಿರುವ ಮರಗಳು, ವಿವಿಧ ಅರಣ್ಯೋತ್ಪನ್ನಗಳ ಬೇಡಿಕೆ ಮತ್ತು ಭೂ ತೇವಾಂಶ ಸಂರಕ್ಷಣೆ ಪರಿಸರ ಸಮತೋಲನಕ್ಕೆ ಅಗತ್ಯಾನುಸಾರವಾಗಿ ೧೦ ವರ್ಷಗಳ ಅವಧಿಗೆ ರೂಪಿಸಲಾಗಿದೆ. ಹಚ್ಚ ಹಸಿರು ಎಲೆಗಳಿಂದ ಕೂಡಿದ ಮರಗಳನ್ನು ಕಡಿಯುವುದನ್ನು ನಿಷೇಧಿಸಲಾಗಿದ್ದು, ಬಿದ್ದ ಹಾಗೂ ಒಣಗಿದ ಮರಗಳನ್ನು ಮಾತ್ರ ಕಡಿಯಲು ಅವಕಾಶ ನೀಡಲಾಗಿದೆ. ಸರ್ಕಾರಿ ಉದ್ಯಮವಾಗಿರುವ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮ, ಮರದ ದಿಮ್ಮಿಗಳನ್ನು ತಯಾರಿಸುವ ಕೆಲಸಗಳನ್ನು ಕೈಗೊಳ್ಳಲು ಪ್ರೋತ್ಸಾಹವನ್ನು ನೀಡುವುದರಲ್ಲಿ ನಿರತವಾಗಿದೆ. ಚಾಮರಾಜನಗರ ಅರಣ್ಯ ವಿಸ್ತೀರ್ಣದ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರಿಗೆ ಉತ್ತಮ ರೀತಿಯಲ್ಲಿ ಚೌಬೀನೇತರ ಅರಣ್ಯ ಉತ್ಪನ್ನಗಳ ಸದ್ಬಳಕೆಗಾಗಿ ಬೃಹತ್ ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘಗಳನ್ನು (ಲ್ಯಾಂಪ್ಸ್) ಸ್ಥಾಪಿಸಲಾಗಿದೆ. ಅವುಗಳಿಂದ ‘. ೧೦೦/– ವಸೂಲು ಮಾಡಿಕೊಂಡು ಚೌಬೀನೇತರ ಅರಣ್ಯ ಉತ್ಪನ್ನ ಸಂಗ್ರಹಿಸಲು ವ್ಯವಸ್ಥೆ ಮಾಡಲಾಗಿದೆ.

ಚೌಬೀನೆ ಮತ್ತು ಸರ್ಕಾರಿ ಡಿಪೋಗಳ ಅರಣ್ಯ ಉತ್ಪಾದನೆಯನ್ನು ಹರಾಜು ಮಾರಾಟದ ಹಾಗೂ ಚಿಲ್ಲರೆ ಮಾರಾಟದ ಮೂಲಕ ವಿಲೇವಾರಿ ಮಾಡಲಾಗುತ್ತದೆ. ಡಿಪೋಗಳಿಂದ ಬಂದ ಚೌಬೀನೆಗಳನ್ನು ಗುಣ,

ದಪ್ಪ ಮತ್ತು ಉದ್ದದಂತೆ ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಿದ್ದು, ಬೇರೆ ಬೇರೆ ಗುಣ ಮಟ್ಟಗಳ ಚೌಬೀನೆಗಳಿಗೆ ಹಿಂದಿನ ದರಗಳನ್ನು ಆಧರಿಸಿ ಪ್ರತಿಯೊಂದು ಗುಂಪಿನ ಚೌಬೀನೆಯ ಮೌಲ್ಯಗಳನ್ನು ನಿರ್ಧರಿಸಿ ಅವುಗಳನ್ನು ಸಾರ್ವಜನಿಕರ ಹರಾಜಿಗೆ ಇಡಲಾಗುವುದು. ಸಾಮಾನ್ಯವಾಗಿ ಪ್ರತಿಯೊಂದು ಡಿಪೋವಿನಲ್ಲಿ ಒಂದೊಂದು ವರ್ಷಕ್ಕೆ ಎರಡು ಬಾರಿ ಮಾರಾಟ ಮಾಡಲಾಗುತ್ತದೆ. ಚಿಲ್ಲರೆ ಮಾರಾಟದಡಿ ಡಿಪೋಗಳಲ್ಲಿ ರಾಶಿ ಹಾಕಿರುವ ಚೌಬೀನೆ ಮತ್ತು ಇತರ ಅರಣ್ಯ ಉತ್ಪನ್ನಗಳನ್ನು ಕಾಲಕಾಲಕ್ಕೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಇಲಾಖೆಯಿಂದ ಇಂತಹ ರೀತಿಯಲ್ಲಿ ಬಿಡುಗಡೆ ಮಾಡುವ ಚೌಬೀನೆ ಸ್ವಂತ ಉಪಯೋಗಕ್ಕೆ ಮಾತ್ರ ಸೀಮಿತವಾಗಿರುತ್ತದೆ.

**ಅರಣ್ಯಾಭಿವೃದ್ಧಿ ಚಟುವಟಿಕೆಗಳು:** ರಾಜ್ಯದಲ್ಲಿರುವ ಒಟ್ಟು ಭೂ ಪ್ರದೇಶದಲ್ಲಿ ಸುಮಾರು ಶೇ.೨೦ರಷ್ಟು ಅರಣ್ಯ ಪ್ರದೇಶವೆಂದು ವರ್ಗೀಕರಿಸಿದ್ದರೂ, ಕೇವಲ ಶೇ. ೧೧ ರಷ್ಟು ಮಾತ್ರ ಒಳ್ಳೆಯ ಮರಗಳಿರುವ ಪ್ರದೇಶವಾಗಿರುತ್ತದೆ. ಉಳಿದಿರುವ ಬಹುತೇಕ ಪ್ರದೇಶವು ಬೇರೆ ಬೇರೆ ರೀತಿಯಲ್ಲಿ ಕ್ಷೀಣಿತಗೊಂಡ ಪ್ರದೇಶವಾಗಿರುತ್ತದೆ. ಜನಸಂಖ್ಯೆಯ ಹೆಚ್ಚಳ ಹಾಗೂ ಜಾನುವಾರುಗಳ ಸಂಖ್ಯೆಯ ಹೆಚ್ಚಳದಿಂದಾಗಿ ರಾಜ್ಯವು ಉರುವಲು ಸೌದೆ, ಮನೆ ಕಟ್ಟುವಂತಹ ಮರ ಹಾಗೂ ದನಗಳ ಮೇವಿನ ಕೊರತೆಯನ್ನು ಎದುರಿಸುತ್ತಿದೆ. ಆದುದರಿಂದ ಇಲಾಖೆಯು ಅಭಿವೃದ್ಧಿ ಕಾರ್ಯಕ್ರಮಗಳನ್ನು ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳ ಅವಶ್ಯಕತೆ ಗಮನದಲ್ಲಿಟ್ಟುಕೊಂಡು ರೂಪಿಸುತ್ತದೆ. ಬಂಜರು ಭೂಮಿ ಅಭಿವೃದ್ಧಿ, ಕ್ಷೀಣಿತ ಅರಣ್ಯ ಪ್ರದೇಶಾಭಿವೃದ್ಧಿ, ಅರಣ್ಯ ಸಂಶೋಧನೆ ಮತ್ತು ರಾಷ್ಟ್ರೀಯ ಉದ್ಯಾನವನಗಳ ಅರಣ್ಯಗಳ ನಿರ್ವಹಣೆ, ಕೃಷಿ ಪ್ರದೇಶಗಳಲ್ಲಿ ಮರ ಬೆಳೆಸುವುದೂ ಸೇರಿದಂತೆ ಸಾಮಾಜಿಕ ವನ ನಿರ್ಮಾಣ ಕೈಗೊಳ್ಳುವುದು ಮುಂತಾದ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಡುತ್ತಿದೆ.

**ಕ್ಷೀಣಿತ ಅರಣ್ಯಗಳ ಅಭಿವೃದ್ಧಿ:** ಈ ಯೋಜನೆಯಲ್ಲಿ ಅರಣ್ಯೀಕರಣದ ಮೂಲಕ ಕ್ಷೀಣಿತ ಅರಣ್ಯ ಪ್ರದೇಶದ ಪುನರುಜ್ಜೀವನಗೊಳಿಸಿ ಅರಣ್ಯಗಳನ್ನು ದನಕರುಗಳ ಮೇಯುವಿಕೆಯಿಂದ ತಪ್ಪಿಸುವುದು ಮತ್ತು ಬೆಂಕಿಯಿಂದ ರಕ್ಷಿಸಲು ಉದ್ದೇಶಿಸಲಾಗಿದೆ. ಕ್ಷೀಣಿತ ಅರಣ್ಯ ಪ್ರದೇಶದಲ್ಲಿ ಸ್ವಾಭಾವಿಕ ಅರಣ್ಯಗಳ ಪುನರುತ್ಪತ್ತಿ ಮತ್ತು ಸಸಿಗಳನ್ನು ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಮ ಅರಣ್ಯಗಳ ಸಮಿತಿ ರಚನೆ, ವನ ವಿಜ್ಞಾನ ಕೇಂದ್ರಗಳ ಸ್ಥಾಪನೆಯ ಕಾರ್ಯಕ್ರಮಗಳನ್ನೂ ಸಹ ಈ ಯೋಜನೆಯಡಿ ಹಮ್ಮಿಕೊಳ್ಳಲಾಗಿದೆ. ಸ್ಥಳದ ಗುಣವನ್ನು ಗಮನದಲ್ಲಿಟ್ಟುಕೊಂಡು ಮತ್ತು ಸ್ಥಳೀಯ ಜನರ ಬೇಡಿಕೆಯನ್ನು ನೋಡಿಕೊಂಡು ಅವರಿಗೆ ಅವಶ್ಯವಿರುವ ಮರಮುಟ್ಟುಗಳ ಜಾತಿ, ಉರುವಲು ಮತ್ತು ಮೇವು ಜಾತಿಯ ಗಿಡಗಳನ್ನು ನೆಡಲಾಗಿದೆ.

**ಸಾರ್ವಜನಿಕರಿಗೆ ವಿತರಣೆಗಾಗಿ ಸಸಿ ಬೆಳೆಸುವ ಕಾರ್ಯಕ್ರಮ:** ಈ ಯೋಜನೆಯಡಿ ಸಸಿಗಳನ್ನು ಬೆಳೆಸಿ ಸಾರ್ವಜನಿಕರಿಗೆ, ರೈತರಿಗೆ ಸಂಘ ಸಂಸ್ಥೆಗಳಿಗೆ ಗ್ರಾಮ ಅರಣ್ಯ ಸಮಿತಿಗಳ ಮೂಲಕ ಸಸಿಗಳನ್ನು ವಿತರಣೆ ಮಾಡುವ ಸಲುವಾಗಿ ಸಸಿಗಳನ್ನು ಆಯಾ ಪ್ರದೇಶಗಳಿಗೆ ಹೊಂದಿಕೊಳ್ಳುವ ಜಾತಿಯ ೫" X ೮" ಮತ್ತು ೮" X ೧೨"ರ ಅಳತೆಯ ಸಸಿಗಳನ್ನು ಆಯ್ಕೆ ಮಾಡಿ ಬೆಳೆಸಲಾಗುತ್ತಿದೆ.

**ವನ ಸಂವರ್ಧನ ಯೋಜನೆ:** ವನ ಸಂವರ್ಧನ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅರಣ್ಯೇತರ ಪ್ರದೇಶದಲ್ಲಿ ವೃಕ್ಷ ಕವಚದ ಹೊದಿಕೆಯ ವೃದ್ಧಿಯ ದೃಷ್ಟಿಯಿಂದ ಖಾಸಗಿ ಮತ್ತು ಸಾರ್ವಜನಿಕರ ಸಹಭಾಗಿತ್ವವನ್ನು ಪ್ರೋತ್ಸಾಹಿಸಲು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ಜಿಲ್ಲಾ ಪಂಚಾಯತ್ ವ್ಯಾಪ್ತಿಯ, ಗ್ರಾಮ ಪಂಚಾಯತ್‌ಗಳ ಮುಖಾಂತರ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

**ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ ಯೋಜನೆ:** ಈ ಯೋಜನೆಯನ್ನು ೨೦೦೫-೦೬ ರಿಂದ ೨೦೧೨-೧೩ನೇ ಸಾಲಿನವರೆಗೆ ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಜೆಬಿಐಸಿ ಮತ್ತು ಕರ್ನಾಟಕ ರಾಜ್ಯ ಸರ್ಕಾರಗಳ ಮಧ್ಯೆ ನಡೆದ ಒಪ್ಪಂದದ ಮೇರೆಗೆ ಈ ಯೋಜನೆಗೆ ಒಟ್ಟು ೭೪೫ ಕೋಟಿ ರೂ.ಗಳ ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗಿದೆ. ಈ ಮೊತ್ತದಲ್ಲಿ ಜೆಬಿಐಸಿ ಸಂಸ್ಥೆಯಿಂದ ಮರು ಪಾವತಿಯಾಗುವ ಮೊತ್ತ ೬೧೩.೨೬೬ ಕೋಟಿ ರೂ.ಗಳು ಮತ್ತು ರಾಜ್ಯದ ಪಾಲು ೧೩೧.೭೩೪ ಕೋಟಿ ರೂ.ಗಳಾಗಿದೆ. ಈ ಯೋಜನೆಯನ್ನು ಎಂಟು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಯನ್ನು ಭಾಗ 'ಎ' ಮತ್ತು ಭಾಗ 'ಬಿ' ಯನ್ನಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು 'ಎ' ವಿಭಾಗಕ್ಕೆ ಚಾಮರಾಜನಗರ ಜಿಲ್ಲೆಯನ್ನು ಸೇರಿಸಲಾಗಿದೆ. ಈ ಯೋಜನೆಯಲ್ಲಿ ಪ್ರಸ್ತಾಪಿಸಿದ ಮುಖ್ಯ ಚಟುವಟಿಕೆಗಳು ಈ ಕೆಳಕಂಡಂತಿವೆ: ಅರಣ್ಯೀಕರಣ, ಭೂಸಾರ ಸಂರಕ್ಷಣೆ, ಕೃಷಿ, ಅರಣ್ಯ, ಜೀವಿ ವೈವಿಧ್ಯ ಸಂರಕ್ಷಣೆ, ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ, ಮೂಲಭೂತ ಸೌಕರ್ಯ ಒದಗಿಸುವಿಕೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಇತ್ಯಾದಿ ಆಗಿದೆ.

**ಬಿದಿರು ಸರಬರಾಜು:** ಮಂಜೂರಾದ ಚಿಲ್ಲರೆ ಮಾರಾಟ ದರದಲ್ಲಿ ಲಭ್ಯತೆಗೆ ಅನುಗುಣವಾಗಿ ಬಿದಿರನ್ನು ಮೇದಾರ ಮತ್ತು ಮೇದಾರೇತರರಿಗೆ ಸರಬರಾಜು ಮಾಡಲಾಗುತ್ತಿದೆ. ದೊಡ್ಡ ಬೆತ್ತ ಮತ್ತು ಸಣ್ಣ ಬೆತ್ತ ಎಂಬ ಎರಡು ಮಾದರಿ ಬೆತ್ತಗಳನ್ನು ಅರಣ್ಯ ಪ್ರದೇಶದಿಂದ ಸಂಗ್ರಹಿಸಲಾಗುತ್ತದೆ. ಬೆತ್ತಗಳನ್ನು ಕುಶಲಕರ್ಮಿಗಳಿಗೆ ಮಂಜೂರಾದ ದರದಲ್ಲಿ ಮಾರಾಟ ಮಾಡಲಾಗುತ್ತದೆ.

**ಅರಣ್ಯ ವಾಸಿಗಳ ಹಕ್ಕು ರಕ್ಷಣೆ:** ಭಾರತದ ಅರಣ್ಯಗಳ ನಿರ್ವಹಣೆ ಹಾಗೂ ಅರಣ್ಯ ವಾಸಿಗಳು ಮತ್ತು ಬುಡಕಟ್ಟು ಜನಾಂಗದವರ ಸಾಂಪ್ರದಾಯಿಕ ಹಕ್ಕುಗಳು ಅವರಿಗೆ ಮತ್ತೆ ಸಿಗುವಂತೆ ಮಾಡುವ ನಿಟ್ಟಿನಲ್ಲಿ ಡಿಸೆಂಬರ್ ೨೯, ೨೦೦೬ ರಿಂದ ಜಾರಿಗೆ ಬಂದಿರುವ ಬುಡಕಟ್ಟು ಜನಾಂಗ ಮತ್ತು ಇತರ ಸಾಂಪ್ರದಾಯಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಕಾಯ್ದೆ ೨೦೦೬, ಒಂದು ಗಮನಾರ್ಹ ಶಾಸನ ಬದ್ಧ ಬೆಳವಣಿಗೆ ಎನಿಸಿದೆ. ಮೀಸಲು ಅರಣ್ಯ ನಿರ್ಧಾರಿತ ಸಮಯದಲ್ಲಿ ಸ್ವಾತಂತ್ರ್ಯ ಪೂರ್ವ ಸಮಯದಲ್ಲಿ ಸ್ವಾತಂತ್ರ್ಯ ಪೂರ್ವ ವಸಾಹತು ಆಡಳಿತ ಹಾಗೂ ಸ್ವಾತಂತ್ರ್ಯಾನಂತರ ಆಡಳಿತಗಳು ಈ ಹಕ್ಕುಗಳ ನೀಡಿಕೆ ನಿರ್ವಹಣೆ ವಿಷಯದಲ್ಲಿ ಹೆಚ್ಚು ಗಮನ ಹರಿಸಿರಲಿಲ್ಲ. ಪ್ರಸ್ತುತ ಈ ಮಸೂದೆಯು ಪಂಚಾಯತ್ ರಾಜ್ ಪದ್ಧತಿಯಲ್ಲಿ ಅತಿ ಕೆಳ ಹಂತದಲ್ಲಿ ಕಾರ್ಯನಿರ್ವಹಿಸುವ ಗ್ರಾಮ ಸಭೆ, ಅರಣ್ಯ ವಾಸಿಗಳಿಗೆ, ಜೀವನೋಪಾಯ ಕಲ್ಪಿಸುವ ಹಾಗೂ ನಿಸರ್ಗ ಸಂಪತ್ತಿನ ನಿರ್ವಹಣೆ ಮಾಡುವುದರಲ್ಲಿ ಅತಿ ಪ್ರಮುಖ ಪಾತ್ರವಹಿಸುವಂತೆ ಮಾಡಿದೆ.

ಬುಡಕಟ್ಟು ಜನಾಂಗದವರು ಹಲವು ತಲೆಮಾರುಗಳಿಂದ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಅರಣ್ಯ ಭೂಮಿಯಲ್ಲಿ ಕೃಷಿಯನ್ನು ಕೈಗೊಳ್ಳುವುದರ ಜೊತೆಗೆ ಮರದ ದಿಮ್ಮಿ ಹೊರತುಪಡಿಸಿ, ಇತರ ಅರಣ್ಯ ಉತ್ಪನ್ನಗಳಾದ ಸೌದೆ, ಜೇನು, ಮರಗಳ ಚಕ್ಕೆ, ಹಣ್ಣು ಎಲೆಗಳು ಮುಂತಾದವುಗಳ ಸಂಗ್ರಹಣೆ ಮಾಡುತ್ತಾರೆ. ಇವರ ಜತೆಗೆ ಬುಡಕಟ್ಟು ಜನಾಂಗಕ್ಕೆ ಸೇರಿಲ್ಲದ ಆದರೆ ಜೀವನೋಪಾಯಕ್ಕಾಗಿ ಸಂಪೂರ್ಣವಾಗಿ ಅರಣ್ಯಗಳನ್ನು ಅವಲಂಬಿಸಿರುವ ಅಲ್ಲೇ ವಾಸಿಸುವ ಜನರೂ ಇದ್ದಾರೆ. ಅನುಸೂಚಿತವಾದ ಅರಣ್ಯ ಪ್ರದೇಶಗಳಲ್ಲಿ ಇರುವ ಹಳ್ಳಿಗಳಲ್ಲಿ ವಾಸಮಾಡುವ ಇವರನ್ನು ಅರಣ್ಯ ಇಲಾಖೆ ಕೂಲಿಕಾರರೆಂದು ಕೆಲಸಕ್ಕೆ ನೇಮಿಸಿಕೊಂಡಿತ್ತು. ಆದರೆ ಅರಣ್ಯದಲ್ಲಿ ವಾಸಿಸಲು ಇವರಿಗೆ ಕಾಯಿದೆ ಬದ್ಧ ಹಕ್ಕನ್ನು ನೀಡಿರುವ ಯಾವ ದಾಖಲೆಯೂ ಇವರ

ಬಳಿ ಇಲ್ಲ. ಅರಣ್ಯ ನೀತಿಯ ವಿವಿಧ ಕಲಮುಗಳನ್ನು ಅನ್ವಯಿಸಿ ಹೇಳುವುದಾದರೆ ಇವರು ಅಕ್ರಮವಾಗಿ ಅರಣ್ಯ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆ ಎನ್ನಬಹುದು. ಅರಣ್ಯದಲ್ಲಿ ವಾಸಿಸುವ ಜನ ಅನುಭವಿಸುತ್ತ ಬಂದಿರುವ ಸಾಂಪ್ರದಾಯಿಕ ಹಕ್ಕುಗಳ ಹಾಗೂ ಈ ಹಕ್ಕುಗಳು ಅವರಿಗೆ ಶಾಸನ ಬದ್ಧವಾಗಿ ಸಿಗದಂತೆ ಆಗಿರುವ ಪರಿಸ್ಥಿತಿಯ ದ್ವಂದ್ವ ನೀತಿಯನ್ನು ಸರಿಪಡಿಸುವುದೇ ಈ ಕಾಯಿದೆಯ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶಕ್ಕಾಗಿ ಜೀವನೋಪಾಯಕ್ಕೆ ಅರಣ್ಯವನ್ನೇ ಅವಲಂಬಿಸಿರುವ ಬುಡಕಟ್ಟು ಜನಾಂಗದವರು ಹಾಗೂ ಅರಣ್ಯ ಕೂಲಿಕಾರರನ್ನು ಸಮಾನವಾಗಿ ಪರಿಗಣಿಸಬೇಕೆಂದು ಈ ಮಸೂದೆ ಸೂಚಿಸುತ್ತದೆ.

ಈ ಕಾಯಿದೆಯು ಅರಣ್ಯವಾಸಿಗಳು ಹಾಗೂ ಗ್ರಾಮ ಸಭೆಗಳು ನಿರ್ವಹಿಸಬೇಕಾದ ಜವಾಬ್ದಾರಿ ಹಾಗೂ ಹಕ್ಕುಗಳನ್ನು ವಿಷದ ಪಡಿಸಿದೆ. ಇದರಲ್ಲಿ ಸಾಮಾಜಿಕ ಅರಣ್ಯ ಸಂಪತ್ತಿನ ರಕ್ಷಣೆ, ಅದರ ಪುನರ್ ನವೀಕರಣದ ನಿರ್ವಹಣೆ, ಜೈವಿಕ ಸಂಪತ್ತಿಗೆ ಸಂಬಂಧಿಸಿದ ಬೌದ್ಧಿಕ ಆಸ್ತಿ ಹಕ್ಕು, ಜೈವಿಕ ಸಂಪತ್ತಿನ ಅಸಾಂಪ್ರದಾಯಿಕ ತಿಳುವಳಿಕೆ ಮುಂತಾದವು ಸೇರಿವೆ. ಸಾಮಾಜಿಕ ಅರಣ್ಯ ಸಂಪತ್ತಿನ ಸೂಕ್ತ ನಿರ್ವಹಣೆ ಜೊತೆ ವನ್ಯ ಜೀವಿಗಳು, ವನ ಸಂಪತ್ತಿಗೆ ಹಾನಿ ಮಾಡುವ ಯಾವುದೇ ಚಟುವಟಿಕೆಗಳನ್ನು ನಿರ್ಬಂಧಿಸುವ ಅಧಿಕಾರವನ್ನು ಗ್ರಾಮ ಸಭೆಗಳಿಗೆ ನೀಡಲಾಗಿದೆ. ಈ ಕಾಯಿದೆ ಜಾರಿಗೆ ಬರುವ ಮುನ್ನ ಅಕ್ರಮವಾಗಿ ಅರಣ್ಯಗಳಿಂದ ಹೊರದೂಡಲ್ಪಟ್ಟ ಹಾಗೂ ಸೂಕ್ತ ಪುನರ್ ವಸತಿ ಕಲ್ಪಿಸದೇ ಇರುವ ಪ್ರಕರಣಗಳಲ್ಲಿ ಆ ಜನರು ಸಮರ್ಪಕವಾದ ಪುನರ್ ವಸತಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಈ ಪುನರ್ ವಸತಿ ಪಡೆಯುವ ಹಕ್ಕುಗಳಲ್ಲಿ ಬದಲಿ ಭೂಮಿಯನ್ನು ಪಡೆಯುವ ಅವಕಾಶವೂ ಇದೆ. ಕೇಂದ್ರ ಸರ್ಕಾರ ಅರಣ್ಯ ಭೂಮಿಯನ್ನು ಸಾಮಾಜಿಕ ಹಾಗೂ ಅಭಿವೃದ್ಧಿ ಉದ್ದೇಶಗಳಿಗಾಗಿ ನೀಡಬೇಕೆಂದು ಕಾಯಿದೆ ತಿಳಿಸುತ್ತದೆ. ಇದರಲ್ಲಿ ಶಾಲೆಗಳು, ಆಸ್ಪತ್ರೆ, ಅಂಗನವಾಡಿ ಹಾಗೂ ಪಡಿತರ ಅಂಗಡಿಗಳ ನಿರ್ಮಾಣ, ವಿದ್ಯುತ್ ಹಾಗೂ ಸಂಪರ್ಕ ಮಾರ್ಗಗಳ ನಿರ್ಮಾಣ, ಕುಡಿಯುವ ನೀರಿನ ಕೊಳವೆಗಳನ್ನು ಹಾಕುವುದು. ಮಳೆ ನೀರು ಕೊಯ್ಲಿಗೆ ವ್ಯವಸ್ಥೆ, ವೃತ್ತಿ ತರಬೇತಿ ಕೇಂದ್ರ ಹಾಗೂ ಸಮಾಜ ಸೇವಾ ಕೇಂದ್ರಗಳ ಸ್ಥಾಪನೆ, ರಸ್ತೆಗಳ ನಿರ್ಮಾಣ ಮುಂತಾದವು ಸೇರಿವೆ. ಹೀಗೆ ಈ ಕಾಯಿದೆ ಅರಣ್ಯ ಹಕ್ಕುಗಳನ್ನು ನೀಡುವುದು ಮಾತ್ರವಲ್ಲದೆ ಅರಣ್ಯವಾಸಿಗಳು ಸಂಭಾವಿತ ಜೀವನ ನಡೆಸಲು ಅಗತ್ಯವಾದ ಸೌಕರ್ಯಗಳನ್ನು ಕಲ್ಪಿಸಲೂ ಅವಕಾಶ ಮಾಡಿಕೊಡುತ್ತದೆ. ಅರಣ್ಯ ಹಕ್ಕುಗಳನ್ನು ಗುರುತಿಸಲು ಹಾಗೂ ಅವುಗಳನ್ನು ನೀಡಲು ಅಗತ್ಯವಿರುವ ಒಂದು ವಿವರ ಕಾರ್ಯಸೂಚಿ ಚೌಕಟ್ಟನ್ನೂ ಈ ಕಾಯಿದೆ ರೂಪಿಸಿದೆ. ಅರಣ್ಯಗಳ ಹಕ್ಕುಗಳ ನೀಡಿಕೆ ಬಗ್ಗೆ ಅಂತಿಮ ನಿರ್ಧಾರವನ್ನು ಜಿಲ್ಲಾ ಮಟ್ಟದ ಸಮಿತಿ ನಿರ್ಧರಿಸುವುದಾದರೂ ಇದಕ್ಕೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆ, ಪಂಚಾಯತ್ ರಾಜ್ ವ್ಯವಸ್ಥೆಯ ಗ್ರಾಮ ಸಭೆಗಳಲ್ಲಿ ನಡೆಯುತ್ತದೆ. ಈ ಶಾಸನ ಗ್ರಾಮಸಭೆಗಳಿಗೆ ತಮ್ಮ ವ್ಯಾಪ್ತಿಕ ಪ್ರದೇಶಗಳಲ್ಲಿ ವೈಯಕ್ತಿಕ ಅಥವಾ ಸಾಮಾಜಿಕ ಅರಣ್ಯ ಹಕ್ಕುಗಳನ್ನು ನಿರ್ಧರಿಸುವ ಅಧಿಕಾರವನ್ನು ನೀಡಿದೆ.

**ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ:** ಬಿಳಿಗಿರಿ ರಂಗನ ಬೆಟ್ಟ ವನ್ಯ ಧಾಮದಲ್ಲಿ ಸೋಲಿಗರು ಯಳಂದೂರು, ಚಾಮರಾಜನಗರ, ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆ ತಾಲೂಕುಗಳ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದಾರೆ. ಪಾರಂಪರಿಕ ಪದ್ಧತಿಗಳಾದ ವರ್ಗಾವಣೆ ಬೇಸಾಯ ಹಾಗೂ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಸೋಲಿಗರ ಪ್ರಮುಖ ಉದ್ಯೋಗವಾಗಿದೆ. ಸೋಲಿಗ ಸಮುದಾಯದ ಏಳಿಗೆಗಾಗಿ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರವು ೧೯೮೧ರ ಅಕ್ಟೋಬರ್ ೧೮ರಂದು ನೋಂದಣಿಗೊಂಡು, ಯಳಂದೂರು, ಕೊಳ್ಳೇಗಾಲ, ಚಾಮರಾಜನಗರ ಹಾಗೂ ನಂಜನಗೂಡು ತಾಲೂಕುಗಳ ಗಿರಿಜನ ಹಾಡಿಗಳಿಗೆ ತನ್ನ ಕಾರ್ಯ

ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಗಿರಿಜನ ಮಹಿಳಾ ಆರೋಗ್ಯ ಸಹಾಯಕಿಯರ ಮೂಲಕ ದೂರದ ಗಿರಿಜನ ಹಾಡಿಗಳಲ್ಲಿ ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ. ಪಾರಂಪರಿಕ ಆರೋಗ್ಯ ಸಂಪ್ರದಾಯಗಳೊಂದಿಗೆ ಸಮಗ್ರ ಅವಶ್ಯಾಧಾರಿತ, ಸಮುದಾಯ ಕೇಂದ್ರಿತ ಆರೋಗ್ಯ ರಕ್ಷಣಾ ಪದ್ಧತಿಯನ್ನು ಅನುಷ್ಠಾನಗೊಳಿಸುವುದು, ಗಿರಿಜನ ಭಾಷೆ, ಸಂಸ್ಕೃತಿ ಹಾಗೂ ಅವರ ಪರಿಸರಕ್ಕೆ ನಿರ್ದಿಷ್ಟವಾದ ಶಿಕ್ಷಣ ಪದ್ಧತಿಯನ್ನು ಸ್ಥಾಪಿಸುವುದು, ಕಿರು ಅರಣ್ಯ ಉತ್ಪನ್ನದ ಸುಸ್ಥಿರ ಕೃಷಿ ಹಾಗೂ ಜೀವ ವೈವಿಧ್ಯತೆಯ ಸಂರಕ್ಷಣೆಯನ್ನು ಅಭಿವೃದ್ಧಿಪಡಿಸುವುದು, ಜೀವನ ನಿರ್ವಹಣೆಯ ಸುರಕ್ಷತೆಗಾಗಿ ಸುಸ್ಥಿರ ಕೃಷಿ, ವೃತ್ತಿ ತರಬೇತಿ ಹಾಗೂ ಮೌಲ್ಯವರ್ಧಿತ ಕಾಡಿನ ಉತ್ಪನ್ನಗಳನ್ನು ದೊರಕಿಸಿಕೊಡುವುದು ಮತ್ತು ಜನಪರ ಸಂಘಟನೆ ಹಾಗೂ ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಸೋಲಿಗ ಸಮುದಾಯವನ್ನು ಸಬಲಗೊಳಿಸುವುದು ಇತ್ಯಾದಿ. ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಉದ್ದೇಶಗಳಾಗಿವೆ. ಕಳೆದ ೨೭ ವರ್ಷಗಳಲ್ಲಿ ಈ ಸಂಸ್ಥೆಯು ಗಿರಿಜನರ ಆರೋಗ್ಯ–ಶಿಕ್ಷಣ, ಪೌಷ್ಠಿಕತೆ ಹಾಗೂ ಸಾಮಾಜಿಕ, ಆರ್ಥಿಕ ಸ್ಥಿತಿಯಲ್ಲಿ ಮಹತ್ತರವಾದ ಸುಧಾರಣೆಯನ್ನು ತಂದಿದೆ. ಕೇಂದ್ರವು ತನ್ನ ಕಾರ್ಯ ವ್ಯಾಪ್ತಿಯನ್ನು ಸೋಲಿಗರಿಗೆ ಸೀಮಿತಗೊಳಿಸದೇ ೧೯೮೬ರಲ್ಲಿ ತಾಲೂಕು ಕೇಂದ್ರವಾದ ಯಳಂದೂರಿನಲ್ಲಿ ಕರುಣಾ ಟ್ರಸ್ಟ್ ಸಂಸ್ಥೆಯನ್ನು ಪ್ರಾರಂಭಿಸಿದೆ. ಗ್ರಾಮೀಣ ಸಮುದಾಯವನ್ನು ಕಾಡುತ್ತಿದ್ದ ಮೂರ್ಛೆ ರೋಗ, ಕ್ಷಯ ಹಾಗೂ ಮಾನಸಿಕ ಕಾಯಿಲೆಗಳ ನಿವಾರಣೆಗೆ ಸಂಸ್ಥೆಯು ಒತ್ತು ನೀಡಿದ್ದಲ್ಲದೇ, ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ನಿವಾರಿಸಲು ಮುಂದಾಯಿತು. 'ಮಾನಸ' ಎಂಬ ಇದರ ಅಂಗಸಂಸ್ಥೆಯು ಮಾನಸಿಕ ಅಸ್ವಸ್ಥ ಮಹಿಳೆಯರನ್ನು ನೋಡಿಕೊಳ್ಳುತ್ತಿದೆ.

## ಸಸ್ಯ ಮತ್ತು ವನ್ಯ ಪ್ರಾಣಿ ಸಂಪತ್ತು

ಜಿಲ್ಲೆಯ ಸಸ್ಯ ಪರಿಸರವನ್ನು ಮುಂದಿನಂತೆ ವಿಭಾಗಿಸಲಾಗಿದೆ. ೧. ಕುರುಚಲು ಕಾಡು, ೨. ಒಣ ಎಲೆ ಉದುರುವ ಕಾಡು, ೩. ಮಿಶ್ರ ಎಲೆ ಉದುರುವ ಕಾಡು, ೪. ನಿತ್ಯಹರಿದ್ವರ್ಣದ ಕಾಡು, ೫. ಶೋಲಾ ಕಾಡು, ೬. ಹುಲ್ಲುಗಾವಲು, ೭. ನದಿ ತಟದ ಕಾಡು.

ಜಿಲ್ಲೆಯಲ್ಲಿರುವ ಬಹುಪಾಲು ಅರಣ್ಯ, ಅಲ್ಲಿನ ಬೆಟ್ಟ ಶ್ರೇಣಿಗಳು ಬೆಟ್ಟಗಳ ಸುತ್ತಲಿನ ಪ್ರದೇಶಕ್ಕೆ ಸೀಮಿತ. ಬೆಟ್ಟದ ತಪ್ಪಲಿನ ಸಸ್ಯ ವರ್ಗ ಬೆಟ್ಟದ ಮೇಲೇರಿದಂತೆ ಬದಲಾದ ರೀತಿಯ ಗಿಡ ಮರಗಳು ಕಂಡುಬರುತ್ತವೆ. ಹಲವಾರು ಮೀಟರ್ ಅಂತರದಲ್ಲಿಯೇ ಈ ಬದಲಾದ ಸಸ್ಯ ಪರಿಸರ ಕೌತುಕವನ್ನುಂಟು ಮಾಡುತ್ತದೆ. ಎತ್ತರೆತ್ತರಕ್ಕೆ ಏರಿದಂತೆ ಈ ಬದಲಾವಣೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಆದುದರಿಂದ ಮೇಲೆ ನಮೂದಿಸಿರುವ ಎಲ್ಲ ಪರಿಸರಗಳೂ ಒಂದಾದ ಮೇಲೊಂದರಂತೆ ಹಾಗೂ ಕೆಲವೆಡೆ ಒಂದರಲ್ಲೊಂದು ಮಿಳಿತವಾಗಿ ಕಾಣಸಿಗುವುದು ಇಲ್ಲಿನ ಅರಣ್ಯದ ವಿಶೇಷತೆ.'

**ಕುರುಚಲು ಕಾಡು:** ೨೫ ರಿಂದ ೫೦ ಸೆಂ.ಮೀ. ವಾರ್ಷಿಕ ಸರಾಸರಿ ಮಳೆ ಬೀಳುವ ಒಣ ಹವೆಯ ಪ್ರದೇಶದಲ್ಲಿ ಕಾಣುವ ಪರಿಸರ. ಸಾಮಾನ್ಯವಾಗಿ ಬೆಟ್ಟಗಳ ತಪ್ಪಲಿನಲ್ಲಿ ಹಾಗೂ ಬಂಡೀಪುರ ರಾಷ್ಟ್ರೀಯ ಉದ್ಯಾನವನ ಪೂರ್ವದ ಅಂಚಿನಲ್ಲಿ ಇಂತಹ ಕಾಡುಗಳು ಕಂಡುಬರುತ್ತವೆ. ಹೆಚ್ಚು ನೀರನ್ನು ಬೇಡದ ಮುಳ್ಳು ಕಂಟಿಗಳು, ಪೊದೆಗಳು, ಚಿಕ್ಕಪುಟ್ಟ ಮರಗಳು, ಕ್ಯಾಕ್ಟಸ್, ಕಳ್ಳಿ ಹಾಗೂ ಏಕ ವಾರ್ಷಿಕ ಮೂಲಿಕೆಗಳು ಇಲ್ಲಿನ ವಿಶೇಷತೆ. ಕಾಚು, ಬಳ್ಳಾರಿ ಜಾಲಿ, ತಂಗಡಿ, ಎಳಚಿ, ಜಗಳಗಂಟಿ, ಬನ್ನಿ, ಕರಿಜಾಲಿ, ಉರುಗಲು ಜಾತಿಯ

ಮರಗಳು ಇಲ್ಲಿ ಸಾಮಾನ್ಯ. ಇಲಿ, ಮೊಲ, ಮುಂಗುಸಿ, ಓತಿ, ಹಲ್ಲಿ, ಆರಣೆ ಹಲವಾರು ರೀತಿಯ ಹಾವುಗಳು ಈ ನೆಲೆಯಲ್ಲಿ ಸರ್ವೇ ಸಾಮಾನ್ಯವಾಗಿ ಬದುಕಿರುತ್ತವೆ.

ನೆಲ ಹಕ್ಕಿಗಳಾದ ಗೌಜಲು, ಭಾರದ್ವಾಜ, ಟಿಟ್ಟಿಭ, ರಾಬಿನ್, ಬುಷ್ ಚಾಟ್, ಮಣಿಸೋರೆ, ಬೆಳುವಸೋರೆ, ಕಂದುಕಪೋತ, ನವಿಲು, ಕೆಂಪು ಕುಂಡೆ ಪಿಕಳಾರ, ಬಿಳಿಹುಬ್ಬು ಪಿಕಳಾರ, ಮಾಲ್ಕೋವ, ಕೆಂಬೂತ, ಮೈನ, ತರಗೆಲೆ ಹಕ್ಕಿ ಮುಂತಾದವು ಇಲ್ಲಿ ಗೋಚರಿಸುತ್ತವೆ. ಆರೆಂಟು ಅಡಿ ಎತ್ತರದ ಹುತ್ತಗಳು ಈ ನೆಲೆಯಲ್ಲಿ ಕಾಣಸಿಗುವುದು ಸಾಮಾನ್ಯ ದೃಶ್ಯ. ಇವು ಪ್ರಾಣಿ ಪ್ರಪಂಚದ ತಾಂತ್ರಿಕ ಕುಶಲತೆಗೆ ಮೂಲ ಸಾಕ್ಷಿಯಾಗಿವೆ. ಇವುಗಳ ನಿರ್ಮಾತೃಗಳು ಅತ್ಯಂತ ಕ್ಷುದ್ರ ಹಾಗೂ ಪುಟ್ಟ ಜೀವಿಗಳಾದ ಗೆದ್ದಲಹುಳು ಎಂಬುದು ಸೋಜಿಗದ ಸಂಗತಿ.

**ಒಣ ಎಲೆ ಉದುರುವ ಕಾಡು:** ಜಿಲ್ಲೆಯ ಹೆಚ್ಚಿನ ಅರಣ್ಯಗಳು ಈ ಗುಂಪಿಗೆ ಸೇರುತ್ತವೆ. ೫೦ ಸೆಂ.ಮೀ. ಗಿಂತ ಹೆಚ್ಚು ಮಳೆ ಬೀಳುವ ಸ್ವಲ್ಪ ಒಣ ಹವೆಯ ಪ್ರದೇಶದಲ್ಲಿ ಈ ಕಾಡು ಹರಡಿದೆ. ಇಲ್ಲಿನ ವಿಶೇಷತೆ ಮಧ್ಯಮ ಎತ್ತರದ ಮರಗಳಿರುವುದು. ಈ ಮರಗಳು ರೈತರ ಬದುಕಿನ ಪರಿಕರಗಳ ತಯಾರಿಕೆಯಲ್ಲಿ ಬಹು ಉಪಯೋಗಿ. ಕೆಲವನ್ನು ಮನೆ ಕಟ್ಟುವ ಮರಮುಟ್ಟುಗಳನ್ನಾಗಿಯೂ ಬಳಸಲಾಗುತ್ತದೆ. ಮತ್ತಿ, ಧಡಸಲು, ದಿಂಡಿಗ, ಬೀಟೆ, ಕಾಡು ಬೆಂಡೆ, ಬೆಟ್ಟದ ನೆಲ್ಲಿ, ಬೊಂಬು, ಬಿದಿರು, ಅಂಟುವಾಳ, ಬಸವನಪಾದ, ಕಾಡುಸೀಗೆ, ಬೇಲ, ಶ್ರೀಗಂಧ ಮುಂತಾದವು ಇಲ್ಲಿನ ಸಾಮಾನ್ಯ ಮರಗಳು, ನಗ್ನ ಬೀಜ ಸಸ್ಯವಾದ ಮುಂಡೀಚಲ ಎಂದು ಕರೆಯುವ (Cycas) ಇಲ್ಲಿನ ವಿಶಿಷ್ಟ ಸಸ್ಯ.

ಮೊಲ, ಮುಂಗುಸಿ, ಮುಳ್ಳುಹಂದಿ, ಕಾಡುಹಂದಿ, ಕಡವೆ, ಚುಕ್ಕೆ ಜಿಂಕೆ, ಕಾಡುಕೋಳಿ, ಹಸಿರುಬಾರ್ಬೆಟ್, ಮಾಲ್ಕೋವಾ, ಗಿಡುಗ, ಹದ್ದು, ಕೆಮ್ಮೀಸೆ ಪಿಕಳಾರ, ಮುಳ್ಳುಕೋಳಿ, ಕಡುಕನಹಳ್ಳಿ, ಕೆಂಭೂತ, ಕೋಗಿಲೆ, ರಾಟಿವಾಳ, ಗೊರವಂಕ ಮುಂತಾದ ಪ್ರಾಣಿ ಪಕ್ಷಿಗಳು ಸಾಮಾನ್ಯ. ಹಾವು, ಹಲ್ಲಿ, ಓತಿ, ಊಸರವಳ್ಳಿ ಹಾಗೂ ಹಲವು ರೀತಿಯ ಚಿಟ್ಟೆಗಳು ಸಾಮಾನ್ಯವಾಗಿ ಕಾಣಸಿಗುತ್ತವೆ.

**ಮಿಶ್ರ ಎಲೆ ಉದುರುವ ಕಾಡುಗಳು:** ವಾರ್ಷಿಕ ೭೫ ರಿಂದ ೧೦೦ ಸೆಂ.ಮೀ. ಮಳೆ ಬೀಳುವ ಪ್ರದೇಶದಲ್ಲಿ ನೀಳವಾಗಿ ಎತ್ತರವಾಗಿ ಬೆಳೆಯುವ ಮರಗಳು ಕಾಡುರೀ ಮರಗಳು ಬಲವಾಗಿ, ಗಟ್ಟಿಯಾಗಿದ್ದು, ಮರಮುಟ್ಟುಗಳಿಗೆ ಉಪಯುಕ್ತವಾಗಿರುತ್ತವೆ. ಹೊನ್ನೆ, ಬೀಟೆ, ತಾರೆ, ಅಳಲೆ, ಮತ್ತಿ, ಹುನಾಲು, ಯತ್ನಾಗ, ಹತ್ತಿ, ಬಸರಿ, ಹೆಬ್ಬಲಸು, ಹಾಲಿವಾಣ, ಕೆಂಪು ಬೂರುಗ, ಕಂಚುವಾಳ ಮುಂತಾದ ಮರಗಳೇ ಹೆಚ್ಚಾಗಿ ಕಂಡುಬರುತ್ತವೆ. ಅಲ್ಲಲ್ಲಿ ಬಿದಿರು ಮೆಳೆಗಳು ಇರುವುದು ಅಪರೂಪವೇನಲ್ಲ. ತೇಗದ ಮರ ವಿರಳವಾಗಿ ಕಾಣಸಿಗುತ್ತವೆ. ಅರಣ್ಯ ಇಲಾಖೆಯವರು ಬೆಳೆಸಿರುವ ಸರ್ವೆ, ನೀಲಗಿರಿ, ತೇಗ ಮುಂತಾದ ಸಸ್ಯಗಳ ನೆಡುತೋಪುಗಳು ಅಲ್ಲಲ್ಲಿ ಕಾಣಸಿಗುತ್ತವೆ.

ದೊಡ್ಡ ಸಸ್ಯಾಹಾರಿಗಳಾದ ಕಾಟಿ, ಆನೆ, ಬರ್ಕ, ಹಾಡುಹಂದಿ, ಚುಕ್ಕೆ ಜಿಂಕೆ, ಕಡವೆ, ನಾಲ್ಕು ಕೊಂಬಿನ ಜಿಂಕೆ ಹಾಗೂ ಮಾಂಸಾಹಾರಿಗಳಾದ ಕರಡಿ, ಹುಲಿ, ಚಿರತೆ, ಕಾಡುನಾಯಿ, ಕಾಡು ಬೆಕ್ಕು, ತಾಳೆ ಬೆಕ್ಕು, ಪುನುಗು ಬೆಕ್ಕು, ಕೋತಿ, ಮುಸುವ ಮುಂತಾದವು ವಿಶೇಷವಾಗಿ ಕಣ್ಣಿಗೆ ಬೀಳುತ್ತವೆ. ಹಣ್ಣು ಹಂಪಲು ತಿನ್ನುವ ಪಕ್ಷಿಗಳಾದ ಮಾಲೆಗಿಳಿ, ಪಂಚವರ್ಣದ ಗಿಳಿ, ನೀಲಿ, ರೆಕ್ಕೆಯ ಗಿಳಿ, ಅತಿ ಚಿಕ್ಕದಾದ ತೂಗಾಡುವ ಗಿಳಿ, ದೊಡ್ಡ ಹಾಗೂ ಸಣ್ಣ ಹಸಿರು ಬಾರ್ಬೆಟ್, ಹಸಿರು ಪಾರಿವಾಳ, ಇಂಪೀರಿಯಲ್ ಪಾರಿವಾಳ, ಕಳ್ಳಹಕ್ಕಿ, ಕತ್ತರಿಬಾಲದ

ನೊಣಹಿಡುಕ, ಬೀಸಣಿಗೆ ಬಾಲದ ನೊಣ ಹಿಡುಕ, ಕುಡುಗೋಲ ಕೊಕ್ಕಿನ ಸೋಬಾನೆ ಹಕ್ಕಿ, ನೆಲದ ಥ್ರಶ್, ಕಿರಿಯ ಡಮರುಗಬಾಲದ ಕಾಜಾಣ, ಹಿರಿಯ ಡಮರುಗ ಬಾಲದ ಕಾಜಾಣ, ಇತರ ರೀತಿಯ ಕಾಜಾಣಗಳು, ಬೂದು ತಲೆಯ ಮೈನ, ಕಾಡು ಮೈನ, ಪರಿಗ್ರೀನ್ ಗಿಡುಗ, ಜುಟ್ಟಿನ ಸರ್ಪಹದ್ದು, ರಣಹದ್ದು, ಬಾನೆಲ್ಲಿ ಹದ್ದು, ವಿವಿಧ ರೀತಿಯ ಮರಕುಟಿಗ ಮುಂತಾದ ಪಕ್ಷಿ ಸಂಕುಲ ಸಮೃದ್ಧಿಯಾಗಿರುತ್ತವೆ. ಹೆಬ್ಬಾವು, ಕೇರೆ, ನಾಗರ, ಮರದ ಹಾವು, ನೀರಾವು ಇತಿಯಾದಿ ಸರೀಸೃಪಗಳು ಸಾಮಾನ್ಯ.

**ನಿತ್ಯಹರಿದ್ವರ್ಣದ ಕಾಡು:** ೧೧೫೦ ಸೆಂ.ಮೀ. ನಷ್ಟು ಅಧಿಕ ಮಳೆಯಾಗುವ ತಾಣದಲ್ಲಿ ಗಗನಚುಂಬಿ ಮರಗಳು ಅವುಗಳನ್ನು ಹೆಬ್ಬಾವಿನಂತೆ ಬಳಸಿ ಹಬ್ಬಿರುವ ಗಟ್ಟಿ ಮರ ಬಳ್ಳಿಗಳು, ಮರದ ಕೊಂಬೆಗಳ ಮೇಲೆ ಬೆಳೆಯುವ ಬಂದಳಿಕೆಗಳು, ಆರ್ಕಿಡ್ (ಸೀತೆ ದಂಡೆ) ಸಸ್ಯಗಳು ಪ್ರಮುಖವಾಗಿ ಕಾಣುವ ಸಸ್ಯ ಸಂಕುಲ.

ತುಂಬಾ ಎತ್ತರದ ಮರಗಳಾದ ಕರವಾದಿ, ಕೀಸಲು, ಕುಂಕುಮ, ಮೋರೆ, ನರವಲು, ನೇರಳೆ, ಹೊಳೆ ಮತ್ತೆ, ಕಕ್ಕಿಲು, ದೊಳ್ಳಿ, ರಕ್ತ ಚಂದನ, ದೊಡ್ಡ ಮಟೆ, ಹುಡಿಮಾವು ಹಾಗೂ ಚಪ್ಪೆಕಾಯಿ ಬಳ್ಳಿ (ಸುಂಕತಿ ಬಳ್ಳಿ), ನಗ್ನ ಬೀಜ ಸಸ್ಯ ವರ್ಗಕ್ಕೆ ಸೇರಿದ ಕಂಬಳಿ ಬೀಳು ಬಳ್ಳಿ (Gnetum) ಇಲ್ಲಿಯ ವಿಶೇಷ ಸಸ್ಯ ಸಂಕುಲ. ಏಳು ವರ್ಷಕ್ಕೊಮ್ಮೆ ಹೂ ಬಿಡುವ ಕುರಂಜಿ ಸಸ್ಯ ಇಲ್ಲಿನ ಇಳಿಜಾರು ಪ್ರದೇಶದಲ್ಲಿ ಬೆಳೆಯುತ್ತದೆ. ಎತ್ತರದ ಮರದ ಕೊಂಬೆಗಳಿಗೆ ಕಟ್ಟಿರುವ ನೂರಾರು ಹೆಜ್ಜೇನು ಗೂಡುಗಳು ಇಲ್ಲಿ ಅತಿ ಸಾಮಾನ್ಯವಾಗಿ ಕಂಡುಬರುವ ದೃಶ್ಯ. ಇಲ್ಲಿನ ಎತ್ತರದ ಮರದ ಬುಡಗಳಲ್ಲಿನ ಗೋಡೆಯಂತೆ ಚಾಚಿರುವ ಬೇರುಗಳು ಸಾಮಾನ್ಯ. ಇಲ್ಲಿನ ಮರಗಳ ರೆಂಬೆ ಕೊಂಬೆಗಳ ಮೇಲೆ ಪಾಚಿ (Lichen) ರೀತಿಯ ಸಸ್ಯಗಳು ಬೆಳೆದಿರುವುದು ಸಾಮಾನ್ಯ ದೃಶ್ಯ.

ಮಲಬಾರ್ ಕೇಶ ಅಳಿಲು, ಮಲಬಾರ್ ಹಾರುವ ಅಳಿಲು, ಹಾರುವ ಓತಿ, ಕಪ್ಪೆ ಗುಂಪಿಗೆ ಸೇರಿದ ಕಾಲಿಲ್ಲದ ನೀರಿನ ಒರತೆಗಳಲ್ಲಿರುವ ಇಕ್ತಿಯೋಫಿಸ್ ಇಲ್ಲಿನ ವಿಶಿಷ್ಟ ಪ್ರಾಣಿಗಳು. ನೀರಿನಲ್ಲಿ ಹಾಗೂ ಒದ್ದೆ ನೆಲದಲ್ಲಿ ಅಡರುವ ರಕ್ತ ಹೀರುವ ಇಂಬಳ (ಜಿಗಣೆ) ಈ ಕಾಡಿನ ಇನ್ನೊಂದು ವಿಶೇಷ ಕ್ಷುದ್ರ ಪ್ರಾಣಿ. ಬೆಟ್ಟದ ಮೈನಾ, ಕಪ್ಪು ಪಿಕಳಾರ, ಹಳದಿ ಕಣ್ಣಿನ ಪಿಕಳಾರ, ಮಲಬಾರ್ ಸಿಳ್ಳೆಗಾರ ಥ್ರಶ್, ಪಚ್ಚೆ ಕಪೋತ, ಅರಣ್ಯ ಕುಂಡೆಕುಸುಕ, ವಿವಿಧ ರೀತಿಯ ಮರಕುಟಿಕಗಳು, ಸಣ್ಣ ದೊಡ್ಡ ಗೂಬೆಗಳು, ಮಲಬಾರ್ ಕೊಂಬಿನ ಹಕ್ಕಿ ಮುಂತಾದ ಪಕ್ಷಿ ಸಂಕುಲ ವಿಶಿಷ್ಟವಾದವು.

**ಶೋಲಾ ಅರಣ್ಯ:** ಎತ್ತರದ ಶಿಖರಗಳ ಕಣಿವೆಗಳ ನೀರಿನ ಒರತೆ ಇರುವಲ್ಲಿ ಕಾಣುವ ಕಾಡು. ಇಲ್ಲಿ ಹೆಚ್ಚು ಮಾರ್ಪಾಡುಗಳಿಂದ ಕೂಡಿದ ಸಸ್ಯಗಳು ಬೆಳೆಯುತ್ತವೆ. ಇಲ್ಲಿನ ಮರಗಳು ಕಡಿಮೆ ಎತ್ತರ ಬೆಳೆಯುವುದಲ್ಲದೆ, ಕೊಂಬೆಗಳು ನುಲಿದುಕೊಂಡಿರುತ್ತವೆ. ಹಾಗೂ ಮರದ ಕಾಂಡ ಹಾಗೂ ಕೊಂಬೆಗಳು ತುಂಬಾ ಗಟ್ಟಿ. ಈ ಎಲ್ಲಾ ಮಾರ್ಪಾಡುಗಳು ಎತ್ತರದಲ್ಲಿ ಬೀಸುವ ಗಾಳಿಯ ಹೊಡೆತವನ್ನು ತಡೆಯಲು ಸಹಕಾರಿ. ಇಲ್ಲಿನ ವಿಶಿಷ್ಟ ಮರಗಳು ಬಿಳಿ ಬೂತಾಳೆ, ಕಬ್ಬಿಣದ ಮರ, ಲೋಧ್ರ, ಮುಸ್ತಕ ಇತ್ಯಾದಿ. ಗುಡ್ಡದ ಶೃಂಗದಲ್ಲಿ ಸಟ್ಟೇರಿಯ ಹೆಬಿನೇರಿಯ ಇತ್ಯಾದಿ ಚಿಕ್ಕ ಸಸ್ಯಗಳು ವಿಶೇಷವಾಗಿ ಬೆಳೆದಿರುತ್ತವೆ. ಇಲ್ಲಿಯ ಪ್ರಾಣಿ ಸಂಕುಲಗಳು ನಿತ್ಯಹರಿದ್ವರ್ಣ ಕಾಡುಗಳಲ್ಲಿಯಂತೆಯೇ ಇರುತ್ತವೆ.

**ಹುಲ್ಲುಗಾವಲು:** ಶಿಖರಗಳ ಇಳಿಜಾರಿನಲ್ಲಿ ಹಾಗೂ ಶೋಲಾಗಳ ಸುತ್ತ ಬಯಲು ಪ್ರದೇಶ. ಎಲ್ಲಿ ನೋಡಿದರೂ ಹುಲ್ಲು ರೀತಿಯ ಸಸ್ಯಗಳದ್ದೇ ಸಾಮ್ರಾಜ್ಯ. ದೂರ ದೂರದಲ್ಲಿ ಒಂದೊಂದು ಗಿಡ್ಡದಾಗಿರುವ ಮರಗಳು ಬೆಳೆದಿರುವುದು ಇಲ್ಲಿಯ ವಿಶೇಷತೆ. ಇಲ್ಲಿನ ಹುಲ್ಲುಗಳ ಪ್ರಭೇದಗಳು ವಿಶಿಷ್ಟ ಗುಣದವು. ಸುವಾಸನೆ ಬೀರುವ ನಿಂಬೆ ಹುಲ್ಲು. ಮಜ್ಜಿಗೆ ಹುಲ್ಲು, ಆರೇಳು ಅಡಿ ಎತ್ತರ ಬೆಳೆಯುವ ಆನೆ ಹುಲ್ಲು ಹಾಗೂ ಬಾಣೆ ಹುಲ್ಲು ಅತಿ ಸಾಮಾನ್ಯ. ಹುಲ್ಲುಗಾವಲಿನಲ್ಲಿ ಅಲ್ಲಲ್ಲಿ ನೆಲದ ಆರ್ಕಿಡ್ ಜಾತಿಯ ಸಸ್ಯಗಳು ವಿರಳವಾಗಿ ಕಾಣಸಿಗುತ್ತವೆ. ದಂಶಕ ಪ್ರಾಣಿಗಳಾದ ಇಲಿ, ಮೊಲ ಹಲವು ರೀತಿಯ ಹಾವು, ಹಲ್ಲಿ ಹಾಗೂ ಅಕ್ಕಪಕ್ಕದ ಆವಾಸದಿಂದ ಮೇವಿಗಾಗಿ ಬರುವ ಚಿಕ್ಕದೊಡ್ಡ ಸಸ್ಯಾಹಾರಿ ಪ್ರಾಣಿಗಳು. ಅವುಗಳನ್ನು ಬೆನ್ನಟ್ಟಿ ಬರುವ ಮಾಂಸಾಹಾರಿ ಪ್ರಾಣಿಗಳೂ ಸಹ ಒಮ್ಮೊಮ್ಮೆ ಕಾಣಸಿಗುತ್ತವೆ.

**ನದಿ ತಟದ ಕಾಡುಗಳು:** ನಿರಂತರ ಹರಿಯುವ ನದಿ ಪಾತ್ರದಲ್ಲಿ ಬೇರೆಯದೇ ಸಸ್ಯ ಸಂಕುಲ ಗೋಚರಿಸುತ್ತವೆ. ಬಿಳಿಗಿರಿರಂಗನ ಬೆಟ್ಟದ ದೊಡ್ಡ ಸಂಪಿಗೆ ಹಳ್ಳ ಮತ್ತು ಇತರ ನೀರಿನ ಆಸರೆಗಳ ಇಕ್ಕೆಲಗಳಲ್ಲಿ ಕಾಣಸಿಗುವ ವಿಶೇಷ ಸಸ್ಯ ಸಂಕುಲ ಇಂತಿದೆ. ತೋಟೆ, ನೀಳಲು, ಮಾಟೆ, ಅಂಬಟ್ಟಿ, ಸವ್ವೆ, ದೊಡ್ಡ ಹಿಪ್ಪೆ, ಕಾಡು ಕರಿಬೇವು, ಎಡಮುರಿ ಇತ್ಯಾದಿ ಮರಗಳಲ್ಲದೆ ಜಾಡು ಬೆತ್ತ, ನಾಗಬೆತ್ತ, ಹಂದಿಬೆತ್ತ ಇಲ್ಲಿನ ವಿಶೇಷ ಸಸ್ಯವರ್ಗ. ಕ್ಷುದ್ರ ಸಸ್ಯಗುಂಪಿಗೆ ಸೇರಿದ ಮರದಾಕಾರದ ಜರೀಗಿಡ (Tree fern) ಒಮ್ಮೊಮ್ಮೆ ಕಾಣಸಿಗುತ್ತದೆ. ಸುತ್ತಲಿನ ಆವಾಸದ ಎಲ್ಲಾ ರೀತಿಯ ಪ್ರಾಣಿ–ಪಕ್ಷಿ ಸಂಕುಲ ನೀರಿಗಾಗಿ ಇಲ್ಲಿ ಬಂದು ಹೋಗುತ್ತವೆ. ರಕ್ತ ಹೀರುವ ಅಟ್ಟೆ (ಜಿಗಣೆ) ಕಾಲಿಲ್ಲದ ಕಪ್ಪೆ ವರ್ಗದ ಇಕ್ತಿಯೋಫಿಸ್, ನೀರುಹಾವು, ಮಿಂಚುಳ್ಳಿ ಹಾಗೂ ಇತರ ಜಲ ಪಕ್ಷಿಗಳು ಸಾಮಾನ್ಯವಾಗಿ ಕಾಣಸಿಗುತ್ತವೆ.

ಚಾಮರಾಜನಗರದ ಜೀವ ವೈವಿಧ್ಯತೆಯಲ್ಲಿ ಪೂರ್ವಘಟ್ಟ ಹಾಗೂ ಪಶ್ಚಿಮ ಘಟ್ಟಗಳೆರಡರಲ್ಲಿ ಜೀವಿಗಳಿರುವುದು ತುಂಬಾ ವಿಶೇಷ ಸಂಗತಿ ಜಿಲ್ಲೆಯಲ್ಲಿರುವ ಬಹು ವಿಶಿಷ್ಟ ರೀತಿಯ ಜೀವಿಗಳೆಂದರೆ ಕೀಟಾಹಾರಿ ಸಸ್ಯಗಳಾದ ಡ್ರೊಸೆರಾ ಬರ್ಮಾನಿ, ಡ್ರೊಸೇರಾ ಪೆಲ್ಟೇಟಾ, ಯುಟ್ರಿಕುಲೇರಿಯಾ (ಬುಡ್ಡೆ ಗಿಡ), ಜರೀ ವರ್ಗದ ಮರಜರೀಗಿಡ, ಮರಗಳ ಮೇಲೆ ಬೆಳೆಯುವ ಹಬ್ಬು ಸಸ್ಯಗಳೆಂದೇ ಪ್ರಸಿದ್ಧಿ ಪಡೆದಿರುವ ಆರ್ಕಿಡ್‌ಗಳಾದ ಡೆಂಡ್ರೊಬಿಯಮ್, ವ್ಯಾಂಡಾ, ಬಲ್ಬೊಫಿಲ್ಲಮ್ ಇತ್ಯಾದಿ ೬೦ರಷ್ಟು ವಿವಿಧ ರೀತಿಯ ಆರ್ಕಿಡ್ ಪ್ರಭೇದಗಳು ಕಾಣಸಿಗುತ್ತವೆ. ಈ ಆರ್ಕಿಡ್‌ಗಳ ಹೂಗಳು ವೈವಿಧ್ಯಮಯ ಆಕಾರ ಹಾಗೂ ಬಣ್ಣವನ್ನು ಹೊಂದಿದ್ದು ತುಂಬಾ ಆಕರ್ಷಕವಾಗಿರುತ್ತವೆ.

ಮರದ ಮೇಲೆ ಪರತಂತ್ರ ಜೀವಿಗಳಾಗಿ ಬೆಳೆಯುವ ಹಲವು ಬಂದಳಿಕೆಗಳಾದ ಲೊರ್‍ಯಾಂತಸ್, ಎಲಿಟ್ರ್ಯಾಂತೆ, ವಿಸ್ಕಂ, ಡೆಂಡ್ರಾಪ್ತೆ ಇಲ್ಲಿನ ಮರಗಳ ಕೊಂಬೆಗಳ ಮೇಲೆ ಕಾಣಸಿಗುವ ಸಾಮಾನ್ಯ ದೃಶ್ಯ. ಈ ಬಂದಳಿಕೆಗಳ ಹಣ್ಣನ್ನು ತಿಂದು ಅವುಗಳ ಬೀಜ ಪ್ರಸಾರ ಮಾಡುವ ಪುಟ್ಟ ಹೂ ಕುಟುಕ ಹಕ್ಕಿ ಇಲ್ಲಿನ ವಿಶೇಷತೆ. ಈ ಪರತಂತ್ರ ಸಸ್ಯಗಳ ಹಾವಳಿಯಿಂದ ಇಲ್ಲಿನ ಅನೇಕ ಮರಗಳು ನಾಶವಾಗುತ್ತಿರುವುದು ಸಾಮಾನ್ಯ ದೃಶ್ಯ.

ಚಳಿಗಾಲ ಮುಗಿಯುವ ಕಾಲದಲ್ಲಿ ಇಲ್ಲಿನ ಕೆಂಪು ಬೂರುಗ, ಹಾಲಿವಾಣ ಮುಂತಾದ ಮರಗಳು ತಮ್ಮೆಲ್ಲ ಎಲೆಗಳನ್ನು ಕಳೆದುಕೊಂಡು ಸುಂದರವಾದ ಪುಷ್ಪಗುಚ್ಛಗಳಿಂದ ಅಲಂಕೃತವಾಗಿ ಕಣ್ಮನ ಸೆಳೆಯುತ್ತವೆ. ಈ ಹೂಗಳ ಮಕರಂದವನ್ನು ಹೀರಲು ಹತ್ತು ಹಲವು ಸಂಕುಲದ ಪಕ್ಷಿಗಳ ದೊಡ್ಡ ಜಾತ್ರೆಯೇ

ನೆರೆಯುತ್ತದೆ. ಯಾವ ಪರಿಮಳವನ್ನೂ ಬೀರದ ಮುತ್ತುಗದ ಸಸ್ಯ ಗುಚ್ಛಗಳು ಮೈದಳೆದ ಕಾಲದಲ್ಲಿ ಅರಣ್ಯವೇ ಬೆಂಕಿಯ ನಾಲಗೆಯಂತೆ ಗೋಚರಿಸುವುದು ಇಲ್ಲಿನ ವಿಶೇಷತೆ. ಬೇಡಗುಳಿ ಬೆಟ್ಟಗಳ ಶ್ರೇಣಿಯ ಜೋಡಿಗೆರೆ, ದೇವಗೆರೆ ಶಿಖರಗಳಲ್ಲಿ ಹಲವು ಜಾತಿಯ ಜರೀ ಸಸ್ಯಗಳಾದ ಓಫಿಯೋಗ್ಲಾಸಮ್, ಈಕ್ವಿಸಿಟಂ, ಈಸಾಯಿಟಿಸ್, ಸೆನಾಜಿನೆಲ್ಲಾ ಮುಂತಾದವು ಯಥೇಚ್ಛವಾಗಿ ಬೆಳೆದಿರುತ್ತವೆ.

ಜಿಲ್ಲೆಯ ಕೆರೆ ಕಟ್ಟೆಗಳಲ್ಲಿ ವೈವಿಧ್ಯಮಯ ಪಕ್ಷಿ ಸಂಕುಲ ಆಹಾರಕ್ಕಾಗಿ, ನೀರಿಗಾಗಿ ಬರುವ ಅನೇಕ ರೀತಿಯ ಪ್ರಾಣಿಗಳು ಸಾಮಾನ್ಯ. ಚಳಿಗಾಲದಲ್ಲಿ ಉತ್ತರಾರ್ಧಗೋಳದಿಂದ ವಲಸೆ ಬರುವ ನಾನಾ ರೀತಿಯ ಬಾತುಕೋಳಿಗಳು, ಹೆಬ್ಬಾತು, ಮರಳ ಪೀಪಿ, ಗಾಡ್‌ವಿಟ್, ಪ್ರ್ಯಾಟಿನ್ ಕೋಲ್, ವಿವಿಧ ರೀತಿಯ ಪ್ಲೋವರ್‌ಗಳು, ಚಿನ್ನದ ಪ್ಲೋವರ್‌ಗಳು ದೊಡ್ಡ ದೊಡ್ಡ ಗುಂಪುಗಳಾಗಿ ಇಲ್ಲಿ ಬೀಡು ಬಿಟ್ಟಿರುವುದನ್ನು ಕಾಣಬಹುದು. ಮಂಗೋಲಿಯಾ, ಚೀನಾ, ಜಪಾನ್, ಸೈಬೀರಿಯಾ ಹಾಗೂ ದಕ್ಷಿಣ ಯುರೋಪ್ ಖಂಡದಿಂದಲೂ ಬರುವ ವಲಸೆಗಾರ ಪಕ್ಷಿಗಳು ಚಳಿಗಾಲದಲ್ಲಿ ಪ್ರತಿ ವರ್ಷ ಇಲ್ಲಿನ ನೀರಿನ ತಾಣಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

ವನ್ಯ ಜೀವಿಗಳನ್ನು ಹೊಂದಿರುವ ಕರ್ನಾಟಕದ ಕಾಡುಗಳನ್ನು ಆರು ಪ್ರದೇಶಗಳಾಗಿ ವಿಂಗಡಿಸಲಾಗಿದೆ. ೧. ಕರಾವಳಿ, ೨. ಪಶ್ಚಿಮಘಟ್ಟಗಳ ಶಿಖರಗಳ ಸರಣಿ ಪ್ರದೇಶ, ೩. ಮಲೆನಾಡು, ೪. ಹಳೆಯ ಮೈಸೂರಿನ ಪ್ರಸ್ಥಭೂಮಿ, ೫. ಕೊಳ್ಳೇಗಾಲದ ಬೆಟ್ಟಗಳು ಮತ್ತು ೬. ಬಯಲುನಾಡು. ವನ್ಯಪ್ರಾಣಿಗಳ ಅಸ್ಥಿತ್ವದ ಪ್ರಮಾಣವನ್ನು ಗಮನಿಸಿದರೆ ಮೇಲೆ ನಾಡು ಸಹಿತವಾದ ಹಳೆಯ ಮೈಸೂರಿನ ಪೀಠ ಭೂಮಿ ಕೊಡಗು, ಕೊಳ್ಳೇಗಾಲ ಬೆಟ್ಟಗಳು, ಘಟ್ಟಗಳ ಶಿಖರ ಶ್ರೇಣಿ ಹಾಗೂ ಬಯಲು ನಾಡುಗಳಿಗೆ ಹೋದಂತೆ ಹಂತ ಹಂತಗಳಲ್ಲಿ ಪ್ರಾಣಿಗಳ ಸಂಖ್ಯೆ ಇಳಿಯುತ್ತಾ ಹೋಗುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ವನ್ಯಜೀವಿಗಳನ್ನು ಹೊಂದಿರುವ ರಾಜ್ಯದ ಎರಡು ಕಾಡುಗಳ ಪ್ರದೇಶವಿದೆ. ಅವುಗಳೆಂದರೆ:–

**೧) ಹಳೆಯ ಮೈಸೂರು ಪೀಠಭೂಮಿ:** ಹಳೇ ಮೈಸೂರು ಪೀಠಭೂಮಿ ತೇವದ ಹಾಗೂ ಒಣ ಉದುರೆಲೆ ಕಾಡುಗಳಿಂದ ಮತ್ತು ಬಯಲು ಪ್ರದೇಶಗಳಿಂದ ಕೂಡಿದೆ. ಈ ಪ್ರದೇಶವು ವನ್ಯ ಜೀವಿಗಳ ಸಮೃದ್ಧಿ ಮತ್ತು ವೈವಿಧ್ಯಕ್ಕೆ ಹೆಸರಾಗಿದ್ದು ಜೀವ ಶಾಸ್ತ್ರಜ್ಞರಿಗೆ ಮತ್ತು ಅರಣ್ಯ ಶಾಸ್ತ್ರಜ್ಞರಿಗೆ ಚಿರಪರಿಚಿತವಾಗಿದೆ. ಮಲೆನಾಡು ಪ್ರದೇಶವು ವನ್ಯ ಜೀವಿಗಳ ವಿಚಾರದಲ್ಲಿ ಇದರ ನಂತರ ಎರಡನೆಯ ಸ್ಥಾನವನ್ನು ಪಡೆಯುವುದು. ಇಲ್ಲಿ ಸುಮಾರು ೧,೩೦೦ ಆನೆಗಳಿವೆ. ಎರಡು ದಶಕಗಳ ಹಿಂದೆ ಬಂಡೀಪುರ ಮತ್ತು ಅದರ ಸುತ್ತಮುತ್ತಲ ಪ್ರದೇಶದಲ್ಲಿ ಕಾಡೆಮ್ಮೆಗಳ ಸಾಂದ್ರತೆ ಹೆಚ್ಚಾಗಿದ್ದು ಇತ್ತೀಚೆಗೆ ಅವುಗಳ ಸಂಖ್ಯೆ ಕ್ಷೀಣಿಸಿದೆ. ಆದರೆ ನಮ್ಮ ರಾಜ್ಯ ಸರ್ಕಾರದ ಕೆಲವು ತೀವ್ರತರ ಕ್ರಮಗಳಿಂದಾಗಿ ಕಾಡೆಮ್ಮೆಗಳ ಸಂಖ್ಯೆ ಇತ್ತೀಚೆಗೆ ಏರುತ್ತಿದೆ. ಕೆಳಮಟ್ಟದ ಅಡವಿಗಳನ್ನು ಮೆಚ್ಚುವ ಕಡವೆ ಮತ್ತು ಚುಕ್ಕೆ ಜಿಂಕೆಗಳ ಪ್ರಾತಿನಿಧ್ಯ ಇಲ್ಲಿ ಚೆನ್ನಾಗಿದೆ. ಕಾಡುಹಂದಿ ಮುಂತಾದ ಪ್ರಾಣಿಗಳು ಇಲ್ಲಿ ಸಾಕಷ್ಟು ಕಂಡುಬರುವುವು. ಶ್ರೇಷ್ಠ ಸಸ್ತನಿಗಳ ಗಣಕ್ಕೆ ಸೇರಿದ ಹನುಮಾನ್ ಲ್ಯಾಂಗೂರ್ ಮತ್ತು ಬಾನೆಟ್ ಕೋತಿಗಳ ಸಾಂದ್ರತೆ ತಕ್ಕಮಟ್ಟಿಗೆ ಇದೆ.

**೨) ಕೊಳ್ಳೇಗಾಲದ ಬೆಟ್ಟಗಳು:** ಕೊಳ್ಳೇಗಾಲದ ಬೆಟ್ಟಗಳು ಪಶ್ಚಿಮಘಟ್ಟಗಳು ಪೂರ್ವಮುಖೀ ಶಾಖೆಗಳಾಗಿವೆ. ಇಲ್ಲಿ ಒಣ ಉದುರೆಲೆ ಕಾಡುಗಳಿವೆ. ಬಿಳಿಗಿರಿರಂಗನ ಬೆಟ್ಟ ಮಾತ್ರ ನಿತ್ಯಹರಿದ್ವರ್ಣದ ಕಾಡುಗಳನ್ನು ಹೊಂದಿದೆ. ಬೆಟ್ಟ ಪ್ರದೇಶದಲ್ಲಿ ಮಾತ್ರ ಅರೆ ನಿತ್ಯಹರಿದ್ವರ್ಣದ ಅರಣ್ಯಗಳಿವೆ. ಇಲ್ಲಿಗೆ ಹತ್ತಿರವಾಗಿ ಬೆಂಗಳೂರು, ಮೈಸೂರು, ಮಂಡ್ಯ ಮತ್ತು ಇತರ ಕೈಗಾರಿಕಾ ಹಾಗೂ ಜನನಿಬಿಡ ಪ್ರದೇಶಗಳು ಇರುವುದರಿಂದ ಇಲ್ಲಿ ಉದುರೆಲೆ ಕಾಡುಗಳು ವಿರಳವಾಗಿದ್ದು ಇಲ್ಲಿಯ ವನ್ಯ ಜೀವಿಗಳಲ್ಲಿ ವೈವಿಧ್ಯತೆ ಕಡಿಮೆ. ಇಲ್ಲಿ ಬಿದುರು (ಕಳಲೆ) ಮತ್ತು ಇತರ ಬಯಲು ಮೇವು ದೊರೆಯುವುದರಿಂದ ಆನೆಗಳು ಸಾಮಾನ್ಯವಾಗಿ ಕಂಡುಬರುವ ವನ್ಯ ಮೃಗಗಳು. ಆನೇಕಲ್ಲು ಮತ್ತು ಕನಕಪುರದ ಸಾಗುವಳಿ ಪ್ರದೇಶಗಳು ಅಡವಿಗಳಿಗೆ ಸಮೀಪವಾಗಿದ್ದು ಇಲ್ಲಿಯ ಕಾಡಾನೆಗಳು ಅನೇಕ ಬಾರಿ ಬೆಳೆಗಳ ಮೇಲೆ ದಾಳಿ ಮಾಡುವುದುಂಟು. ಕಾಡೆಮ್ಮೆ, ಕಡವೆ, ಚುಕ್ಕೆಜಿಂಕೆಗಳು ಈ ಪ್ರದೇಶದ ಬೆಟ್ಟದ ತಪ್ಪಲಲ್ಲಿ ಇವೆ. ಕಾಡು ನಾಯಿಗಳು ಇಲ್ಲಿ ಸಾಮಾನ್ಯವಾಗಿ ಕಂಡು ಬರುತ್ತಿದ್ದು ಇತರ ಮಾಂಸಾಹಾರೀ ವನ್ಯಜೀವಿಗಳಾದ ಹುಲಿ ಮತ್ತು ಚಿರತೆ ಇಲ್ಲಿ ವಿರಳ. ಒಂದು ಕಾಲಕ್ಕೆ ವನ್ಯಮೃಗಗಳಿಂದ ಸಮೃದ್ಧವಾಗಿದ್ದ ಈ ಪ್ರದೇಶದಲ್ಲಿ ಮಾನವನ ಚಟುವಟಿಕೆಗಳಿಂದ ಅವುಗಳ ಸಂಖ್ಯೆ ಕ್ಷೀಣಿಸಿದೆ.

## ವಾಯುಗುಣ

ಜಿಲ್ಲೆಯು ಉಷ್ಣ ವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. ಇದು ಹೊಂದಿರುವ ಹವಾಮಾನದ ಆಧಾರದ ಮೇಲೆ ಇಲ್ಲಿನ ವಾಯುಗುಣವನ್ನು ನಾಲ್ಕು ಋತುಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ:–

ಚಳಿಗಾಲ (ಡಿಸೆಂಬರ್–ಫೆಬ್ರವರಿ), ಬೇಸಿಗೆ ಕಾಲ (ಮಾರ್ಚ್‌ನಿಂದ ಮೇ ವರೆಗೆ), ನೈಋತ್ಯ ಮಾನ್ಸೂನ್ ಕಾಲ (ಜೂನ್‌ನಿಂದ ಸೆಪ್ಟೆಂಬರ್‌ವರೆಗೆ), ಈಶಾನ್ಯ ಮಾನ್ಸೂನ್ ಕಾಲ (ಅಕ್ಟೋಬರ್‌ನಿಂದ ನವೆಂಬರ್‌ರವರೆಗೆ).

**ಚಳಿಗಾಲ:** ಇದು ಡಿಸೆಂಬರ್‌ನಿಂದ ಪ್ರಾರಂಭವಾಗಿ ಫೆಬ್ರವರಿಯಲ್ಲಿ ಅಂತ್ಯವಾಗುವುದು. ಶುಭ್ರ ಆಕಾಶ, ಕಡಿಮೆ ಆರ್ದ್ರತೆ, ಸುಖೋಷ್ಣ ಇವುಗಳು ಚಳಿಗಾಲದ ವಿಶಿಷ್ಟ ಲಕ್ಷಣಗಳು. ಈ ಕಾಲದಲ್ಲಿ ಮಳೆಯು ತೀರ ಕಡಿಮೆ. ಈ ಅವಧಿಯಲ್ಲಿ ಕಡಿಮೆ ಉಷ್ಣಾಂಶ ಕಂಡುಬರುತ್ತದೆ. ಡಿಸೆಂಬರ್ ತಿಂಗಳು ಅತೀ ಕಡಿಮೆ ಉಷ್ಣಾಂಶವನ್ನು ಹೊಂದಿರುವ ಮಾಸವಾಗಿದೆ.

**ಬೇಸಿಗೆ ಕಾಲ:** ಈ ಕಾಲವು ಮಾರ್ಚ್ ತಿಂಗಳಿನಲ್ಲಿ ಪ್ರಾರಂಭವಾಗಿ ಮೇ ತಿಂಗಳಿನಲ್ಲಿ ಕೊನೆಗೊಳ್ಳುತ್ತದೆ. ಈ ಕಾಲದಲ್ಲಿ ಉಷ್ಣತೆಯು ಏರುತ್ತಾ ಹೋಗಿ ಏಪ್ರಿಲ್ ಅಥವಾ ಮೇ ತಿಂಗಳ ಆದಿ ಭಾಗದಲ್ಲಿ ಗರಿಷ್ಠತೆಯನ್ನು ತಲುಪುತ್ತದೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಆರ್ದ್ರತೆಯು ಕಡಿಮೆ. ಮೇ ತಿಂಗಳ ನಂತರ ಆರ್ದ್ರತೆಯು ವೃದ್ಧಿಯಾಗುತ್ತಾ ಹೋಗುತ್ತದೆ. ಸಾಮಾನ್ಯವಾಗಿ ಸಂಜೆ ನಾಲ್ಕರ ನಂತರ ಕೆಲವೊಂದು ಸಲ ಗುಡುಗಿನಿಂದ ಕೂಡಿದ ಮಳೆ ಬೀಳುತ್ತವೆ. ಏಪ್ರಿಲ್ ತಿಂಗಳು ಜಿಲ್ಲೆಯ ಅತಿ ಹೆಚ್ಚು ಉಷ್ಣತೆಯನ್ನು ಹೊಂದಿರುವ ಮಾಸವಾಗಿದೆ. ಬೇಸಿಗೆಯ ಕಾಲದಲ್ಲಿ ಕನಿಷ್ಠ ೩೩ ಡಿಗ್ರಿ ಸೆಲ್ಸಿಯಸ್ ನಿಂದ ಗರಿಷ್ಠ ೩೭ ಡಿಗ್ರಿ ಸೆಲ್ಸಿಯಸ್ ನವರೆಗೆ ಉಷ್ಣಾಂಶ ವಿರುವುದನ್ನು ಕಾಣಬಹುದು.

**ನೈಋತ್ಯ ಮಾನ್ಸೂನ್ ಮಾರುತಗಳ ಕಾಲ:** ಈ ಕಾಲವು ಜೂನ್ ತಿಂಗಳಿನಿಂದ ನಾಲ್ಕು ತಿಂಗಳುಗಳವರೆಗೆ ಹಬ್ಬಿಕೊಂಡಿದೆ. ಇದು ಜಿಲ್ಲೆಯ ಅತ್ಯಂತ ಪ್ರಮುಖ ಮಳೆಗಾಲದ ಋತುವಾಗಿದೆ. ಏಪ್ರಿಲ್ ತಿಂಗಳ

ಅಂತ್ಯದ ವೇಳೆಗೆ ದಕ್ಷಿಣ ಪ್ರಸ್ಥಭೂಮಿಯ ಅತಿ ಹೆಚ್ಚು ಉಷ್ಣಾಂಶದಿಂದಾಗಿ ಕಡಿಮೆ ಒತ್ತಡ ಪ್ರದೇಶವಾಗಿ ರೂಪುಗೊಳ್ಳುತ್ತದೆ. ಅದೇ ವೇಳೆಯಲ್ಲಿ ಪೂರ್ವ ಭಾಗದಲ್ಲಿರುವ ಅರಬ್ಬೀ ಸಮುದ್ರವು ಅಧಿಕ ಒತ್ತಡದ ಪ್ರದೇಶವಾಗಿ ಮಾರ್ಪಾಡಾಗುತ್ತದೆ. ಪರಿಣಾಮವಾಗಿ ಮಾರುತವು ಅರಬ್ಬೀ ಸಮುದ್ರದ ಕಡೆಯಿಂದ ಪಶ್ಚಿಮ ಘಟ್ಟಗಳ ಕಡೆಗೆ ಬೀಸಲು ಪ್ರಾರಂಭವಾಗುತ್ತದೆ. ತೇವಾಂಶ ಭರಿತವಾದ ನೈಋುತ್ಯ ಮಾನ್ಸೂನ್ ಮಾರುತವು ಪಶ್ಚಿಮ ಘಟ್ಟಗಳಿಂದ ತಡೆಯಲ್ಪಟ್ಟು ಪಶ್ಚಿಮ ಘಟ್ಟಗಳ ಗಾಳಿಗಭಿಮುಖವಾದ ಪಶ್ಚಿಮ ಭಾಗವು ಅಧಿಕ ಮಳೆಯನ್ನು ಪಡೆದರೆ ವಿರುದ್ಧ ಭಾಗವಾದ ಪೂರ್ವ ಭಾಗವು ಮಳೆಯ ನೆರಳಿನ ಪ್ರದೇಶವಾಗಿದ್ದು ಸಾಧಾರಣ ಪ್ರಮಾಣದ ಮಳೆಯನ್ನು ಪಡೆಯುತ್ತದೆ. ಚಾಮರಾಜನಗರ ಜಿಲ್ಲೆಯು ಈ ಮಳೆಯ ನೆರಳಿನ ಪ್ರದೇಶದಲ್ಲಿ ನೆಲೆಸಿರುವುದರಿಂದ ಅನಾವೃಷ್ಟಿ ಸರ್ವೇ ಸಾಮಾನ್ಯವಾಗಿ ಬಿಟ್ಟಿದೆ. ಹಾಗಾಗಿ ಇಲ್ಲಿಯ ಕೃಷಿ ಮಳೆಯಾಶ್ರಿತವಾಗಿದೆ. ಮಾಸಿಕ ಸರಾಸರಿ ಮಳೆಯ ಪ್ರಮಾಣವನ್ನು ಗಮನಿಸಿದಾಗ ಜಿಲ್ಲೆಯಲ್ಲಿ ಮೇ ತಿಂಗಳಿನಿಂದ ಜುಲೈ ತಿಂಗಳವರೆಗೆ ಸಾಮಾನ್ಯವಾಗಿ ಅಧಿಕ ಮಳೆಯಾಗುವುದನ್ನು ಕಾಣಬಹುದು.

**ಈಶಾನ್ಯ ಮಾನ್ಸೂನ್ ಮಾರುತಗಳ ಕಾಲ:** ಈ ಋತುವು ಅಕ್ಟೋಬರ್ ತಿಂಗಳ ಆದಿ ಭಾಗದಿಂದ ಪ್ರಾರಂಭವಾಗುತ್ತದೆ. ಇದನ್ನು ಹಿಂಗಾರು ಮಳೆಗಾಲವೆನ್ನಬಹುದು. ಈ ಕಾಲದಲ್ಲಿ ಮಾರುತಗಳು ನೈಋುತ್ಯ ಅಥವಾ ಪಶ್ಚಿಮದಿಂದ ಈಶಾನ್ಯದತ್ತ ಬದಲಾವಣೆಗೊಂಡು ತೇವಾಂಶ ಮತ್ತು ಮೇಘಾವರಣ ಕಡಿಮೆಯಾಗಿರುತ್ತದೆ. ಮುಖ್ಯವಾಗಿ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಮಳೆಯು ಬರುತ್ತದೆ. ಡಿಸೆಂಬರ್ ತಿಂಗಳಲ್ಲಿ ಬಹು ಕಡಿಮೆ ಮಳೆ ಬೀಳುತ್ತದೆ. ಈ ಕಾಲದಲ್ಲಿಯೇ ಕೆಲವೊಂದು ಸಲ ೧೧ ಡಿಗ್ರಿ ಉ.ಅಕ್ಷಾಂಶದ ಉತ್ತರಕ್ಕಿರುವ ಮದ್ರಾಸಿನ ಕರಾವಳಿಯನ್ನು ಬಂಗಾಳಕೊಲ್ಲಿಯ ವಾಯುಕುಸಿತ ಮತ್ತು ಬಿರುಗಾಳಿಗಳು ಅಪ್ಪಳಿಸಿ ಪಶ್ಚಿಮ ಅಥವಾ ವಾಯುವ್ಯ ದಿಕ್ಕಿನತ್ತ ಹರಿದು ರಾಜ್ಯವನ್ನು ಆಕ್ರಮಿಸುತ್ತವೆ. ಇದರಿಂದಾಗಿ ರಾಜ್ಯದ ದಕ್ಷಿಣ ಭಾಗದಲ್ಲಿ ವ್ಯಾಪಕವಾಗಿಯೂ, ಕೆಲವೊಂದು ಸಲ ಉತ್ತರದ ಭಾಗಗಳಲ್ಲಿಯೂ ಮಳೆ ಬೀಳುತ್ತದೆ.

**ಉಷ್ಣತೆ:** ಉಷ್ಣತೆಯು ಜನವರಿಯ ಆದಿ ಭಾಗದಲ್ಲಿ ಅತಿ ಕಡಿಮೆಯಾಗಿದ್ದು ಕ್ರಮೇಣ ಏರುತ್ತಾ ಹೋಗಿ, ಫೆಬ್ರವರಿಯ ಮಧ್ಯ ಭಾಗದಿಂದ ಅಥವಾ ಮಾರ್ಚಿಯ ಆದಿ ಭಾಗದಿಂದ ತೀವ್ರವಾಗಿ ಏರುತ್ತದೆ. ಅತಿ ಉಷ್ಣತೆಯು ದಕ್ಷಿಣದ ಬಯಲು ನಾಡಿನಲ್ಲಿ ಏಪ್ರಿಲ್ ತಿಂಗಳಿನಲ್ಲಿ ಕಂಡುಬರುತ್ತದೆ. ಜುಲೈ ತಿಂಗಳಲ್ಲಿ ಈ ಪ್ರದೇಶದ ಆಕಾಶವು ಮುಗಿಲಿನಿಂದ ಮುಚ್ಚಿದ್ದು, ಆಗಾಗ ಮಳೆ ಬೀಳುತ್ತದೆ. ಜನವರಿಯಲ್ಲಿ ಆಕಾಶ ಶುಭ್ರವಾಗಿದ್ದು ಹಗಲಿನಲ್ಲಿ ಸೂರ್ಯನ ಬಿಸಿಲು ಬೀಳುತ್ತದೆ. ಅಕ್ಟೋಬರ್ ನಂತರ ಉಷ್ಣತೆಯು ರಾಜ್ಯಾದ್ಯಂತ ಸಾವಕಾಶವಾಗಿ ಇಳಿದು, ಜನವರಿಯ ಆರಂಭದಲ್ಲಿ ಕನಿಷ್ಠ ಮಟ್ಟವನ್ನು ತಲುಪುತ್ತದೆ. ಜಿಲ್ಲೆಯ ಸಾಮಾನ್ಯ ಮತ್ತು ವಾಸ್ತವಿಕ ಸರಾಸರಿ ಮಳೆ ವಿವರಗಳನ್ನು ಕೋಷ್ಟಕ ೧.೫ ರಲ್ಲಿ ನೀಡಿದೆ. ತಾಲೂಕುವಾರು ಮಳೆಯ ವಿವರಗಳನ್ನು ಕೋಷ್ಟಕ ೧.೬ ರಲ್ಲಿ ನೀಡಿದೆ. ಜಿಲ್ಲೆಯ ಮಾಸಿಕ ಸರಾಸರಿ ಉಷ್ಣತೆ, ಸಾಪೇಕ್ಷ ಆರ್ದ್ರತೆ ವಿವರಗಳು ಮೈಸೂರಿನಲ್ಲಿರುವಂತೆ ಇರುವುದರಿಂದ ಅದೇ ವಿವರಗಳನ್ನು ಕೋಷ್ಟಕ ೧.೭ ರಲ್ಲಿ ನೀಡಿದೆ. ಗಾಳಿ ಬೀಸುವ ವೇಗದ ಮಾಸಿಕ ವಿವರಗಳನ್ನು ಕೋಷ್ಟಕ ೧.೮ ರಲ್ಲಿ ನೀಡಿದೆ. ಜಿಲ್ಲೆಯ ಹವಾಮಾನದ ಇತರ ಸಂಗತಿಗಳ ವಿವರಗಳನ್ನು ಕೋಷ್ಟಕ ೧.೯ ರಲ್ಲಿ ನೀಡಿದೆ.

## ಕೋಷ್ಟಕ ೧.೫ ಸಾಮಾನ್ಯ ಮತ್ತು ವಾಸ್ತವಿಕ ಸರಾಸರಿ ಮಳೆ ವಿವರ. (೧೯೦೧–೧೯೫೦)

| ಕ್ರ. ಸಂ | ವಿವರ | | ಗುಂಡ್ಲುಪೇಟೆ | ಚಾಮರಾಜನಗರ | ಯಳಂದೂರು |
|---|---|---|---|---|---|
| ೧. | ವರ್ಷಗಳು ಅಂಕಿ ಅಂಶಗಳು | | ೫೦ | ೫೦ | ೫೦ |
| ೨. | ಜನವರಿ | ಅ) | ೫.೬ | ೫.೬ | ೪.೩ |
| | | ಬ) | ೦.೪ | ೦.೬ | ೦.೫ |
| ೩. | ಫೆಬ್ರವರಿ | ಅ) | ೪.೮ | ೩.೬ | ೫.೩ |
| | | ಬ) | ೦.೪ | ೦.೩ | ೦.೫ |
| ೪. | ಮಾರ್ಚ್ | ಅ) | ೧೫.೭ | ೧೦.೨ | ೧೧.೭ |
| | | ಬ) | ೧.೧ | ೦.೮ | ೧.೦ |
| ೫. | ಏಪ್ರಿಲ್ | ಅ) | ೭೦.೪ | ೫೨.೮ | ೬೮.೩ |
| | | ಬ) | ೫.೩ | ೩.೮ | ೪.೮ |
| ೬. | ಮೇ | ಅ) | ೧೨೫.೭ | ೧೨೫.೭ | ೧೨೫.೫ |
| | | ಬ) | ೮.೧ | ೭.೯ | ೭.೬ |
| ೭. | ಜೂನ್ | ಅ) | ೪೧.೯ | ೩೭.೩ | ೬೨.೭ |
| | | ಬ) | ೩.೮ | ೩.೧ | ೪.೭ |
| ೮. | ಜುಲೈ | ಅ) | ೪೮.೦ | ೩೫.೩ | ೬೧.೨ |
| | | ಬ) | ೫.೪ | ೩.೭ | ೫.೯ |
| ೯. | ಆಗಸ್ಟ್ | ಅ) | ೪೯.೮ | ೭೧.೬ | ೯೩.೨ |
| | | ಬ) | ೪.೪ | ೪.೭ | ೭.೨ |
| ೧೦. | ಸೆಪ್ಟೆಂಬರ್ | ಅ) | ೬೪.೮ | ೮೮.೯ | ೧೨೬.೦ |
| | | ಬ) | ೪.೯ | ೫.೮ | ೭.೪ |
| ೧೧. | ಅಕ್ಟೋಬರ್ | ಅ) | ೧೫೫.೨ | ೧೫೦.೪ | ೧೬೨.೬ |
| | | ಬ) | ೯.೦ | ೮.೫ | ೯.೬ |
| ೧೨. | ನವೆಂಬರ್ | ಅ) | ೭೯.೩ | ೭೫.೭ | ೭೯.೮ |
| | | ಬ) | ೪.೮ | ೫.೧ | ೫.೧ |
| ೧೩. | ಡಿಸೆಂಬರ್ | ಅ) | ೧೮.೫ | ೧೮.೮ | ೧೬.೮ |
| | | ಬ) | ೧.೩ | ೧.೨ | ೧.೪ |
| ೧೪. | ವಾರ್ಷಿಕ | ಅ) | ೬೭೯.೭ | ೬೭೫.೯ | ೮೧೭.೪ |
| | | ಬ) | ೪೮.೯ | ೪೫.೫ | ೫೫.೭ |
| ೧೫. | ಸಾಮಾನ್ಯ ಮಳೆಗಿಂತ ಶೇಕಡಾವಾರು ಅತಿ ಹೆಚ್ಚು ಮಳೆ ಮತ್ತು ವರ್ಷ | | ೧೫೫ | ೧೯೪ | ೧೬೯ |
| | | | ೧೯೪೬ | ೧೯೦೩ | ೧೯೦೩ |
| ೧೬. | ಸಾಮಾನ್ಯ ಮಳೆಗಿಂತ ಶೇಕಡಾವಾರು ಅತಿಕಡಿಮೆ ಮಳೆ ಮತ್ತು ವರ್ಷ | | ೩೬ | ೫೭ | ೬೧ |
| | | | ೧೯೫೦ | ೧೯೨೩ | ೧೯೨೩ |
| ೧೭. | ೨೪ ಗಂಟೆಗಳಲ್ಲಿ ಬಿದ್ದ ಅತಿ ಹೆಚ್ಚು ಮಳೆ ಪ್ರಮಾಣ (ಮಿ..ಮೀ) ಮತ್ತು ದಿನಾಂಕ | | ೧೮೫.೨ | ೨೦೫.೫ | ೧೬೨.೧ |
| | | | ೨೨.೫.೧೯೫೭ | ೧೭.೧೦.೧೯೧೬ | ೮.೪.೧೯೨೧ |

*ಸೂಚನೆ ಅ) ಸಾಮಾನ್ಯ ಮಳೆ ಮಿ.ಮೀ.ಗಳಲ್ಲಿ ಬ) ಸರಾಸರಿ ಮಳೆಯಾದ ದಿವಸಗಳು (ಪ್ರತಿ ದಿನ ೨.೫ ಮಿ.ಮೀ. ಅಥವಾ ಹೆಚ್ಚಿನ ಮಳೆ)*

## ಕೋಷ್ಟಕ ೧.೬ :ತಾಲೂಕುವಾರು ಮಳೆಯ ವಿವರಗಳು (ಮಿ.ಮೀ.) ೧೯೯೭ ರಿಂದ ೨೦೧೦

| ವರ್ಷ | ಚಾಮರಾಜನಗರ | ಗುಂಡ್ಲುಪೇಟೆ | ಕೊಳ್ಳೇಗಾಲ | ಯಳಂದೂರು | ಜಿಲ್ಲೆ |
|---|---|---|---|---|---|
| ವಾಡಿಕೆ ಮಳೆ (೧೯೦೧-೭೦) | ೭೩೯ | ೭೪೭.೮ | ೮೮೨.೧ | ೮೯೫.೫ | ೮೧೬.೧ |
| ೧೯೯೭ | ೭೪೯ | ೯೫೯ | ೫೪೪ | ೭೨೬ | ೭೪೫ |
| ೧೯೯೮ | ೯೮೫ | ೭೨೨ | ೧,೧೦೭ | ೮೪೦ | ೯೧೪ |
| ೧೯೯೯ | ೧,೦೫೦ | ೬೫೧ | ೧,೦೩೭ | ೧,೧೦೮ | ೯೨೮ |
| ೨೦೦೦ | ೧,೨೧೭ | ೮೦೭ | ೧,೦೮೫ | ೧,೧೫೬ | ೧,೦೬೬ |
| ೨೦೦೧ | ೫೪೦ | ೬೮೮ | ೬೧೯ | ೭೨೦ | ೬೪೧ |
| ೨೦೦೨ | ೪೫೭ | ೫೫೮ | ೪೬೬ | ೫೪೬ | ೫೦೭ |
| ೨೦೦೩ | ೫೯೪ | ೪೨೫ | ೬೩೭ | ೪೮೭ | ೫೩೬ |
| ೨೦೦೪ | ೭೧೦ | ೯೦೩ | ೧,೦೯೦ | ೯೬೭ | ೯೧೮ |
| ೨೦೦೫ | ೧,೨೪೨ | ೧,೦೩೯ | ೧,೦೮೬ | ೧,೧೯೧ | ೧,೧೪೦ |
| ೨೦೦೬ | ೫೪೧ | ೫೪೭ | ೪೧೨ | ೫೬೭ | ೫೧೭ |
| ೨೦೦೭ | ೬೯೮ | ೯೬೫ | ೮೧೩ | ೧,೧೫೪ | ೮೪೮ |
| ೨೦೦೮ | ೭೭೧ | ೮೯೯ | ೭೬೬ | ೯೫೪ | ೮೧೯ |
| ೨೦೦೯ | ೫೯೦ | ೮೪೬ | ೬೩೪ | ೯೩೮ | ೭೦೪ |
| ೨೦೧೦ | ೮೨೯ | ೭೯೧ | ೮೦೭ | ೮೭೫ | ೮೨೫ |

*ಆಧಾರ: ಚಾಮರಾಜ ನಗರ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೯-೨೦೧೦*

## ಕ್ಕೋಷ್ಟಕ ೧.೬ಅ: ಮಳೆಯ ವಿವರ(ಮಿ.ಮೀ)ಚಾಮರಾಜನಗರ ಜಿಲ್ಲೆ

| ತಾಲೂಕು( ವರ್ಷಗಳ ಮಳೆ ಅಂಕಿಅಂಶಗಳು) | ವಿವರ | ಮಾನ್ಸೂನ್ ಪೂರ್ವ | ಮುಂಗಾರು ಮಾರುತ | ಹಿಂಗಾರು ಮಾರುತ | ವಾರ್ಷಿಕ ಮಳೆ (ಮಿ.ಮೀ) |
|---|---|---|---|---|---|
| ಚಾ.ರಾ.ನಗರ(೯೮) | ಸರಾಸರಿ ಮಳೆ | ೨೧೭ | ೨೫೩ | ೨೫೨ | ೭೨೨ |
| | ಕನಿಷ್ಠ ಮಳೆ | ೩೩ | ೪೯ | ೦ | ೩೪೧ |
| | ಗರಿಷ್ಠ ಮಳೆ | ೪೭೧ | ೬೯೭ | ೫೬೬ | ೧೪೦೦ |
| | ಸ್ಟ್ಯಾಂಡರ್ಡ್ ಡೀವಿಯೇಷನ್ | ೮೮ | ೧೨೧ | ೧೧೩ | ೨೦೬ |
| | ಸಿ.ವಿ(ಶೇ) | ೪೧ | ೪೮ | ೪೫ | ೨೯ |
| ಗುಂಡ್ಲುಪೇಟೆ (೯೮) | ಸರಾಸರಿ ಮಳೆ | ೨೩೧ | ೨೦೯ | ೨೪೮ | ೬೮೮ |
| | ಕನಿಷ್ಠ ಮಳೆ | ೨೪ | ೭ | ೩೦ | ೭೭ |
| | ಗರಿಷ್ಠ ಮಳೆ | ೫೩೨ | ೬೨೦ | ೫೧೫ | ೧೫೮೦ |
| | ಸ್ಟ್ಯಾಂಡರ್ಡ್ ಡೀವಿಯೇಷನ್ | ೧೦೧ | ೧೧೭ | ೧೧೨ | ೨೩೭ |
| | ಸಿ.ವಿ(ಶೇ) | ೪೪ | ೫೬ | ೪೫ | ೩೫ |
| ಕೊಳ್ಳೇಗಾಲ | ಸರಾಸರಿ ಮಳೆ | ೨೨೪ | ೩೦೯ | ೨೬೭ | ೮೦೦ |
| | ಕನಿಷ್ಠ ಮಳೆ | ೧೪ | ೭೪ | ೦ | ೩೪೧ |
| | ಗರಿಷ್ಠ ಮಳೆ | ೫೭೯ | ೮೩೫ | ೬೫೪ | ೧೬೮೭ |
| | ಸ್ಟ್ಯಾಂಡರ್ಡ್ ಡೀವಿಯೇಷನ್ | ೧೦೨ | ೧೫೩ | ೧೨೬ | ೨೪೪ |
| | ಸಿ.ವಿ(ಶೇ) | ೪೬ | ೪೯ | ೪೭ | ೩೧ |

| ತಾಲೂಕು( ವರ್ಷಗಳ ಮಳೆ ಅಂಕಿಅಂಶಗಳು) | ವಿವರ | ಮಾನ್ಸೂನ್ ಪೂರ್ವ | ಮುಂಗಾರು ಮಾರುತ | ಹಿಂಗಾರು ಮಾರುತ | ವಾರ್ಷಿಕ ಮಳೆ (ಮಿ.ಮೀ) |
|---|---|---|---|---|---|
| ಯಳಂದೂರು | ಸರಾಸರಿ ಮಳೆ | ೨೩೦ | ೩೫೮ | ೨೫೯ | ೮೪೭ |
| | ಕನಿಷ್ಠ ಮಳೆ | ೬೬ | ೫೯ | ೧೫ | ೪೦೭ |
| | ಗರಿಷ್ಠ ಮಳೆ | ೪೯೫ | ೭೩೬ | ೫೨೧ | ೧೩೭೩ |
| | ಸ್ಟ್ಯಾಂಡರ್ಡ್ ಡೀವಿಯೇಷನ್ | ೧೧೪ | ೧೬೨ | ೧೧೮ | ೨೬೪ |
| | ಸಿ.ವಿ(ಶೇ) | ೪೯ | ೪೫ | ೪೬ | ೩೧ |

**ಕೋಷ್ಟಕ ೧.೭: ಮಾಸಿಕ ಸರಾಸರಿ ಉಷ್ಣತೆ, ಅತಿ ಹೆಚ್ಚು ಹಾಗೂ ಅತಿ ಕಡಿಮೆ ಉಷ್ಣತೆ, ಸಾಪೇಕ್ಷ ಆರ್ದ್ರತೆ, ಮೈಸೂರು**

| ತಿಂಗಳು | ಸರಾಸರಿ ದೈನಂದಿನ ಉಷ್ಣತೆ ಡಿಗ್ರಿ ಸೆಲ್ಸಿಯಸ್ | | ಗರಿಷ್ಠ ದಾಖಲಾದ ಉಷ್ಣತೆ | | ಕನಿಷ್ಠ ದಾಖಲಾದ ಉಷ್ಣತೆ | | ಸಾಪೇಕ್ಷ ಆರ್ದ್ರತೆ (ಶೇಕಡಾ) | |
|---|---|---|---|---|---|---|---|---|
| | ಗರಿಷ್ಠ | ಕನಿಷ್ಠ | ಡಿಗ್ರಿ ಸೆಲ್ಸಿಯಸ್ | ದಿನಾಂಕ | ಡಿಗ್ರಿ ಸೆಲ್ಸಿಯಸ್ | ದಿನಾಂಕ | ಬೆಳಿಗ್ಗೆ ೮–೩೦ AM | ಸಂಜೆ ೫–೩೦ PM |
| ಜನವರಿ | ೨೮.೩ | ೧೬.೪ | ೩೨.೮ | ೨೭–೧–೧೯೩೬ | ೧೧.೧ | ೨೮–೧–೧೯೫೩ | ೭೫ | ೩೦ |
| ಫೆಬ್ರವರಿ | ೩೧.೨ | ೧೮.೨ | ೩೬.೧ | ೨೮–೨–೧೯೩೧ | ೧೨.೧ | ೧೭/೧೮–೨–೧೯೬೭ | ೬೯ | ೨೫ |
| ಮಾರ್ಚ್ | ೩೩.೫ | ೨೦.೨ | ೩೭.೮ | ೩೦–೩–೧೯೩೧ | ೧೩.೩ | ೧೧–೩–೧೯೩೩ | ೭೧ | ೨೧ |
| ಏಪ್ರಿಲ್ | ೩೪.೦ | ೨೧.೪ | ೩೯.೪ | ೪–೪–೧೯೧೭ | ೧೫.೫ | ೨೭–೪–೧೯೭೧ | ೭೫ | ೩೪ |
| ಮೇ | ೩೨.೬ | ೨೧.೨ | ೩೭.೮ | ೩–೫–೧೯೩೬ | ೧೫.೬ | ೪–೫–೧೯೦೪ | ೭೯ | ೫೧ |
| ಜೂನ್ | ೨೮.೯ | ೨೦.೨ | ೩೭.೨ | ೧–೬–೧೯೨೬ | ೧೨.೬ | ೧೦–೬–೧೯೧೪ | ೮೧ | ೬೬ |
| ಜುಲೈ | ೨೭.೩ | ೧೯.೭ | ೩೩.೩ | ೩೦–೭–೧೮೯೯ | ೧೫.೮ | ೧–೭–೧೯೬೧ | ೮೪ | ೭೦ |
| ಆಗಸ್ಟ್ | ೨೭.೯ | ೧೯.೬ | ೩೩.೯ | ೫–೮–೧೮೯೯ | ೧೬.೭ | ೧೨–೮–೧೯೨೮ | ೮೪ | ೬೭ |
| ಸೆಪ್ಟೆಂಬರ್ | ೨೮.೭ | ೧೯.೩ | ೩೩.೩ | ೧೪–೯–೧೯೩೬ | ೧೩.೪ | ೨೦–೯–೧೯೫೯ | ೮೩ | ೬೧ |
| ಅಕ್ಟೋಬರ್ | ೨೮.೪ | ೧೯.೬ | ೩೨.೮ | ೧–೧೦–೧೯೦೫ | ೧೨.೯ | ೩೧–೧೦–೧೯೭೪ | ೮೫ | ೬೧ |
| ನವೆಂಬರ್ | ೨೭.೪ | ೧೮.೩ | ೩೨.೨ | ೧–೧೧–೧೯೧೮ | ೧೦.೯ | ೧೮–೧೧–೧೯೭೪ | ೮೦ | ೫೪ |
| ಡಿಸೆಂಬರ್ | ೨೭.೦ | ೧೬.೫ | ೩೨.೦ | ೧–೧೨–೧೯೭೨ | ೧೦.೬ | ೧೩–೧೨–೧೯೪೫ | ೭೮ | ೪೩ |
| ವಾರ್ಷಿಕ | **೨೯.೬** | **೧೯.೨** | – | | | | ೭೯ | ೪೯ |

**ಕೋಷ್ಟಕ ೧.೮: ಚಾಮರಾಜನಗರ ಮಾಸಿಕವಾರು ಗಾಳಿ ಬೀಸುವ ಸರಾಸರಿ ವೇಗ (ಗಂಟೆಗೆ ಕಿ.ಮೀ.ಗಳಲ್ಲಿ) ಮೈಸೂರು**

| ಜನವರಿ | ಫೆಬ್ರವರಿ | ಮಾರ್ಚ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ವಾರ್ಷಿಕ |
|---|---|---|---|---|---|---|---|---|---|---|---|---|
| ೧೧.೩ | ೯.೧ | ೮.೮ | ೮.೪ | ೧೦.೨ | ೧೩.೯ | ೧೪.೧ | ೧೨.೫ | ೧೦.೭ | ೭.೯ | ೯.೩ | ೧೧.೩ | ೧೦.೬ |

## ಕೋಷ್ಟಕ ೧.೯: ಹವಾಮಾನದ ಇತರ ಸಂಗತಿಗಳು–ಮೈಸೂರು

| ಇರುವ ದಿನಗಳು* | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ವಾರ್ಷಿಕ |
|---|---|---|---|---|---|---|---|---|---|---|---|---|---|
| ಸಿಡಿಲು ಬಿರುಗಾಳಿ | ೦.೨ | ೦.೫ | ೨.೦ | ೮.೦ | ೧೨.೦ | ೨.೦ | ೦.೮ | ೨.೦ | ೩.೦ | ೫.೦ | ೧.೨ | ೦.೩ | ೩೭.೦ |
| ಆಲಿಕಲ್ಲು | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ |
| ಧೂಳಿನ ಬಿರುಗಾಳಿ | ೦.೦ | ೦.೦ | ೦.೦ | ೦.೦ | ೦.೯ | ೦.೦ | ೦.೦ | ೦.೦ | ೦.೦ | ೦.೦ | ೦.೧ | ೦.೧ | ೧.೧ |
| ಚಂಡ ಮಾರುತ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ | ೦.೦ |
| ಮಂಜು | ೧.೦ | ೧.೦ | ೦.೮ | ೦.೨ | ೦.೧ | ೦.೦ | ೦.೦ | ೦.೦ | ೦.೦ | ೦.೯ | ೧.೭ | ೦.೭ | ೭.೦ |

** ಎರಡು ದಿವಸಗಳಿಗಿಂತ ಹೆಚ್ಚಿನ ದಿವಸಗಳಲ್ಲಿ ಬಂದಲ್ಲಿ ಪೂರ್ಣ ಸಂಖ್ಯೆಗಳಲ್ಲಿ ಕೊಟ್ಟಿದೆ.*

*ಆಧಾರ: ಭಾರತ ಹವಾಮಾನ ಇಲಾಖೆ, ಭಾರತ ಸರ್ಕಾರ ೧೯೮೪*

## ಕೋಷ್ಟಕ ೧.೧೦: ಮಳೆ ಮಾಪನ ಕೇಂದ್ರವಾರು ಬಿದ್ದ ಒಟ್ಟು ಮಳೆ ಮಿ. ಮೀ.

| ಕ್ರ.ಸಂ. | ವಿವರ | ೨೦೦೫ | | ೨೦೦೬ | | ೨೦೦೭ | |
|---|---|---|---|---|---|---|---|
| | | ಮಳೆಯಾದ ದಿನಗಳು | ಮಳೆ ಮಿ.ಮೀ. | ಮಳೆಯಾದ ದಿನಗಳು | ಮಳೆ ಮಿ.ಮೀ. | ಮಳೆಯಾದ ದಿನಗಳು | ಮಳೆ ಮಿ.ಮೀ. |
| **I** | **ಚಾಮರಾಜನಗರ ತಾಲೂಕು** | | | | | | |
| ೧. | ಚಾಮರಾಜನಗರ | ೭೧ | ೧,೧೪೫ | ೩೫ | ೫೪೪ | ೫೩ | ೭೭೫ |
| ೨. | ಹರದನಹಳ್ಳಿ | ೬೬ | ೧,೨೯೭ | ೪೩ | ೪೯೦ | ೪೬ | ೭೪೭ |
| ೩. | ಕುದೇರು | ೫೩ | ೧,೧೬೪ | ೩೩ | ೫೦೯ | ೪೮ | ೭೧೩ |
| ೪. | ಮಂಗಳ | ೫೭ | ೧,೧೭೬ | ೩೦ | ೫೫೦ | ೩೫ | ೬೦೮ |
| ೫. | ಸುವರ್ಣಾವತಿ | ೭೩ | ೧,೨೫೯ | ೪೮ | ೭೨೭ | ೪೮ | ೭೨೫ |
| ೬. | ಉಡಿಗಾಲ | ೬೭ | ೧,೦೬೦ | ೩೯ | ೫೧೦ | ೫೯ | ೮೩೮ |
| ೭. | ಉಮ್ಮತ್ತೂರು | ೪೩ | ೧,೦೬೦ | ೨೩ | ೫೬೪ | ೩೨ | ೫೧೮ |
| ೮. | ಕಾಗಲವಾಡಿ | ೬೫ | ೧,೦೭೩ | ೩೧ | ೬೪೨ | ೪೩ | ೬೬೪ |
| **II** | **ಗುಂಡ್ಲುಪೇಟೆ ತಾಲೂಕು** | | | | | | |
| ೧. | ಬಂಡೀಪುರ | ೯೩ | ೧,೪೫೩ | ೭೨ | ೮೩೦ | ೮೦ | ೧,೧೩೦ |
| ೨. | ಬೇಗೂರು | ೫೪ | ೭೫೨ | ೪೭ | ೬೨೮ | ೫೮ | ೯೪೫ |
| ೩. | ಗುಂಡ್ಲುಪೇಟೆ | ೭೨ | ೧,೦೧೧ | ೩೪ | ೫೪೪ | ೪೮ | ೧,೧೯೦ |
| ೪. | ಕುಂದರಕೆರೆ | ೬೭ | ೧,೨೧೩ | ೩೫ | ೫೮೦ | ೪೮ | ೬೭೮ |
| ೫. | ಮೂಲೆಹೊಳೆ | ೯೪ | ೧,೪೨೧ | ೯೦ | ೧,೫೫೩ | ೭೯ | ೧,೩೭೨ |
| ೬. | ತೆರಕಣಾಂಬಿ | ೫೮ | ೧,೦೩೬ | ೪೦ | ೫೭೦ | ೫೪ | ೮೬೯ |
| ೭. | ಹಂಗಲ | ೬೬ | ೧,೧೮೦ | ೪೬ | ೭೩೭ | ೪೫ | ೮೪೯ |
| ೮. | ಮುಖಹಳ್ಳಿ | ೫೫ | ೭೪೦ | ೫೨ | ೬೫೯ | ೪೯ | ೬೭೨ |

| ಕ್ರ.ಸಂ. | ವಿವರ | ೨೦೦೫ | | ೨೦೦೬ | | ೨೦೦೭ | |
|---|---|---|---|---|---|---|---|
| | | ಮಳೆಯಾದ ದಿನಗಳು | ಮಳೆ ಮಿ.ಮೀ. | ಮಳೆಯಾದ ದಿನಗಳು | ಮಳೆ ಮಿ.ಮೀ. | ಮಳೆಯಾದ ದಿನಗಳು | ಮಳೆ ಮಿ.ಮೀ. |
| **III** | ಕೊಳ್ಳೇಗಾಲ ತಾಲೂಕು | | | | | | |
| ೧. | ಬೈಲೂರು | ೬೬ | ೧,೪೦೩ | ೩೯ | ೯೦೫ | ೬೯ | ೧,೨೦೭ |
| ೨. | ಗಾಜನೂರು | ೮೩ | ೯೦೦ | ೩೯ | ೪೮೭ | ೫೧ | ೯೨೪ |
| ೩. | ಬ.ಗುಂಡಾಪುರ | ೬೪ | ೧,೦೪೧ | ೩೦ | ೩೪೬ | ೫೨ | ೬೬೪ |
| ೪. | ಹನೂರು | ೬೩ | ೧,೬೨೩ | ೩೧ | ೪೯೪ | – | – |
| ೫. | ಕೊಳ್ಳೇಗಾಲ | ೬೫ | ೧,೦೮೬ | ೨೪ | ೩೯೯ | ೫೦ | ೭೫೫ |
| ೬. | ಲೊಕ್ಕನಹಳ್ಳಿ | ೫೩ | ೯೨೦ | ೩೩ | ೫೫೪ | ೩೮ | ೭೩೭ |
| ೭. | ಮುಡಿಗುಂಡಂ | ೫೭ | ೧,೧೧೧ | ೨೬ | ೪೩೪ | ೪೬ | ೬೦೪ |
| ೮. | ಮಾರತಹಳ್ಳಿ | ೬೩ | ೧,೨೫೬ | ೪೨ | ೬೬೧ | ೫೪ | ೯೧೩ |
| ೯. | ಮ.ಮ. ಬೆಟ್ಟ | ೭೫ | ೧,೫೮೦ | ೪೪ | ೮೬೦ | ೫೧ | ೮೯೪ |
| ೧೦. | ಸಗ್ಗಿಯಂ | ೬೦ | ೧,೧೧೪ | ೩೧ | ೪೦೧ | ೪೭ | ೭೧೩ |
| ೧೧. | ಗುಂಡಾಲ | ೭೬ | ೧,೩೨೬ | ೪೧ | ೭೦೫ | ೫೫ | ೭೨೫ |
| **IV** | ಯಳಂದೂರು ತಾಲೂಕು | | | | | | |
| ೧. | ಬಿ. ಆರ್. ಬೆಟ್ಟ | ೯೫ | ೧,೮೫೩ | ೫೦ | ೯೫೪ | ೫೩ | ೧,೫೪೪ |
| ೨. | ಯಳಂದೂರು | ೬೩ | ೧,೧೮೩ | ೪೨ | ೫೫೭ | ೪೯ | ೭೬೧ |

******